ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 8 ಶನಿವಾರ 2022

ಸಂಪುಟ: 43 | ಸಂಚಿಕೆ: 172 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಟಿಪ್ಪು ಎಕ್ಸ್‌ಪ್ರೆಸ್ ಇನ್ನು 'ಒಡೆಯರ್ ಎಕ್ಸ್‌ಪ್ರೆಸ್', ತಾಳಗುಪ್ಪ ಎಕ್ಸ್‌ಪ್ರೆಸ್ ಈಗ 'ಕುವೆಂಪು ಎಕ್ಸ್‌ಪ್ರೆಸ್'

ಮೈಸೂರು, ಅ.7(ಆರ್‌ಕೆಬಿ)– ಮೈಸೂರು–ಬೆಂಗಳೂರು ನಡುವೆ ಸಂಚರಿಸುವ ಟಿಪ್ಪು ಎಕ್ಸ್‌ಪ್ರೆಸ್ ರೈಲು 'ಒಡೆಯರ್ ಎಕ್ಸ್‌ಪ್ರೆಸ್' ಹಾಗೂ ಮೈಸೂರು–ತಾಳಗುಪ್ಪ ಎಕ್ಸ್‌ಪ್ರೆಸ್ ರೈಲು 'ಕುವೆಂಪು ಎಕ್ಸ್‌ಪ್ರೆಸ್' ಎಂದು ಹೆಸರು ಬದಲಾಯಿಸಿ ಕೇಂದ್ರ ರೈಲ್ವೆ ಸಚಿವಾಲಯ ಶುಕ್ರವಾರ ಆದೇಶ ಹೊರಡಿಸಿದೆ.

ಮೈಸೂರು ಸಂಸ್ಥಾನದ ಯದುವಂಶದ ಒಡೆಯರ್ ಸತ್ಕಾರ್ಯಗಳನ್ನು ಸ್ಮರಿಸುವ ನಿಟ್ಟಿನಲ್ಲಿ ಟಿಪ್ಪು ಎಕ್ಸ್‌ಪ್ರೆಸ್ ರೈಲಿಗೆ ಒಡೆಯರ್ ಹೆಸರು ಹಾಗೂ ಶಿವಮೊಗ್ಗ ಹಾಗೂ ಮೈಸೂರಿನೊಂದಿಗೆ ಅವಿನಾಭಾವ ನಂಟುಳ್ಳ ರಾಷ್ಟ್ರಕವಿ ಕುವೆಂಪು ಅವರ ಹೆಸರನ್ನು 'ಮೈಸೂರು–ತಾಳಗುಪ್ಪ' ರೈಲಿಗಿಡುವುದು ಸೂಕ್ತ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಪ್ರಸ್ತಾವ ಸಲ್ಲಿಸಿದ್ದರು. ಇದನ್ನು ಅನುಮೋದಿಸಿದ್ದ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ರೈಲುಗಳ ಹೆಸರು ಬದಲಿಸಲು ಹಸಿರು ನಿಶಾನೆ ತೋರಿದ್ದರು. ಈ ಸಂಬಂಧ ಕೇಂದ್ರ ರೈಲ್ವೆ ಸಚಿವಾಲಯದಿಂದ ಈಗ ಅಧಿಕೃತ ಆದೇಶ ಪ್ರಕಟವಾಗಿದ್ದು, ಇನ್ನು ಮುಂದೆ 'ಒಡೆಯರ್ ಎಕ್ಸ್‌ಪ್ರೆಸ್' ಹಾಗೂ 'ಕುವೆಂಪು ಎಕ್ಸ್‌ಪ್ರೆಸ್' ಹೆಸರಿನಲ್ಲಿಯೇ ಎರಡೂ ರೈಲುಗಳು ಕಾರ್ಯಾಚರಣೆ ನಡೆಸಲು ತುರ್ತು ಸೂಕ್ತ ಕ್ರಮ ವಹಿಸುವಂತೆ ರೈಲ್ವೆ ಮಂಡಳಿಯ ಡೆಪ್ಯೂಟಿ ಡೈರೆಕ್ಟರ್ ರಾಜೇಶ್ ಕುಮಾರ್, ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕರಿಗೆ ▶ 9ನೇ ಪುಟಕ್ಕೆ





ಸಂಸದ ಪ್ರತಾಪ್‌ಸಿಂಹ ಅವಿರತ ಪ್ರಯತ್ನದ ಫಲ



ಈ ಎರಡು ರೈಲುಗಳ ಹೆಸರು ಬದಲಾವಣೆಗೆ ಸಂಸದ ಪ್ರತಾಪ್‌ಸಿಂಹ ಕೆಲ ತಿಂಗಳ ಹಿಂದೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಮನವಿ ಸಲ್ಲಿಸಿದ್ದರು.

"ಮೈಸೂರು ಎಂದಾಕ್ಷಣ 'ಒಡೆಯರ್' ನಾಮಸ್ಮರಣೆ ಆಗ ಬೇಕೆಂಬ ನಿಟ್ಟಿನಲ್ಲಿ ಮೈಸೂರು–ಬೆಂಗಳೂರು ನಡುವೆ ಸಂಚರಿಸುವ ಎಕ್ಸ್‌ಪ್ರೆಸ್ ರೈಲಿಗೆ ಆ ಹೆಸರು ನಾಮಕರಣ ಮಾಡಿರುವುದು ಖುಷಿಯ ವಿಚಾರ. ಈ ಸಂದರ್ಭದಲ್ಲಿ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಜಿ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ನನ್ನ ಪ್ರಯತ್ನಕ್ಕೆ ಒತ್ತಾಸೆಯಾಗಿ ಸಹಕರಿಸಿದ ಕೇಂದ್ರ ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

–ಸಂಸದ ಪ್ರತಾಪ್ ಸಿಂಹ

ರಾಜ್ಯ ಸರ್ಕಾರದ ಮಹತ್ವದ ನಿರ್ಧಾರ

ಎಸ್‌ಸಿ ಶೇ.15ರಿಂದ 17, ಎಸ್‌ಟಿ ಶೇ.3ರಿಂದ 7ಕ್ಕೆ ಮೀಸಲಾತಿ ಹೆಚ್ಚಳ

- ವಿಧಾನಮಂಡಲದ ಉಭಯ ಸದನಗಳ ನಾಯಕರು, ಆಯಾಯ ಸಮುದಾಯಗಳ ನಾಯಕರ ಸಭೆ ನಂತರ ಸಿಎಂ ಬೊಮ್ಮಾಯಿ ಮಾಹಿತಿ
- ಇಂದು ನಡೆಯುವ ತುರ್ತು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯದ ನಂತರ ಅಧಿಕೃತ ಆದೇಶ
- ಇದರೊಂದಿಗೆ ಪರಿಶಿಷ್ಟ ಸಮುದಾಯಗಳ ಮೀಸಲಾತಿ ಪ್ರಮಾಣ ಶೇ.18 ರಿಂದ 24ಕ್ಕೆ ಹೆಚ್ಚಳ
- ನ್ಯಾ.ನಾಗಮೋಹನ ದಾಸ್ ವರದಿ ಅನ್ವಯ ಮೀಸಲಾತಿ ಏರಿಕೆ; ಸುಪ್ರೀಂ ಕೋರ್ಟ್ ಆದೇಶವನ್ನು ಆಧರಿಸಿ ನಿರ್ಣಯ



ಬೆಂಗಳೂರು, ಅ.7(ಕೆಎಂಶಿ)–ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಶೇ.18 ರಿಂದ 24ಕ್ಕೆ ಹೆಚ್ಚಿಸುವ ಮಹತ್ವದ ತೀರ್ಮಾನವನ್ನು ರಾಜ್ಯ ಸರ್ಕಾರ ಕೈಗೊಂಡಿದೆ.

ಈ ಸಂಬಂಧ ನಾಳೆ ನಡೆಯುವ ತುರ್ತು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ, ನಿರ್ಣಯ ಕೈಗೊಂಡು ಸರ್ಕಾರದ ಅಧಿಕೃತ ಮುದ್ರೆ ಹೊರಬೀಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ವಿಧಾನ ಮಂಡಲದ ಉಭಯ ಸದನಗಳ ನಾಯಕರು ಹಾಗೂ ಆ ಸಮುದಾಯಕ್ಕೆ ಸೇರಿದ ಜನಪ್ರತಿನಿಧಿಗಳು ಮತ್ತು ಕಾನೂನು ತಜ್ಞರ ಜೊತೆ ಚರ್ಚೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್ ಆಯೋಗದ ಶಿಫಾರಸ್ಸಿನಂತೆ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇಕಡ 15 ರಿಂದ 17ಕ್ಕೂ ಮತ್ತು ಪರಿಶಿಷ್ಟ ▶ 9ನೇ ಪುಟಕ್ಕೆ

ಯಶಸ್ವಿ ಜಂಬೂಸವಾರಿ ರುವಾರಿಗಳು ಮರಳಿ ಕಾಡಿಗೆ

● ದಸರಾ ಗಜಪಡೆಗೆ ಹೃದಯಸ್ಪರ್ಶಿ ಬೀಳ್ಕೊಡುಗೆ ● ಮಾವುತರು, ಕಾವಾಡಿಗಳ ಪರಿವಾರದ ಹೃದಯ ಭಾರ!





ಮೈಸೂರು, ಅ.7(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ ಅಭಿಮನ್ಯು ನೇತೃತ್ವದ 15 ಆನೆಗಳಿಗೆ ಶುಕ್ರವಾರ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಹೃದಯ ಸ್ಪರ್ಶಿ ಬೀಳ್ಕೊಡುಗೆ ನೀಡಲಾಯಿತು.

ಅ.5ರಂದು ನಡೆದ ಜಂಬೂಸವಾರಿ ಮೆರವಣಿಗೆಯಲ್ಲಿ ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿ, ಸೈ ಎನಿಸಿಕೊಂಡಿದ್ದ ಗಜಪಡೆ ಗುರುವಾರ ದಿನವಿಡೀ ಅರಮನೆ ಆವರಣದಲ್ಲಿ ರಿಲ್ಯಾಕ್ಸ್ ಮೂಡ್‌ನಲ್ಲಿದ್ದವು. ಸುರಕ್ಷತೆಯ ದೃಷ್ಟಿಯಿಂದ ಇಂದು ಮಧ್ಯಾಹ್ನ ಎಲ್ಲಾ ಆನೆಗಳನ್ನು ಅರಮನೆಯಿಂದ ಬೀಳ್ಕೊಡಲಾಯಿತು. ಎಲ್ಲಾ ಆನೆಗಳು ಲಾರಿಯಲ್ಲಿ ಸ್ವಸ್ಥಾನಗಳಿಗೆ ಪ್ರಯಾಣ ಬೆಳೆಸಿದವು.

ಸಾಂಪ್ರದಾಯಿಕ ಪೂಜೆ: ಅರಮನೆಯ ಆವರಣದಲ್ಲಿ ಇಂದು ಬೆಳಗ್ಗೆ 9.40ರಿಂದ 10.25ರವರೆಗೆ ಸಂದ ತುಲಾ ಲಗ್ನದಲ್ಲಿ ಅಭಿಮನ್ಯು ನೇತೃತ್ವದ ಗಜಪಡೆಗೆ ಪೂಜೆ ಸಲ್ಲಿಸಲಾಯಿತು. ಅರ್ಚಕ ಎಸ್.ವಿ.ಪ್ರಹ್ಲಾದ ರಾವ್ ಎಲ್ಲಾ ಆನೆಗಳ ಪಾದ ತೊಳೆದು ಅರಿಶಿನ, ಕುಂಕುಮ, ಗಂಧ ಹಚ್ಚಿ, ವಿವಿಧ ಹೂಗಳಿಂದ ಸಂಕಲ್ಪ ಮಾಡಿ, ಶೋಡಶೋಪಚಾರ ಪೂಜೆ, ಗಣಪತಿ ಪೂಜೆ, ಮಂತ್ರ ಪುಷ್ಪ, ಅರ್ಚನೆ ಮಾಡಿ, ನೈವೇದ್ಯ ಸಮರ್ಪಿಸಿದರು. ಬಳಿಕ ಪಂಚಫಲ, ಕಬ್ಬು, ಬೆಲ್ಲ ಹಾಗೂ ವಿವಿಧ ಬಗೆಯ ಹಣ್ಣುಗಳನ್ನು ಆನೆಗಳಿಗೆ ನೀಡಿದರು. ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಸಿಎಫ್ ಡಾ. ಮಾಲತಿ ಪ್ರಿಯಾ, ಡಿಸಿಎಫ್ ಡಾ.ವಿ.ಕರಿಕಾಳನ್, ಕೆ.ಕವಲಾ ಕರಿಕಾಳನ್, ಅರಮನೆ ಆಡಳಿತ ಮಂಡಳಿಯ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಸೇರಿದಂತೆ ಇನ್ನಿತರರು ಆನೆಗಳಿಗೆ ಹಣ್ಣುಗಳನ್ನು ನೀಡಿ, ಶುಭ ಕೋರಿದರು.

ಮಧ್ಯಾಹ್ನ 1.25ರಲ್ಲಿ ಜಯಮಾರ್ತಾಂಡ ಗೇಟ್‌ನಿಂದ ಆನೆಗಳ ಹೊತ್ತ ಲಾರಿಗಳು ಅರಮನೆಯಿಂದ ಒಂದೊಂದಾಗಿ ಹೊರಟವು. ಹಾರ್ಡಿಂಗ್ ವೃತ್ತ ಬಳಸಿಕೊಂಡು ಗನ್‌ಹೌಸ್, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದ ಮೂಲಕ ಸಾಗಿ ವಿವಿಧ ಕ್ಯಾಂಪ್‌ಗಳತ್ತ ಪ್ರಯಾಣ ಬೆಳೆಸಿದವು. ಗಜಪಡೆಯ ನಾಯಕ ಅಭಿಮನ್ಯು, ಭೀಮಾ, ಮಹೇಂದ್ರ, ಗೋಪಾಲಸ್ವಾಮಿ ಮತ್ತಿಗೂಡು ಕ್ಯಾಂಪ್‌ಗೆ, ಮಾಜಿ ನಾಯಕ ಅರ್ಜುನ ಬಳ್ಳೆ ಕ್ಯಾಂಪ್‌ಗೆ ತೆರಳಿದರೆ, ದುಬಾರೆಗೆ ಕಾವೇರಿ, ವಿಜಯ, ಗೋಪಿ, ಧನಂಜಯ, ಶ್ರೀರಾಮ, ಸುಗ್ರೀವ ಹಾಗೂ ಬಂಡೀಪುರದ ರಾಂಪುರ ಕ್ಯಾಂಪ್‌ಗೆ ಪಾರ್ಥಸಾರಥಿ ತೆರಳಿದವು.

ಉಪಹಾರ: ಜಿಲ್ಲಾಡಳಿತ ಇಂದು ದಸರಾ ಆನೆಗಳ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬ ಸದಸ್ಯರಿಗೆ ಉಪಹಾರ ಕೂಟ ಏರ್ಪಡಿಸಿತ್ತು. ಉಪಾಹಾರ ಸೇವನೆ ನಂತರ ಸ್ವಸ್ಥಾನಕ್ಕೆ ಹೊರಡಲು ಅಣಿಯಾದರು.

ಗೌರವ ಧನ: ದಸರಾ ಆನೆಗಳ ಮಾವುತರು ಮತ್ತು ಕಾವಾಡಿಗಳು, ವಿಶೇಷ ಮಾವುತರಿಗೆ ಅರಮನೆ ಮಂಡಳಿಯಿಂದ ತಲಾ 10 ಸಾವಿರ ರೂ, ಗೌರವಧನ ನೀಡಿ, ಗೌರವಿಸಲಾಯಿತು. ದಸರಾ ಗಜಪಡೆಯ ಮಾವುತರು, ಕಾವಾಡಿಗಳು, ಆಹಾರ ತಯಾರಕರು, ವಿಶೇಷ ಮಾವುತರು, ಸಹಾಯಕರು ಸೇರಿದಂತೆ 50 ಮಂದಿಗೆ ತಲಾ 10 ಸಾವಿರ ರೂ.ನಂತೆ 5 ಲಕ್ಷ ರೂ. ಗೌರವಧನವನ್ನು ಅರಮನೆ ಮಂಡಳಿ ವಿತರಿಸಿತು.

60 ದಿನ ಮೈಸೂರಲ್ಲಿ ವಾಸ್ತವ್ಯ: ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷದಿಂದ ಮೈಸೂರು ಅರಮನೆಗೆ ಸೀಮಿತವಾಗಿದ್ದ ಜಂಬೂಸವಾರಿ ಮೆರವಣಿಗೆ ಈ ಬಾರಿ ಅದ್ಧೂರಿಯಾಗಿ ನಡೆಸಲು ಸರ್ಕಾರ ನಿರ್ಧರಿಸಿತ್ತು. ಈ ಹಿನ್ನೆಲೆಯಲ್ಲಿ ಆ.7ರಂದು ಅಂಬಾರಿ ಆನೆ ಅಭಿಮನ್ಯು ನೇತೃತ್ವದಲ್ಲಿ ಮೊದಲ ತಂಡದಲ್ಲಿ 9 ಆನೆಗಳನ್ನು ಕರೆತರಲಾಗಿತ್ತು. ಎರಡನೇ ತಂಡದಲ್ಲಿ ಐದು ಆನೆಗಳು ಸೆ.7ರಂದು ಮೈಸೂರು ಅರಮನೆ ಆವರಣ ತಲುಪಿದ್ದವು. ಮೊದಲ ತಂಡದ ಆನೆಗಳು 60 ದಿನ, ಎರಡನೇ ತಂಡದ ಆನೆಗಳು 30 ದಿನ ಅರಮನೆ ಆವರಣದಲ್ಲಿ ಬೀಡು ಬಿಟ್ಟಿದ್ದವು. 40 ದಿನಗಳ ಕಾಲ ಅರಮನೆಯ ಅಂಗಳದಲ್ಲಿ ಬೀಡುಬಿಟ್ಟಿದ್ದ ಆನೆಗಳು ಇಂದು ಕಾಡಿಗೆ ತೆರಳುವಾಗ ನೆರೆದಿದ್ದ ಸಾಕಷ್ಟು ಸಂಖ್ಯೆಯ ಜನರು ಭಾವುಕರಾದರು. ಅವರ ಕಂಗಳಲ್ಲಿ ನೀರಾಡಿತು.

ಈ ಸಂದರ್ಭದಲ್ಲಿ ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್, ಸಹಾಯಕರಾದ ರಂಗರಾಜು, ಅಕ್ರಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪುತ್ರನೊಂದಿಗೆ ಲಕ್ಷ್ಮಿಯೂ ಪ್ರಯಾಣ



ದಸರಾ ಮಹೋತ್ಸವಕ್ಕೆ ಆಗಮಿಸಿ, ಅರಮನೆ ಆವರಣದಲ್ಲೇ ಗಂಡು ಮರಿಗೆ ಜನ್ಮ ನೀಡಿದ್ದ ಲಕ್ಷ್ಮಿಯನ್ನು ಮಗ ಶ್ರೀ ದತ್ತಾತ್ರೇಯನೊಂದಿಗೆ ಬೆಳಗ್ಗೆ 7.30ಕ್ಕೆ ಅರಮನೆಯಿಂದ ಕಳುಹಿಸಲಾಯಿತು. 2018ರಲ್ಲಿ ದಸರಾ ಮಹೋತ್ಸವಕ್ಕೆ ಮೊದಲ ಬಾರಿಗೆ ಆಗಮಿಸಿದ್ದ ಲಕ್ಷ್ಮೀ, ವಾಪಸ್ಸಾಗುವಾಗ ಲಾರಿ ಹತ್ತಲು ಎರಡು ಗಂಟೆ ಸತಾಯಿಸಿತ್ತು. ಈ ಬಾರಿಯೂ 10 ನಿಮಿಷ ಹಿಂದೇಟು ಹಾಕಿದಳು. ಬಳಿಕ ಮರಿ ಶ್ರೀ ದತ್ತಾತ್ರೇಯನನ್ನು ಲಾರಿಯೊಳಗೆ ಮೊದಲು ಇರಿಸಲಾಯಿತು. ಬಳಿಕ ಲಕ್ಷ್ಮೀ ಲಾರಿ ಏರಿದಳು. ಮತ್ತೊಂದು ಲಾರಿಯಲ್ಲಿ ಕುಮ್ಕಿ ಆನೆ ಚೈತ್ರಳನ್ನು ಬೆಳಗ್ಗೆಯೇ ಬಂಡೀಪುರದ ರಾಂಪುರ ಕ್ಯಾಂಪ್‌ಗೆ ಕಳುಹಿಸಲಾಯಿತು. ಬೆಳಗ್ಗೆ 10ಗಂಟೆಯೊಳಗೆ ತಾಯಿ ಹಾಗೂ ಮರಿಯಾನೆ ಸುರಕ್ಷಿತವಾಗಿ ಕ್ಯಾಂಪ್ ತಲುಪಿದವು.

ಎರಡು ಗಂಟೆ ಕಾಡಿದ ಶ್ರೀರಾಮ, ಅರ್ಧ ಗಂಟೆ ಸತಾಯಿಸಿದ ಸುಗ್ರೀವ



ಮೈಸೂರು, ಅ.7(ಎಂಟಿವೈ)– ದಸರಾ ಮಹೋತ್ಸವಕ್ಕೆ ಇದೇ ಮೊದಲ ಬಾರಿಗೆ ಆಗಮಿಸಿದ್ದ 40 ವರ್ಷದ ಶ್ರೀರಾಮ ಲಾರಿ ಹತ್ತಲು ಹಿಂದೇಟು ಹಾಕಿ, ಸಿಬ್ಬಂದಿಯ ಬೆವರಿಳಿಸಿದ.

ಕೋಡಿ ಸೋಮೇಶ್ವರ ದೇವಾಲಯದ ಬಳಿ ನಿರ್ಮಿಸಿದ್ದ ರ್‍ಯಾಂಪ್ ಮೂಲಕ ಲಾರಿ ಹತ್ತಿಸಲು ಮಾವುತರು, ಕಾವಾಡಿಗಳು ಪರದಾಡಬೇಕಾಯಿತು. ಇತರೆ ಆನೆಗಳಾದ ಗೋಪಿ, ಗೋಪಾಲಸ್ವಾಮಿ, ಧನಂಜಯ ಆನೆಯನ್ನು ಕರೆಸಿ ಶ್ರೀರಾಮನನ್ನು ಲಾರಿಯೊಳಗೆ ತಳ್ಳಲು ಮಾಡಿದ ಯತ್ನವೂ ವಿಫಲವಾಯಿತು. ಆ ಬಳಿಕ ಕೂಂಬಿಂಗ್ ಸ್ಪೆಷಲಿಸ್ಟ್ ಅಭಿಮನ್ಯು ಲಾರಿಗೆ ತಳ್ಳುವ ಪ್ರಯತ್ನ ಮಾಡುವಾಗ ರಭಸವಾಗಿ ಗುದ್ದಿದ ಪರಿಣಾಮ ಶ್ರೀರಾಮನಿಗೆ ಸಣ್ಣ ಗಾಯವಾಯಿತು. ಇದನ್ನು ಗಮನಿಸಿದ ಅದರ ಮಾವುತ ಇತರೆ ಆನೆಗಳ ಮಾವುತರ ಮೇಲೆ ರೇಗಾಡಿದ. ಹಾಗಾಗಿ ಅಭಿಮನ್ಯುವನ್ನು ಮತ್ತೆ ವಾಪಸ್ಸು ಕರೆದೊಯ್ಯಲಾಯಿತು. ಆದರೆ ಶ್ರೀರಾಮನ ಲಾರಿಗೆ ಹತ್ತಿಸುವ ಪ್ರಯತ್ನ ಮುಂದುವರೆಯಿತು. ಸ್ವಲ್ಪ ವಿಶ್ರಾಂತಿ ನೀಡಲು ರ್‍ಯಾಂಪ್‌ನಿಂದ ಕೆಳಗಿಳಿಸುತ್ತಿದ್ದಂತೆಯೇ ಓಡಲಾರಂಭಿಸಿದ ಶ್ರೀರಾಮನನ್ನು ಅದರ ಮಾವುತ ನೀರಿನ ತೊಟ್ಟಿ ಬಳಿ ನಿಯಂತ್ರಿಸಿದ. ಬಳಿಕ ನೀರು ಕುಡಿಸಿ, ಸ್ನಾನ ಮಾಡಿಸಿ ಮತ್ತೆ ಲಾರಿಗೆ ಹತ್ತಿಸಲು ಮಾಡಿದ ಪ್ರಯತ್ನವೂ ವಿಫಲವಾಯಿತು. ಪದೇ ಪದೆ ನೆಲಕ್ಕೊರಗಿ ಮಲಗುತ್ತಿದ್ದ ಶ್ರೀರಾಮನ ವರ್ತನೆ ಮಾವುತರು, ಕಾವಾಡಿಗಳಿಗೆ ಕಠಿಣ ಪರಿಸ್ಥಿತಿ ತಂದೊಡ್ಡಿತು.

ಅಂತಿಮ ಕಾರ್ಯಾಚರಣೆ ಯಶಸ್ವಿ: ಒಂದೂವರೆ ಗಂಟೆ ಸತಾಯಿಸಿದ್ದ ಶ್ರೀರಾಮ ಕೊನೆಗೆ ಎರಡು ಆನೆಗಳ ಮೂಲಕ ಕೊರಳಲ್ಲಿ ಬಿಗಿದ ಹಗ್ಗವನ್ನು ಎಳೆಸಿ, ಹಿಂಬದಿಯಿಂದ ಅಭಿಮನ್ಯು ಮೂಲಕ ತಳ್ಳಲು ನಿರ್ಧರಿಸಲಾಯಿತು. ಇದಕ್ಕಾಗಿ ಅಭಿಮನ್ಯು ಕರೆತರುತ್ತಿರುವುದನ್ನು ಗಮನಿಸಿದ ಶ್ರೀರಾಮ, ಮತ್ತೆ ನೆಲಕ್ಕೆ ಅಂಗಾತ ಮಲಗಿದ. ಇದನ್ನು ಕಂಡ ಇತರೆ ಆನೆಗಳ ಮಾವುತರು ಶ್ರೀರಾಮನ ಹಠಮಾರಿ ಧೋರಣೆ ಕಂಡು ನಗುತ್ತಾ ನಿಂತರು.

ಕೆಲ ಸಮಯದ ನಂತರ ಮತ್ತೆ ಕಾರ್ಯಾಚರಣೆ ಮುಂದುವರೆಸಿ ಮುಂದೆ ಗೋಪಿ, ಗೋಪಾಲಸ್ವಾಮಿ, ಅರ್ಜುನನ ಮೂಲಕ ಹಗ್ಗದಿಂದ ಹಿಂಬದಿ ಅಭಿಮನ್ಯುವಿನಿಂದ ತಳ್ಳಲು ನಿರ್ಧರಿಸಲಾಯಿತು. ಅಂತೂ ಈ ಪ್ರಯತ್ನ ಯಶಸ್ವಿಯಾಗಿ ಎಲ್ಲರೂ ನಿಟ್ಟುಸಿರು ಬಿಡುವಂತಾಯಿತು. ಲಾರಿ ಹತ್ತಿದ ಶ್ರೀರಾಮನನ್ನು ಬಿಗಿಯಾಗಿ ಕಟ್ಟಿ ಲಾರಿಯನ್ನು ಮುಂದೆ ಕೊಂಡೊಯ್ದು ನಿಲ್ಲಿಸಲಾಯಿತು.

ಸುಗ್ರೀವನ ತಂಟೆ: ಶ್ರೀರಾಮನ ಹಠಮಾರಿ ಧೋರಣೆ ಕಂಡಿದ್ದ ಸುಗ್ರೀವ ಸಹ ತಂಟೆ ತೆಗೆದ. ಸುಮಾರು 20 ನಿಮಿಷ ಸತಾಯಿಸಿದ ಸುಗ್ರೀವನನ್ನು ಇತರೆ ಆನೆಗಳಿಂದ ತಳ್ಳಿಸಿ ಲಾರಿ ಹತ್ತಿಸಲಾಯಿತು. ಅಂತಿಮವಾಗಿ ಮಧ್ಯಾಹ್ನ 1.25ಕ್ಕೆ ಬೆಂಗಾವಲು ವಾಹನದೊಂದಿಗೆ ಆಯಾಯ ಕ್ಯಾಂಪ್‌ಗಳಿಗೆ ಆನೆಗಳನ್ನು ಸುರಕ್ಷಿತವಾಗಿ ಕರೆದೊಯ್ಯಲಾಯಿತು.

ಅಭಿಮನ್ಯು ಸಾಮರ್ಥ್ಯದಲ್ಲಿ ನಂಬಿಕೆ ಇತ್ತು; ಆದರೂ ಜಂಬೂ ಸವಾರಿಯಲ್ಲಿ ದುಗುಡವಿತ್ತು

● ಮೈಸೂರು ಜನತೆಗೆ ನಾನು ಚಿರಋಣಿ: ಅಭಿಮನ್ಯು ಮಾವುತ ವಸಂತನ ಮನದ ಮಾತು

● ತಾಯಿ ಚಾಮುಂಡೇಶ್ವರಿ ಆಶೀರ್ವಾದದಿಂದ ಜಂಬೂಸವಾರಿ ಮೆರವಣಿಗೆ ಯಶಸ್ವಿಯಾಗಿ ನಡೆದಿದೆ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಅ.7–ಕಾಡಾನೆ, ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಸಾಕಷ್ಟು ಬಾರಿ ಅಭಿಮನ್ಯು ಜೊತೆ ಪಾಲ್ಗೊಂಡಿದ್ದರೂ ಲಕ್ಷಾಂತರ ಮಂದಿ ಪಾಲ್ಗೊಂಡಿದ್ದ ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊತ್ತ ಅಭಿಮನ್ಯುವನ್ನು ಮುನ್ನಡೆಸುವಾಗ ಆತಂಕ, ದುಗುಡವಿತ್ತು. ಮೈಸೂರು ಜನತೆಯ ಸಹಕಾರ ಹಾಗೂ ತಾಯಿ ಚಾಮುಂಡೇಶ್ವರಿಯ ಕೃಪಾಕಟಾಕ್ಷದಿಂದ ಜಂಬೂಸವಾರಿ ಯಶಸ್ವಿಯಾಗಿ ನೆರವೇರಿದೆ ಎಂದು ಅಂಬಾರಿ ಆನೆ ಅಭಿಮನ್ಯುವಿನ ಮಾವುತ ವಸಂತ ಧನ್ಯತಾಭಾವ ತಾಳಿದ್ದಾರೆ.

ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊತ್ತು ಸಾಗುವ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಿರುವ ಅಭಿಮನ್ಯು ವರ್ತನೆ ಕುರಿತಂತೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ನಾನು 23 ವರ್ಷದಿಂದ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದೇನೆ. ಸಾಲಾನೆ, ನಿಶಾನೆ ಆನೆ, ಆನೆ ಗಾಡಿ ಕೊಂಡೊಯ್ಯುವ ಜವಾಬ್ದಾರಿಯನ್ನು ಮುನ್ನಡೆಸಿದ್ದೇನೆ. ಆದರೆ, ಈ ಬಾರಿ ಕಂಡಷ್ಟು ಜನರ ಯಾವ ದಸರಾದಲ್ಲೂ ನಾನು ನೋಡಿರಲಿಲ್ಲ.



ಜಂಬೂಸವಾರಿಯಲ್ಲಿ ಚಿನ್ನದ ಅಂಬಾರಿ ಹೊತ್ತು ಯಶಸ್ವಿಯಾಗಿ ಸಾಗಿದ ಅಭಿಮನ್ಯುವಿನೊಂದಿಗೆ ಮಾವುತ ವಸಂತ್ ಹಾಗೂ ಕಾವಾಡಿ ರಾಜು.

ಅಭಿಮನ್ಯು ನಮ್ಮ ಹೆಮ್ಮೆ. ಟಿಂಬರ್ ಎತ್ತುವುದು, ಕಾಡಾನೆ, ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಸಾಕಷ್ಟು ಬಾರಿ ಪಾಲ್ಗೊಂಡಿದೆ. ಕಳೆದ ಎರಡು ವರ್ಷ ಅರಮನೆ ಆವರಣಕ್ಕೆ ಜಂಬೂಸವಾರಿ ಸೀಮಿತವಾಗಿತ್ತು. ಈ ಬಾರಿ ಬನ್ನಿಮಂಟಪದವರೆಗೆ ಮೆರವಣಿಗೆ ಸಾಗಿತು. ರಸ್ತೆಯುದ್ದಕ್ಕೂ ಅಪಾರ ಸಂಖ್ಯೆಯಲ್ಲಿ ಜನ ಸೇರಿದ್ದರು. ಅಷ್ಟು ಜನರ ಮಧ್ಯೆ ಆನೆಯನ್ನು ಕೊಂಡೊಯ್ಯುವುದು ಸುಲಭವಲ್ಲ. ಅನುಭವ ಇದ್ದರೂ, ಭಯ ಕಾಡುತ್ತಲೇ ಇತ್ತು. ನೆರೆದಿದ್ದ ಜನ ತಾಯಿ ಚಾಮುಂಡೇಶ್ವರಿಗೆ ಜೈಕಾರ ಹಾಕುತ್ತಲೇ ಇದ್ದರು. ಅರಣ್ಯ ಇಲಾಖೆಯ ಅಧಿಕಾರಿಗಳು, ಇತರೆ ಆನೆಗಳ ಮಾವುತರು, ಕಾವಾಡಿಗಳು ನೀಡಿದ ಬೆಂಬಲ ನನಗೆ ಸ್ಫೂರ್ತಿ ತುಂಬಿತು. ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಹೊತ್ತ ಅಭಿಮನ್ಯುಗೆ ನಾಡದೇವಿಯ ಆಶೀರ್ವಾದ ದೊರೆತಿದ್ದರಿಂದ ಜಂಬೂಸವಾರಿ ಮೆರವಣಿಗೆ ನಿರ್ವಿಘ್ನವಾಗಿ ನೆರವೇರಲು ಸಾಧ್ಯವಾಯಿತು ಎಂದರು. ಅಂಬಾರಿ ವಾಲುವ ಸಂದರ್ಭ ಎದುರಾದಾಗ ತಾನೇ ಅಂಬಾರಿಯನ್ನು ಸರಿಪಡಿಸಿಕೊಂಡು ಮುಂದೆ ಸಾಗುವ ಮೂಲಕ ನನಗೂ ಆತ್ಮವಿಶ್ವಾಸ ತುಂಬಿದನು. ಅನೇಕರು ನನಗೆ ಮೆರವಣಿಗೆಯುದ್ದಕ್ಕೂ ನಗುವಂತೆ ಹೇಳುತ್ತಿದ್ದರು. ಆದರೆ ನನಗೆ ಮನದೊಳಗೆ ದುಗುಡವಿತ್ತು, ನಗುವುದು ಹೇಗೆ ಸಾಧ್ಯ ಹೇಳಿ ಎಂದು ಪ್ರಶ್ನಿಸಿದರು.

ನಮ್ಮಿಬ್ಬರದ್ದು ಒಂದೇ ಜೀವ: ನನ್ನದು, ಅಭಿಮನ್ಯುವಿನದು ಎರಡು ದೇಹ, ಆದರೆ ನಮ್ಮಿಬ್ಬರದೂ ಒಂದೇ ಜೀವ. ಹಲವು ಸಂದರ್ಭದಲ್ಲಿ ಚಾಣಾಕ್ಷತನದಿಂದ ಕಾಡಾನೆ ಮತ್ತು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳುವ ಅಭಿಮನ್ಯು, ಜಂಬೂಸವಾರಿಯಲ್ಲೂ ಅಂಬಾರಿ ಹೊತ್ತು ಸಾಧನೆ ಮಾಡಿದ್ದಾನೆ. ಅಭಿಮನ್ಯುವನ್ನು ಸೆರೆ ಹಿಡಿದ ನಂತರ ನಮ್ಮ ತಂದೆ ಸಣ್ಣಪ್ಪ ಇವನ ಮಾವುತರಾಗಿ ಪಾಲನೆ ಮಾಡುತ್ತಿದ್ದರು. ನಾನು ಚಿಕ್ಕವನಿದ್ದಾಗಿನಿಂದಲೇ ತಂದೆಯೊಂದಿಗೆ ಅಭಿಮನ್ಯುವಿನ ಜೊತೆ ಒಡನಾಟ ಇಟ್ಟುಕೊಂಡಿದ್ದೆ. ಇದರಿಂದ ಅಭಿಮನ್ಯು ಸ್ವಭಾವ ಅರಿಯಲು ಸಹಕಾರಿಯಾಯಿತು. ತಂದೆ ನಿವೃತ್ತಿಯಾದ ನಂತರ ಅಭಿಮನ್ಯುವಿನ ನಿರ್ವಹಣೆಯನ್ನು ಅರಣ್ಯ ಇಲಾಖೆ ನನಗೆ ನೀಡಿದೆ. ತಂದೆ ಸಣ್ಣಪ್ಪ ಅಭಿಮನ್ಯುವನ್ನು ಪ್ರೀತಿಸುತ್ತಿದ್ದಂತೆ ನಾನೂ ಸಹ ಅಭಿಮನ್ಯುವನ್ನು ತುಂಬಾ ಪ್ರೀತಿ ಮತ್ತು ಗೌರವದಿಂದ ನೋಡಿಕೊಳ್ಳುತ್ತಿದ್ದೇನೆ. ನಮ್ಮಿಬ್ಬರ ಸಂಬಂಧ ಅತ್ಯುತ್ತಮವಾಗಿದೆ. ಈ ಹಿಂದೆ ಜಂಬೂಸವಾರಿಯಲ್ಲಿ ಕರ್ನಾಟಕ ಪೊಲೀಸ್ ಬ್ಯಾಂಡ್‌ನ ವಾದ್ಯಗೋಷ್ಠಿ ಗಾಡಿ (ಸಾರೋಟ್)ಯನ್ನು ಯಶಸ್ವಿಯಾಗಿ ಎಳೆದು ಸೈ ಎನಿಸಿಕೊಂಡಿದ್ದ ಅಭಿಮನ್ಯು, ಶ್ರೀರಂಗಪಟ್ಟಣದ ದಸರೆಯಲ್ಲಿ ನಾಲ್ಕು ವರ್ಷ ಅಂಬಾರಿ ಹೊತ್ತ ಅನುಭವ ಹೊಂದಿದ್ದಾನೆ. ಕಳೆದ 2 ವರ್ಷದಿಂದ ದಸರಾ ಮಹೋತ್ಸವದಲ್ಲಿ ಚಿನ್ನದ ಅಂಬಾರಿ ಹೊರುವ ಜವಾಬ್ದಾರಿ ನಿಭಾಯಿಸಿದ್ದ. ಅಲ್ಲದೇ ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ ಸೇರಿದಂತೆ ಇನ್ನಿತರೆಡೆ 150ಕ್ಕೂ ಹೆಚ್ಚು ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಿ ಪಾಲ್ಗೊಂಡು ಪುಂಡಾಟಿಕೆ ಮೆರೆಯುವ ಆನೆಗಳನ್ನು ಸೆರೆ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇದಲ್ಲದೇ ವಿವಿಧೆಡೆ 50ಕ್ಕೂ ಹೆಚ್ಚು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವ ಅನುಭವ ಹೊಂದಿದೆ. ಈ ಎಲ್ಲಾ ಯಶಸ್ವಿ ಕಾರ್ಯಾಚರಣೆಯಲ್ಲಿ ಅಭಿಮನ್ಯುವಿನ ಮಾವುತ ವಸಂತ್ ಹಾಗೂ ಕಾವಾಡಿ ರಾಜು ಚಾಕಚಕ್ಯತೆ ಪ್ರಮುಖವಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.10.2022 ಶನಿವಾರ, ಮಳೆ ನಕ್ಷತ್ರ: ಹಸ್ತ 27.09.2022 ರಿಂದ 10.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ : ಪೂಭಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಇವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಲಕ್ಷ್ಮಿವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ಬ್ರಹ್ಮೋತ್ಸವ, ಬೆಳಗ್ಗೆ ಸ್ನಪನಪೂರ್ವಕ ಮಹಾಭಿಷೇಕ, ನಿವೇದನ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ ಹನುಮಂತೋತ್ಸವ, ದ್ವಾದಶಾರಾಧನೆ, ಪುಷ್ಪಯಾಗ, ಪಡಿಮಾಲೆ, ರಾಷ್ಟ್ರಾಶೀರ್ವಾದ, ನಿವೇದನ, ಮಹಾಮಂಗಳಾರತಿ, ಫಲಮಂತ್ರಾಕ್ಷತೆ, ಮೂಕಬಲಿ, ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ನಯನಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ :** ಉಚಿತ ಮೂಳೆ ಸಾಂದ್ರತೆ ಪರೀಕ್ಷೆ ಹಾಗೂ ಮೂಳೆ, ಕೀಲು ನೋವುಗಳ ತಪಾಸಣಾ ಶಿಬಿರ, ಸ್ಥಳ: ನಯನಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ :** ಸಮಾಜ ವಿಜ್ಞಾನದಲ್ಲಿ ಸಂಶೋಧನಾ ವಿಧಾನಗಳು ಕುರಿತು ರಾಷ್ಟ್ರೀಯ ಕಾರ್ಯಾಗಾರ, ಉದ್ಘಾಟನೆ : ಶ್ರೀ ಕೃಷ್ಣದೇವರಾಯ ವಿಶ್ವ ವಿದ್ಯಾ ನಿಲಯ ವಿಶ್ರಾಂತ ಕುಲಪತಿ ಡಾ. ಮಂಜಪ್ಪ ಡಿ. ಹೊಸಮನಿ, ಅಧ್ಯಕ್ಷತೆ: ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ಎಂ.ಮಹೇಶ, ಸ್ಥಳ: ಸೆಮಿನಾರ್ ಹಾಲ್ ವಿಜ್ಞಾನ ಭವನ, ಬೆಳಗ್ಗೆ 10.30ಕ್ಕೆ.

■ **ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ :** ನಾಡಪ್ರಭು ಕೆಂಪೇಗೌಡ ಮತ್ತು ಒಕ್ಕಲಿಗ ರಾಜಮನೆತನದ ಇತಿಹಾಸ ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ : ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಉದ್ಘಾಟನೆ : ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಸಾ.ರಾ. ಮಹೇಶ್, ಅಧ್ಯಕ್ಷತೆ : ಮಹಾಸಭಾದ ಗೌರವಾಧ್ಯಕ್ಷರು ಹಾಗೂ ಸಾಹಿತಿಗಳಾದ ಡಾ. ಸಿ.ಪಿ. ಕೃಷ್ಣಕುಮಾರ್, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಶಾಸಕರಾದ ಎಲ್. ನಾಗೇಂದ್ರ, ಸಿ.ಎನ್. ಮಂಜೇಗೌಡ, ಕೆ. ಮಹದೇವು, ಮಾಜಿ ಶಾಸಕ ವಾಸು, ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–72, ತಿಂಗಳ ಸಾಧಕರು ಪ್ರಸಾದನ ತಜ್ಞ ಜಿ.ಎಂ. ರಾಮಚಂದ್ರ, ಮುಖ್ಯ ಅತಿಥಿಗಳು : ಪತ್ರಕರ್ತ ಎಂ.ಆರ್. ಸತ್ಯನಾರಾಯಣ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ ಬೆಳಗ್ಗೆ 11ಕ್ಕೆ

■ **ಕಲಾಸುರುಚಿ ರಂಗ ಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–744, ಕಥೆ ಹೇಳುವವರು : ರಂಗಾಯಣ ಹಿರಿಯ ಕಲಾವಿದೆ ಗೀತಾ ಮೋಂತಡ್ಕ, ಸ್ಥಳ: ಸುರುಚಿ ರಂಗ ಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭ'ವ'ದ ಬಂಯಲಿಗರು– ರಚನೆ ಮತ್ತು ಪ್ರಸ್ತುತಿ– ಡಾ.ಮೈಸೂರು ಉಮೇಶ್, 6.40ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ–ಜ್ಯೋತಿ ಶಂಕರ್, 10.00 ಶ್ರೀ ರಾಮ್ ಭಟ್ – ಹಾಡುಗಾರಿಕೆ

ಮಧ್ಯಾಹ್ನ: 12.30 ದೇವರನಾಮ–ಅಜಯ್ ವಾರಿಯರ್, ಶುಭ ಮತ್ತು ಚಾರುಮತಿ, 1.20 ಭಾವಗೀತೆ–ಹೆಚ್.ಎ. ನಳಿನಿ, 3.30 ಮಕ್ಕಳ ಮಂಟಪ– ಭಾಗವಹಿಸುವವರು KNC Innovative globe schoolನ ಮಕ್ಕಳು, 4.00 ನಾಟಕ–ದ್ವಂದ್ವ, ನಿರ್ಮಾಣ–ಎನ್.ವಿ. ರಮೇಶ್, 4.30 ನೆನಪಿನಂಗಳ –ಹಿರಿಯ ಸಾಹಿತಿ ಪ್ರೊ.ಎ.ಎನ್.ಮೂರ್ತಿರಾಯರೊಂದಿಗೆ ಪ್ರೊ.ದೇ.ಜವರೇಗೌಡ ಅವರು ನಡೆಸಿರುವ ಸಂವಾದ, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 9.00 ಲಾಕ್‌ಡೌನ್ ಕಥಾ ನಾಟಕ–ಲಾಕ್‌ಡೌನ್ ಕಥೆಗಳನ್ನಾಧರಿಸಿದ ಬಾನುಲಿ ಸರಣಿ "ಪರಿವರ್ತನೆ" ಮೂಲಕಥೆ–ಎನ್. ಶಂಕರ್, ನಾಟಕ ರೂಪ– ಎನ್.ನಾಗಚಂದ್ರ, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 9.15 ಮುದ್ರಣ ಮಾಧ್ಯಮದ ಎದುರಿನ ಸವಾಲುಗಳೂ – ಮಾತನಾಡುತ್ತಾರೆ ಚೀ.ಜ. ರಾಜೀವ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ವಿದ್ವಾನ್ ಶಂಕರನ್ ನಂಬೂದಿರಿ– ಹಾಡುಗಾರಿಕೆ

ಧಾರ್ಮಿಕ ಮತಾಂತರಿಗಳಿಗೆ ಎಸ್‌ಸಿ ಸ್ಥಾನಮಾನ; ನಿವೃತ್ತ ಸಿಜೆಐ ನೇತೃತ್ವದ ಸಮಿತಿಯಿಂದ ಪರಿಶೀಲನೆ

ನವದೆಹಲಿ: ಅನ್ಯಮತಗಳಿಗೆ ಮತಾಂತರಗೊಂಡವರಿಗೆ ಎಸ್ ಸಿ, ಸಮುದಾಯದ ಸ್ಥಾನಮಾನ ನೀಡುವ ಬಗ್ಗೆ ಪರಿಶೀಲನೆ ನಡೆಸಲು ಕೇಂದ್ರ ಸರ್ಕಾರ ನಿವೃತ್ತ ಸಿಜೆಐ ಕೆಜಿ ಬಾಲಕೃಷ್ಣನ್ ನೇತೃತ್ವದ ಸಮಿತಿಯನ್ನು ನೇಮಕ ಮಾಡಿದೆ. ರಾಷ್ಟ್ರಪತಿಗಳ ಆದೇಶದಲ್ಲಿ ಉಲ್ಲೇಖವಾಗಿರುವುದನ್ನು ಹೊರತುಪಡಿಸಿದ ಧರ್ಮಗಳಿಗೆ ಯಾವುದೇ ವ್ಯಕ್ತಿ ಮತಾಂತರಗೊಂಡಿದ್ದರೂ, ತನ್ನನ್ನು ಐತಿಹಾಸಿಕವಾಗಿ ಪರಿಶಿಷ್ಟ ಜಾತಿ ಸೇರಿದವರು ಎಂದು ಹೇಳಿಕೊಳ್ಳುವವರಿಗೆ ಆ ಸ್ಥಾನಮಾನ ನೀಡಬೇಕೆ, ಬೇಡವೇ ಎಂಬ ತಾಕಲಾಟ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಸಮಿತಿಯನ್ನು ರಚಿಸಿದೆ. ಗೆಝೆಟ್ ನೋಟಿಫಿಕೇಷನ್‌ನ ಪ್ರಕಾರ ತ್ರಿಸದಸ್ಯ ಸಮಿತಿಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಡಾ.ರವೀಂದರ್ ಕುಮಾರ್ ಜೈನ್ ಹಾಗೂ ಯುಜಿಸಿ ಸದಸ್ಯ ಪ್ರೊಫೆಸರ್ ಸುಷ್ಮಾ ಯಾದವ್ ಇದ್ದಾರೆ. ಸಂವಿಧಾನದ ಪರಿಚ್ಛೇದ 341 ರ ಅಡಿಯಲ್ಲಿ ರಾಷ್ಟ್ರಪತಿಗಳು ಕಾಲಕಾಲಕ್ಕೆ ಹೊರಡಿಸಿರುವ ಆದೇಶದ ಆಧಾರದಲ್ಲಿ ಈ ವಿಷಯವನ್ನು ಸಮಿತಿ ಪರಿಶೀಲಿಸಲಿದೆ. ನಿರ್ಧಾರದ ಕುರಿತ ಪರಿಣಾಮಗಳ ಬಗ್ಗೆಯೂ ಸಮಿತಿ ಪರಿಶೀಲನೆ ನಡೆಸಲಿದೆ.

ಸಿದ್ದರಾಮಯ್ಯ ಆಡಳಿತಾವಧಿಯ ಹಗರಣಗಳ ತನಿಖೆಗೆ ಬಿಜೆಪಿ ಕಾರ್ಯಕಾರಿಣಿಯಲ್ಲಿ ನಿರ್ಧಾರ

● ಪದೇ ಪದೇ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪಕ್ಕೆ ಪ್ರತೀಕಾರ ● ಒಂದು ತಿಂಗಳಲ್ಲಿ ಈ ಸಂಬಂಧ ನಿರ್ಧಾರಕ್ಕೆ ಸೂಚನೆ

ಬೆಂಗಳೂರು, ಅ.7(ಕೆಎಂಶಿ)–ಸಿದ್ದರಾಮಯ್ಯ ಆಡಳಿತದಲ್ಲಿ ನಡೆದಿರುವ ಹಗರಣಗಳ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲು ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಮುಂಬರುವ ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಕಾಂಗ್ರೆಸ್ ನಮ್ಮ ಸರ್ಕಾರದ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡಿ, ಭ್ರಷ್ಟಾಚಾರದ ಆರೋಪಗಳನ್ನು ಮಾಡುತ್ತಿದೆ. ಪದೇ ಪದೇ ಸುಳ್ಳು ಹೇಳುವ ಮೂಲಕ ಜನರ ಹಾದಿ ತಪ್ಪಿಸುತ್ತಿರುವ ಕಾಂಗ್ರೆಸ್‌ಗೆ ಮುಂದಿನ ದಿನಗಳಲ್ಲಿ ಪಾಠ ಕಲಿಸಬೇಕು. ಸಿದ್ದರಾಮಯ್ಯ ಅವರ ಐದು ವರ್ಷದ ಆಡಳಿತದಲ್ಲಿ ನಡೆದಿರುವ ಹಗರಣಗಳನ್ನು ಇನ್ನು ಒಂದು ತಿಂಗಳಲ್ಲಿ ಹೊರ ತೆಗೆದು ವಿವಿಧ ತನಿಖೆಗೆ ಒಳಪಡಿಸಿ, ಯಾರು ಭ್ರಷ್ಟರು ಎಂದು ಜನರ ಮುಂದಿಡುವಂತೆ ಸರ್ಕಾರಕ್ಕೆ ತಾಕೀತು ಮಾಡಿದೆ.

ನಗರದ ಅರಮನೆ ಮೈದಾನದಲ್ಲಿ ಕಾರ್ಯಕಾರಿಣಿ ಸಭೆಯನ್ನುದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಾಂಗ್ರೆಸ್ ಮತ್ತು ಆ ಪಕ್ಷದ ನಾಯಕರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಸಾಮಾಜಿಕ, ಶೈಕ್ಷಣಿಕ ಸೇರಿದಂತೆ ಎಲ್ಲ ರಂಗದಲ್ಲಿ ರಾಜ್ಯವು ಅತ್ಯುತ್ತಮ ಅಭಿವೃದ್ಧಿ ಸಾಧಿಸಿದೆ. ಹಿಂದೆ ಕಾಂಗ್ರೆಸ್‌ನ ಐದು ವರ್ಷದ ದುರಾಡಳಿತ, ಭ್ರಷ್ಟಾಚಾರ, ಹಗರಣಗಳನ್ನು ಜನರು ಮರೆತಿಲ್ಲ.

ಸಣ್ಣ ನೀರಾವರಿ ಇಲಾಖೆಯಲ್ಲಿ ಶೇಕಡ 100ರಷ್ಟು ಭ್ರಷ್ಟಾಚಾರ ನಡೆದಿದೆ. ಕಾಮಗಾರಿಗಳನ್ನು ನಡೆಸದೇ ಪೂರ್ತಿ ಹಣವನ್ನು ನುಂಗಿ ಹಾಕಿದ್ದಾರೆ. ಇಂತಹವರು ನಮಗೆ ಪಾಠ ಹೇಳಲು ಬರುತ್ತಾರೆ. ಇವರು ಮಾಡಿರುವ ಹಗರಣಗಳನ್ನು ಕೆದಕುತ್ತಾ ಹೋದರೆ ದೊಡ್ಡ ಗ್ರಂಥವೇ ಆಗುತ್ತದೆ. ಸಿದ್ದರಾಮಯ್ಯ ಆಡಳಿತದಲ್ಲಿ ಒಂದೇ ದಿನದಲ್ಲಿ 36 ಸಾವಿರ ಬೋರ್‌ವೆಲ್ ಕೊರೆಸಿದ ಹಗರಣ ನಡೆದಿದೆ. ದಿಂಬು–ಹಾಸಿಗೆ ಖರೀದಿ, ಪೊಲೀಸ್ ನೇಮಕಾತಿಯಲ್ಲೂ ಹಗರಣ ನಡೆದಿದೆ. ಕಾಂಗ್ರೆಸ್ ಪಕ್ಷ ಭ್ರಷ್ಟಾಚಾರದ ವಿಚಾರ ಮಾತನಾಡುವ ನೈತಿಕತೆ ಕಳೆದುಕೊಂಡಿದೆ.

ಸೋಲಾರ್ ಪ್ಲಾಂಟ್ ಗುತ್ತಿಗೆ ನೀಡುವ ಸಂದರ್ಭದಲ್ಲೂ ದೊಡ್ಡ ಹಗರಣ ನಡೆದಿದ್ದು, ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸುವ ಬಗ್ಗೆ ಸರ್ಕಾರ ಶೀಘ್ರದಲ್ಲೇ ತೀರ್ಮಾನ ಕೈಗೊಳ್ಳಲಿದೆ ಎಂದರು.

ಕಾಂಗ್ರೆಸ್ ಆಡಳಿತದಲ್ಲಿ ನಡೆದಿರುವ ಭ್ರಷ್ಟಾಚಾರವನ್ನು ಗಮನದಲ್ಲಿಟ್ಟುಕೊಂಡೇ 50 ಕೋಟಿಗಿಂತ ಹೆಚ್ಚಿನ ಕಾಮಗಾರಿಗೆ ಸಂಬಂಧಿಸಿ ನ್ಯಾಯಾಧೀಶರ ನೇತೃತ್ವದಲ್ಲಿ ವಿಶೇಷ ಸಮಿತಿ ರಚಿಸಲಾಗಿದೆ.

50 ಕೋಟಿ ರೂಗಿಂತ ಹೆಚ್ಚಿನ ಕಾಮಗಾರಿ ನಡೆಸುವವರು ಈ ಸಮಿತಿಯಿಂದ ಹಸಿರು ನಿಶಾನೆ ಪಡೆದುಕೊಳ್ಳಬೇಕು. ಇಂತಹ ನಿರ್ಧಾರದಿಂದ ಪರ್ಸಂಟೇಜ್ ಸಂಸ್ಕೃತಿಯನ್ನು ಇತಿಶ್ರೀ ಹಾಡಿದಂತಾಗುತ್ತದೆ.

ನಾವು 31 ಲಕ್ಷರೈತರಿಗೆ ಸಾಲ ಕೊಟ್ಟಿದ್ದೇವೆ. ರೈತ ಮಕ್ಕಳಿಗೆ ವಿದ್ಯಾನಿಧಿ ಕೊಡಲಾಗಿದೆ. ಸಾಮಾಜಿಕ ನ್ಯಾಯ ಕಲ್ಪಿಸಲು 100 ಎಸ್‌ಸಿ ಎಸ್‌ಟಿ ಹಾಸ್ಟೆಲ್ ತೆರೆಯಲಾಗಿದೆ ಅರ್ಹರಿಗೆ ಉಚಿತ ಕರೆಂಟ್ ಕೊಡಲು ಕಾರ್ಯಕ್ರಮ ರೂಪಿಸಿದ್ದೇವೆ ಎಂದರು.

ಅತ್ಯುತ್ತಮ ರೂಫ್ ಟಾಪ್ ಗಾರ್ಡನ್ ವಿಭಾಗದಲ್ಲಿ ಸತತ 8ನೇ ಬಾರಿ ಪ್ರಶಸ್ತಿ



ತೋಟಗಾರಿಕೆ ಇಲಾಖೆ ಏರ್ಪಡಿಸಿದ್ದ ದಸರಾ ಗಾರ್ಡನ್ ಸ್ಪರ್ಧೆಯಲ್ಲಿ ಮೈಸೂರಿನ ಕಣ್ಣನ್ ಲ್ಯಾಬ್‌ನ ಡಾ. ಲಕ್ಷ್ಮಣ್ ಅವರ ಪತ್ನಿ, ಮಾಜಿ ಮಿಸೆಸ್ ಇಂಡಿಯಾ ಯೂನಿವರ್ಸ್ ಡಾ. ಹೇಮಮಾಲಿನಿ ಲಕ್ಷ್ಮಣ್ ಅವರು ಟೆರೇಸ್ ರೂಫ್ ಗಾರ್ಡನ್ ವಿಭಾಗದಲ್ಲಿ ಈ ಬಾರಿ ಪ್ರಥಮ ಬಹುಮಾನ ಗಳಿಸಿದ್ದಾರೆ. ಇದರೊಂದಿಗೆ 8ನೇ ಬಾರಿ ಸತತವಾಗಿ ಇವರು ಪ್ರಶಸ್ತಿ ಗಳಿಸಿದಂತಾಗಿದೆ. ಇದರ ಜೊತೆಗೆ ವಿಶೇಷ ಸಸ್ಯ, ಗಿಡಗಳಿಂದ ಕೂಡಿದ ಫಾರಂ ಗಾರ್ಡನ್ ವಿಭಾಗದಲ್ಲೂ ಪ್ರಥಮ ಬಹುಮಾನ ಗಳಿಸಿದ್ದಾರೆ. ಚಿತ್ರದಲ್ಲಿ ಡಾ. ಲಕ್ಷ್ಮಣ್ ದಂಪತಿಯನ್ನು ಕಾಣಬಹುದು.

ತ್ರಿಭಾಷಾ ಸೂತ್ರಕ್ಕೆ ಸಮಾಧಿ ಕಟ್ಟಲು ಕೇಂದ್ರ ಸರ್ಕಾರ ಹೊರಟಿದೆ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಆಕ್ರೋಶ




ಬೆಂಗಳೂರು: ಕೇಂದ್ರದ ಸಿಬ್ಬಂದಿ ಆಯ್ಕೆ ಆಯೋಗ 20,000 ಹುದ್ದೆ ಆಯ್ಕೆಗೆ ಹಿಂದಿ–ಇಂಗ್ಲಿಷ್‌ನಲ್ಲಿ ಮಾತ್ರ ಪರೀಕ್ಷೆ ನಡೆಸುತ್ತಿದೆ. ಆಯ್ಕೆಯಾದ ಅಭ್ಯರ್ಥಿಯನ್ನು ಯಾವ ರಾಜ್ಯಕ್ಕಾದರೂ ಕಳುಹಿಸಬಹುದು. ಕನ್ನಡ ಸೇರಿ ಯಾವುದೇ ಪ್ರಾದೇಶಿಕ ಭಾಷೆಯಲ್ಲಿ ಪರೀಕ್ಷೆಗೆ ಅವಕಾಶವಿಲ್ಲ. ಹಿಂದಿ ಹೇರಿಕೆ, ಭಾಷಾ ತಾರತಮ್ಯಕ್ಕೆ ಇದಕ್ಕಿಂತ ಸಾಕ್ಷಿ ಬೇಕೇ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಕೇಂದ್ರ ಸರ್ಕಾರಕ್ಕೆ ಪ್ರಾದೇಶಿಕ ಭಾಷೆಗಳನ್ನು ಹತ್ತಿಕ್ಕಲೇಬೇಕು ಎನ್ನುವ ಕೆಟ್ಟ ಹಠವಿದ್ದಂತೆ ಇದೆ. ಕನ್ನಡವೂ ಸೇರಿ ದಕ್ಷಿಣದ ಪ್ರಾದೇಶಿಕ ಭಾಷೆಗಳ ಬಗ್ಗೆ ಇನ್ನಿಲ್ಲದ ಅಸಹನೆ, ದ್ವೇಷ ಮೈಗೂಡಿಸಿಕೊಂಡಿದೆ ಎನಿಸುತ್ತಿದೆ. ತ್ರಿಭಾಷಾ ಸೂತ್ರಕ್ಕೆ ಹೇಗಾದರೂ ಸಮಾಧಿ ಕಟ್ಟಲೇಬೇಕೆಂದು ಹೊರಟಂತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಒಕ್ಕೂಟ ತತ್ವದಲ್ಲಿ ಆಡಳಿತ ನಡೆಸುವ ಪಕ್ಷಕ್ಕೇ ಒಪ್ಪಿಗೆ ಇಲ್ಲ ಎನ್ನುವುದನ್ನು ಇದು ತೋರಿಸುತ್ತಿದೆ. ಹಿಂದಿ ಭಾಷಿಗರನ್ನು ಕರ್ನಾಟಕ ಹಾಗೂ ದಕ್ಷಿಣ ಭಾರತದಲ್ಲಿ ತುಂಬುವ ದುಸ್ಸಾಹಸವಷ್ಟೇ ಇದು ಎಂದು ಕಿಡಿಕಾರಿದ್ದಾರೆ.

ಈ ವಿಷಯದಲ್ಲಿ ನಮ್ಮ 2 ಬೇಡಿಕೆಗಳಿವೆ. ಕನ್ನಡದಲ್ಲೂ ಪರೀಕ್ಷೆ ನಡೆಸಬೇಕು. ಕರ್ನಾಟಕದ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಬೇಕು. ಈ ಬದಲಾವಣೆ ನಂತರವಷ್ಟೇ ಸಿಬ್ಬಂದಿ ಆಯ್ಕೆ ಆಯೋಗ ಪರೀಕ್ಷೆ ನಡೆಸಬೇಕು ಎಂದು ಹೆಚ್‌ಡಿಕೆ ಆಗ್ರಹಿಸಿದ್ದಾರೆ. ಕನ್ನಡದಲ್ಲೇ ಪರೀಕ್ಷೆ ನಡೆಸಿದರೆ ಕರ್ನಾಟಕದ ಅನೇಕ ಪ್ರತಿಭಾವಂತ ಯುವಜನರು ಆಯ್ಕೆ ಆಗಲು ಅನುಕೂಲವಾಗುತ್ತದೆ. ಕರ್ನಾಟಕದ ಹುದ್ದೆಗಳಿಗೆ ಕನ್ನಡಿಗರ ನೇಮಕವಾದರೆ, ಕರ್ನಾಟಕದ ಜನರಿಗೆ ಕನ್ನಡದಲ್ಲಿ ಸೇವೆ ದೊರೆಯುತ್ತದೆ. ತಪ್ಪಿದರೆ ಕೇಂದ್ರವು ಕನ್ನಡಿಗರ ಆಗ್ರಹಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಮಾನವ ಹಕ್ಕುಗಳ ಹೋರಾಟಗಾರ ಅಲೆಸ್ ಸೇರಿ ಮೂವರಿಗೆ ನೊಬೆಲ್ ಶಾಂತಿ ಪ್ರಶಸ್ತಿ



ನ್ಯೂಯಾರ್ಕ್: 2022ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿ ಶುಕ್ರವಾರ ಪ್ರಕಟವಾಗಿದ್ದು, ಬೆಲಾರಸ್‌ನ ಮಾನವ ಹಕ್ಕುಗಳ ಹೋರಾಟ ಗಾರ ಅಲೆಸ್ ಬಿಲಿ ಯಾಟ್ಸ್ಕಿ, ರಷ್ಯಾದ ಮಾನವ ಹಕ್ಕುಗಳ ಸಂಸ್ಥೆ ಸ್ಮಾರಕ ಮತ್ತು ಉಕ್ರೇನಿಯನ್ ಮಾನವ ಹಕ್ಕುಗಳ ಸಂಸ್ಥೆ ಸೆಂಟರ್ ಫಾರ್ ಸಿವಿಲ್ ಲಿಬರ್ಟೀಸ್ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಡೆದುಕೊಂಡಿವೆ. ಶಾಂತಿಗಾಗಿ ನೊಬೆಲ್ ಪ್ರಶಸ್ತಿ ಪಡೆದ ಅಲೆಸ್ ಮತ್ತು ಈ ಎರಡು ಸಂಸ್ಥೆಗಳು ತಮ್ಮ ತಾಯ್ನಾಡಿನಲ್ಲಿ ನಾಗರಿಕ ಸಮಾಜವನ್ನು ಪ್ರತಿನಿಧಿಸುತ್ತವೆ. ಬೆಲಾರಸ್‌ನ ಅಲೆಸ್ ಬಿಲಿಯಾಟ್ಸ್ಕಿ 1980 ರ ದಶಕದಲ್ಲಿ ದೇಶದಲ್ಲಿ ಪ್ರಜಾಪ್ರಭುತ್ವ ಚಳವಳಿಯ ಪ್ರಾರಂಭಿಕರಲ್ಲಿ ಒಬ್ಬರಾಗಿದ್ದರು ಮತ್ತು ಪ್ರಜಾಪ್ರಭುತ್ವ ಮತ್ತು ಶಾಂತಿಯನ್ನು ಉತ್ತೇಜಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ.

ಮಾನವ ಹಕ್ಕುಗಳ ಸಂಸ್ಥೆ ಮೆಮೋರಿಯಲ್ ರಷ್ಯಾದಲ್ಲಿ ರಾಜಕೀಯ ದಬ್ಬಾಳಿಕೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಮಾಹಿತಿಯನ್ನು ಸಂಗ್ರಹಿಸಿದೆ ಮತ್ತು ವ್ಯವಸ್ಥಿತಗೊಳಿಸಿದೆ. ಏತನ್ಮಧ್ಯೆ, ಕೈವ್‌ನಲ್ಲಿರುವ ಸಿವಿಲ್ ಲಿಬರ್ಟೀಸ್ ಕೇಂದ್ರವು ಉಕ್ರೇನ್‌ನಲ್ಲಿ ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವವನ್ನು ಮುನ್ನಡೆಸುತ್ತಿದ್ದು, ಉಕ್ರೇನಿಯನ್ ನಾಗರಿಕ ಸಮಾಜವನ್ನು ಬಲಪಡಿಸುವ ನಿಲುವನ್ನು ತೆಗೆದುಕೊಂಡಿದೆ ಮತ್ತು ಉಕ್ರೇನ್ ಅನ್ನು ಪೂರ್ಣ ಪ್ರಮಾಣದ ಪ್ರಜಾಪ್ರಭುತ್ವವನ್ನಾಗಿ ಮಾಡಲು ಪಣತೊಟ್ಟಿದೆ.

ರಾಜಕೀಯವನ್ನು ರಾಜಕೀಯ ಮೈದಾನದಲ್ಲೇ ಮಾಡಬೇಕು, ಸರ್ಕಾರಿ ಕಚೇರಿಗಳಲ್ಲಲ್ಲ: ಡಿಕೆಶಿ



ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣ ವಿಚಾರಣೆ ನಡೆಸುತ್ತಿರುವ ಜಾರಿ ನಿರ್ದೇಶ ನಾಲಯದ ಅಧಿಕಾರಿಗಳು ಅದರ ಅಂಗಸಂಸ್ಥೆ ಯಂಗ್ ಇಂಡಿಯಾದ ಆದಾಯದ ಬೆನ್ನು ಬಿದ್ದಿದ್ದಾರೆ. ಯಂಗ್ ಇಂಡಿಯಾಗೆ ದೇಣಿಗೆ ನೀಡಿದ ಕಾಂಗ್ರೆಸ್ ನಾಯಕರನ್ನು ಇಡಿ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದು, ಇದರ ಭಾಗವಾಗಿ ಇಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಮತ್ತು ಡಿ.ಕೆ ಸುರೇಶ್ ಅವರನ್ನು ವಿಚಾರಣೆ ನಡೆಸಿದ್ದಾರೆ.

ಇಂದು ಬೆಳಗ್ಗೆ 11 ಗಂಟೆಗೆ ಡಿ.ಕೆ ಸಹೋದರರು ಇಡಿ ಅಧಿಕಾರಿಗಳ ಮುಂದೆ ವಿಚಾರಣೆಗೆ ಹಾಜರಾದರು. ಇಬ್ಬರನ್ನು ಪ್ರತ್ಯೇಕ ವಿಚಾರಣೆ ನಡೆಸಿದ ಅಧಿಕಾರಿಗಳು ಯಂಗ್ ಇಂಡಿಯಾಗೆ ನೀಡಿದ ದೇಣಿಗೆಯ ಮೂಲವನ್ನು ಪ್ರಶ್ನಿಸಿದ್ದಾರೆ. ಕಳೆದ ಏಪ್ರಿಲ್‌ನಲ್ಲಿ ಡಿ.ಕೆ ಸುರೇಶ್ 25 ಲಕ್ಷ ರೂ. ದೇಣಿಗೆ ನೀಡಿದ್ದು, ಡಿ.ಕೆ ಶಿವಕುಮಾರ್ ಆಗಾಗ ದೇಣಿಗೆ ನೀಡಿರುವುದು ತಿಳಿದುಬಂದಿದೆ.

ಯಂಗ್ ಇಂಡಿಯಾಗೆ ದೇಣಿಗೆ ನೀಡಲು ಕಾರಣ ಏನು, ಅದರ ಉದ್ದೇಶ ಏನು ಮತ್ತು ದೇಣಿಗೆ ನೀಡಿದ ಹಣದ ಮೂಲ ಯಾವುದು ಎಂದು ಅಧಿಕಾರಿಗಳು ಪ್ರಶ್ನಿಸಿದ್ದಾರೆ ಎಂದು ಮೂಲಗಳು ಹೇಳಿವೆ. ದೇಣಿಗೆಯ ಉದ್ದೇಶ ಮತ್ತು ಕಾರಣಗಳನ್ನು ವಿವರಿಸಿರುವ ಡಿ.ಕೆ ಸಹೋದರರು, ದೇಣಿಗೆ ನೀಡಿದ ಹಣದ ಮೂಲದ ಬಗ್ಗೆ ಮಾಹಿತಿ ನೀಡಲು ಕಾಲಾವಕಾಶ ಕೇಳಿದ್ದಾರೆ ಎಂದು ತಿಳಿದು ಬಂದಿದೆ. 4 ಗಂಟೆಗಳ ವಿಚಾರಣೆ ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡಿದ ಡಿ.ಕೆ ಶಿವಕುಮಾರ್, ಏನು ಕೇಳಿದರು ಎಂದು ಎಲ್ಲವೂ ಹೇಳಲು ಸಾಧ್ಯವಿಲ್ಲ. ಕೆಲವು ದಾಖಲೆಗಳನ್ನು ಸಲ್ಲಿಸಿದ್ದೇನೆ, ಇನ್ನೂ ಕೆಲವು ದಾಖಲೆಗಳನ್ನು ನೀಡುತ್ತೇನೆ ಎಂದು ಹೇಳಿದ್ದೇನೆ. ಆನ್‌ಲೈನ್ ಮೂಲಕ ದಾಖಲೆಗಳನ್ನು ಸಲ್ಲಿಸುತ್ತೇನೆ ಎಂದರು.

ಬಾಲಿವುಡ್‌ನ ಹಿರಿಯ ನಟ ಅರುಣ್ ಬಾಲಿ ನಿಧನ



ಮುಂಬೈ: ಬಾಲಿವುಡ್‌ನ ಹಿರಿಯ ನಟ ಅರುಣ್ ಬಾಲಿ (79) ನಿಧನರಾಗಿದ್ದಾರೆ. ಈ ಕುರಿತಂತೆ ಸುದ್ದಿ ಸಂಸ್ಥೆ ಎಎನ್‌ಐ ಟ್ವೀಟ್ ಮಾಡಿದೆ. ಬಾಲಿ ಓರ್ವ ಪುತ್ರ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.

ನರಗಳು ಮತ್ತು ಸ್ನಾಯುಗಳ ನಡುವಿನ ಸಂವಹನ ವೈಫಲ್ಯದಿಂದ ಉಂಟಾದ ಆಟೋ ಇಮ್ಯೂನ್ ಕಾಯಿಲೆಯಾದ ಮೈಸ್ತೇನಿಯಾ ಗ್ರ್ಯಾವಿಸ್‌ನಿಂದ ತಮ್ಮ ತಂದೆ ಬಳಲುತ್ತಿದ್ದರು ಎಂದು ಬಾಲಿ ಅವರ ಮಗ ಅಂಕುಶ್ ಹೇಳಿದರು.

ತಮ್ಮ ತಂದೆ ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದರು. ಆದರೆ, ಇಂದು ಮುಂಜಾನೆ 4.30 ರ ಸುಮಾರಿಗೆ ನಿಧನರಾದರು ಎಂದು ಅಂಕುಶ್ ಹೇಳಿದರು. ನನ್ನ ತಂದೆ ನಮ್ಮನ್ನು ಅಗಲಿದ್ದಾರೆ. ಅವರು ಮೈಸ್ತೇನಿಯಾ ಗ್ರ್ಯಾವಿಸ್‌ನಿಂದ ಬಳಲುತ್ತಿದ್ದರು. ಎರಡು–ಮೂರು ದಿನಗಳಿಂದ ಅವರಿಗೆ ಮೂಡ್ ಸ್ವಿಂಗ್ ಇತ್ತು. ಕೇರ್‌ಟೇಕರ್ ಸಹಾಯದಿಂದ ಶೌಚಾಲಯಕ್ಕೆ ಹೋಗಿ ಬಂದು ಕುಳಿತುಕೊಂಡಿದ್ದರು. ಆದರೆ, ಬಳಿಕ ಅವರು ಎದ್ದೇಳಲಿಲ್ಲ ಎಂದು ಅವರು ಪಿಟಿಐಗೆ ತಿಳಿಸಿದ್ದಾರೆ.

ಹಿರಿಯ ನಟ ಅನಂತನಾಗ್‌ಗೆ ಬೆಂಗಳೂರು ಉತ್ತರ ವಿವಿಯ ಗೌರವ ಡಾಕ್ಟರೇಟ್ ಪ್ರದಾನ



ಬೆಂಗಳೂರು, ಅ.7(ಕೆಎಂಶಿ)–ಹಿರಿಯ ನಟ ಅನಂತನಾಗ್ ಅವರಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಯನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ಅವರು ಇಂದಿಲ್ಲಿ ಪ್ರದಾನ ಮಾಡಿದರು. ನಂತರ ಮಾತನಾಡಿದ ಸಚಿವರು, 'ಅನಂತನಾಗ್ ಅವರು ಚಿತ್ರರಂಗಕ್ಕೆ ಬಂದ ಸುವರ್ಣ ಮಹೋತ್ಸವದ ವರ್ಷದಲ್ಲಿ ಗೌರವ ಡಾಕ್ಟರೇಟ್ ನೀಡುವ ಮೂಲಕ ಬೆಂಗಳೂರು ಉತ್ತರ ವಿವಿ ತನ್ನನ್ನು ತಾನೇ ಗೌರವಿಸಿಕೊಂಡಿದೆ ಎಂದು ಬಣ್ಣಿಸಿದರು.

ಅನಂತನಾಗ್ ಮತ್ತು ಶಂಕರನಾಗ್ ಸಹೋದರರು ತಾಯಿ ಭುವನೇಶ್ವರಿಯ ಹೆಮ್ಮೆಯ ಪುತ್ರರಾಗಿದ್ದಾರೆ. ರಾಜ್ಯದಲ್ಲಿ ರಾಮಕೃಷ್ಣ ಹೆಗಡೆಯವರ ಮೂಲಕ ರಾಜಕೀಯ ಬದಲಾವಣೆ ತರುವಲ್ಲಿ ಇವರಿಬ್ಬರೂ ವಹಿಸಿದ ಪಾತ್ರ ಸ್ಮರಣೀಯವಾಗಿದೆ ಎಂದರು. ಅಧ್ಯಯನಶೀಲತೆ ಮತ್ತು ಚಿಂತನ ಶೀಲತೆಗಳನ್ನು ರೂಢಿಸಿಕೊಂಡಿರುವ ಅನಂತನಾಗ್ ಅವರು ಸಾರ್ವಜನಿಕ ಜೀವನದಲ್ಲಿ ಕೂಡ ತಮ್ಮ ಛಾಪು ಮೂಡಿಸಿದ ಮೇರು ವ್ಯಕ್ತಿ ಆಗಿದ್ದಾರೆ ಎಂದು ಅವರು ನುಡಿದರು.

ಅನಂತನಾಗ್ ನೇರ ಮತ್ತು ನಿಷ್ಠುರ ನುಡಿಗೆ ಹೆಸರಾಗಿದ್ದಾರೆ. ನಾಗ್ ಸಹೋದರರು ಕನ್ನಡ ನಾಡಿನ ಅದ್ಭುತ ಜೋಡಿ ಆಗಿದ್ದರು. ಅನಂತ್ ಅವರು ತಮ್ಮ ವಿಶಿಷ್ಟ ವ್ಯಕ್ತಿತ್ವಕ್ಕೆ ಹೆಸರಾಗಿದ್ದಾರೆ ಎಂದು ಅವರು ವ್ಯಾಖ್ಯಾನಿಸಿದರು. ಗೌರವ ಡಾಕ್ಟರೇಟ್ ಸ್ವೀಕರಿಸಿ ಮಾತನಾಡಿದ ನಟ ಅನಂತನಾಗ್, "ಮಲ್ಲೇಶ್ವರಂ ಕ್ಷೇತ್ರದ ಅಭಿವೃದ್ಧಿಗೆ ಅಶ್ವತ್ಥ ನಾರಾಯಣ ಅವರು ದಣಿವರಿಯದೆ ಕೆಲಸ ಮಾಡುತ್ತಿರುವ ಅಪರೂಪದ ಜನ ಪ್ರತಿನಿಧಿ ಆಗಿದ್ದಾರೆ' ಎಂದು ಶ್ಲಾಘಿಸಿದರು. ಅದರಲ್ಲೂ ತಮ್ಮ ಕ್ಷೇತ್ರದ ಹಿರಿಯ ನಾಗರಿಕರ ಹಿತಚಿಂತಕರಾಗಿದ್ದಾರೆ. ಇಂಥವರು ಎಷ್ಟು ಸಲ ಶಾಸಕರಾಗಿ ಆಯ್ಕೆಯಾದರೂ ಅದು ಖುಷಿಯ ಸಂಗತಿಯಾಗಿರುತ್ತದೆ ಎಂದು ಅವರು ಬಣ್ಣಿಸಿದರು.

ಮೈಸೂರು ಸುತ್ತಮುತ್ತ ಅ.14ರಿಂದ ಮತ್ತೆ ಮಳೆ




ಮೈಸೂರು, ಅ.7(ಎಸ್‌ಬಿಡಿ)– ಮೈಸೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಅ.14ರಿಂದ ಒಂದು ವಾರ ಸರಾಸರಿಗಿಂತ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ.

ಭಾರತೀಯ ಹವಾಮಾನ ಇಲಾಖೆ ಪ್ರಕಾರ ಮೈಸೂರು, ಮಂಡ್ಯ, ಕೊಡಗು, ಜಿಲ್ಲೆಯಲ್ಲಿ ಅ.14ರಿಂದ ಅ.20ರವರೆಗೆ ಸರಾಸರಿಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ. ಇನ್ನು ನಾಳೆಯಿಂದ ಮೋಡಕವಿದ ವಾತಾವರಣದೊಂದಿಗೆ ತುಂತುರು ಸಾಧಾರಣ ಮಳೆಯಾಗಬಹುದು ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ. ಮೈಸೂರು, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಅ.10ರಂದು 15 ಮಿ.ಮೀ, ಮಂಡ್ಯ ಜಿಲ್ಲೆಯಲ್ಲಿ ಅ.10 ಮತ್ತು 11ರಂದು 15 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ. ಉಳಿದ ದಿನಗಳಲ್ಲಿ 4–6 ಮಿ.ಮೀ. ಮಳೆ ಬೀಳಬಹುದು. ಈ ನಾಲ್ಕೂ ಜಿಲ್ಲೆಗಳಲ್ಲಿ ಬೆಳಗ್ಗೆ ಗಾಳಿಯಲ್ಲಿ ಶೇ.90ಕ್ಕಿಂತ ಹೆಚ್ಚು ತೇವಾಂಶವಿರಲಿದ್ದು, ಮಧ್ಯಾಹ್ನ ವೇಳೆ ಶೇ.75–80ಕ್ಕೆ ತಗ್ಗಬಹುದು.

ನಿಧನ

ದೇವರಾಜು



ಮೈಸೂರು, ಅ.7– ಮೈಸೂರಿನ ಗಾಂಧಿನಗರ ನಿವಾಸಿ, ಸಿದ್ದಪ್ಪಾಜಿ ದೇವಸ್ಥಾನದ ಗೌರವಾಧ್ಯಕ್ಷ ದೇವರಾಜು (72) ಅವರು ಇಂದು ಬೆಳಗ್ಗೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಕೆ.ಮಹದೇವಮ್ಮ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆ ನಾಳೆ (ಅ.8) ಮಧ್ಯಾಹ್ನ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಸರಾ ಕ್ರೀಡಾ ಕೂಟದಲ್ಲಿ ಅವ್ಯವಸ್ಥೆ

ಕ್ರೀಡಾ ಇಲಾಖೆ ಜಂಟಿ ನಿರ್ದೇಶಕರಿಗೆ ಅಪರ ಮುಖ್ಯ ಕಾರ್ಯದರ್ಶಿಯಿಂದ ನೋಟೀಸ್



ಮೈಸೂರು, ಅ.7(ಎಸ್‌ಪಿಎನ್)– ನಾಡಹಬ್ಬ ದಸರಾ ಉತ್ಸವ ಪ್ರಯುಕ್ತ ಸೆ.29ರಂದು ಆಯೋಜಿಸಿದ್ದ ದಸರಾ ಕ್ರೀಡಾಕೂಟದಲ್ಲಿ ಅವ್ಯವಸ್ಥೆ ಕುರಿತು ತಕ್ಷಣವೇ ವರದಿ ಸಲ್ಲಿಸುವಂತೆ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು, ಕ್ರೀಡಾ ಇಲಾಖೆಯ ಜಂಟಿ ನಿರ್ದೇಶಕ ಎಂ.ಸಿ.ರಮೇಶ್ ಅವರಿಗೆ ಗುರುವಾರ ನೋಟೀಸ್ ನೀಡಿದ್ದಾರೆ.

> **ಈ ಬಾರಿ ದಸರಾ ಕ್ರೀಡಾ ಕೂಟಕ್ಕೆ ರಾಜ್ಯ ಮತ್ತು ಹೊರ ಜಿಲ್ಲೆಗಳ ಕ್ರೀಡಾಪಟುಗಳು ಭಾಗವಹಿಸಿದ್ದರು. ಆದರೆ, ದಸರಾ ಕ್ರೀಡಾ ಉಪಸಮಿತಿ ಇದಕ್ಕೆ ಸರಿಯಾದ ವ್ಯವಸ್ಥೆ ಮಾಡದೇ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಕ್ರೀಡಾಪಟುಗಳಿಗೆ ಅವಮಾನ ಮಾಡಿ ರಾಷ್ಟ್ರಮಟ್ಟದಲ್ಲಿ ಮೈಸೂರಿಗೆ ಅಪಕೀರ್ತಿ ತಂದಿದ್ದಾರೆ ಎಂದು ಆರೋಪಿಸಿ, ಕ್ರೀಡಾ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಯವರಿಗೆ ಪತ್ರ ಬರೆದು ಗಮನ ಸೆಳೆಯಲಾಗಿತ್ತು. ಈ ಹಿನ್ನೆಲೆಯಲ್ಲಿ ಸ್ಥಳೀಯ ಕ್ರೀಡಾಧಿಕಾರಿಗಳಿಗೆ ಪತ್ರ ಬರೆದು ವರದಿ ಕೇಳಿದ್ದಾರೆ.**
>
> **- ಪಾಲನಹಳ್ಳಿ ಪ್ರಸನ್ನ, ರಾಜ್ಯ ಉಪಾಧ್ಯಕ್ಷ ಜನ ಸಂಗ್ರಾಮ ಪರಿಷತ್**

1,650 ಮಂದಿಗೆ ಅನಾನುಕೂಲ: ಸೆ.29 ರಂದು ದಸರಾ ಕ್ರೀಡಾ ಉಪಸಮಿತಿ ಆಯೋಜಿಸಿದ್ದ ದಸರಾ ಸಿಎಂ ಕಪ್ ಕ್ರೀಡಾ ಕೂಟ–2022ದಲ್ಲಿ ಭಾಗವಹಿಸಿದ್ದ ಕರಾಟೆಯಲ್ಲಿ 680 ಕ್ರೀಡಾಪಟುಗಳು, 50 ತೀರ್ಪುಗಾರರು, ಬಾಡಿ ಬಿಲ್ಡಿಂಗ್(ತೂಕದ ವಿಭಾಗ)ನಿಂದ 360 ಕ್ರೀಡಾಪಟುಗಳು, 50 ಮಂದಿ ತೀರ್ಪುಗಾರರು, ಚೆಸ್‌ನಿಂದ 150 ಮಂದಿ ಕ್ರೀಡಾಪಟುಗಳು, 30 ಮಂದಿ ತೀರ್ಪುಗಾರರು, ಅಂಧರ ಚೆಸ್‌ನಿಂದ 200 ಕ್ರೀಡಾಪಟುಗಳು, 100 ತೀರ್ಪುಗಾರರು, ಸೈಕಲ್ ಪೋಲೋ 130 ಕ್ರೀಡಾಪಟುಗಳು, 10 ಮಂದಿ ತೀರ್ಪುಗಾರರು ಸೇರಿದಂತೆ 1650 ಮಂದಿಗೆ ಅನಾನುಕೂಲವಾಗಿದೆ ಎಂದು ತಿಳಿಸಿದ್ದಾರೆ.

ಅವ್ಯವಸ್ಥೆಯ ಪಟ್ಟಿ: ದಸರಾ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಊಟದ ವ್ಯವಸ್ಥೆ ಇಲ್ಲದೆ ಇರುವುದು. ನಿಗದಿ ಗೌರವ ಧನಕ್ಕಿಂತ ಕಡಿಮೆ ವಿತರಣೆ ಮಾಡಿರುವುದು ಉದಾಹರಣೆಗೆ ಕರಾಟೆ, ಬಾಡಿ ಬಿಲ್ಡಿಂಗ್, ಚೆಸ್, ಅಂದರ ಚೆಸ್ ಮತ್ತು ಸೈಕಲ್ ಪೋಲೋ ಸ್ಪರ್ಧೆಗಳಲ್ಲಿ ಭಾಗವಹಿಸಿದವರಿಗೆ ಕ್ರೀಡಾಪಟುಗಳಿಗೆ ನಗದು ಬಹುಮಾನ ನೀಡಿಲ್ಲದಿರುವುದು ಗಮನಕ್ಕೆ ಬಂದಿದೆ.

ಅಂತೆಯೇ ದಸರಾ ಕ್ರೀಡಾ ಕೂಟಕ್ಕೂ ಮೊದಲು ಕ್ರೀಡಾ ಮೈದಾನ ನಿರ್ವಹಣೆ ಮಾಡದೇ ಕ್ರೀಡಾಕೂಟ ಆಯೋಜನೆ ಮಾಡಿ, ಸ್ಥಳೀಯ ಅಧಿಕಾರಿಗಳು ಇಲಾಖೆಗೆ ಅಗೌರವ ತಂದಿದ್ದಾರೆ. ಅವ್ಯವಸ್ಥೆ ಕುರಿತು ಸಾರ್ವಜನಿಕರು ಆಕ್ಷೇಪಿಸಿದಾಗ ಕ್ರೀಡಾಕೂಟವನ್ನೇ ಸ್ಥಗಿತಗೊಳಿಸಿರುವುದು.

ಕ್ರೀಡಾಪಟುಗಳಿಗೆ ಕ್ರೀಡಾ ಸಮವಸ್ತ್ರ, ಶೂ ವಿತರಣೆಯಾಗದಿರುವುದು. ಮ್ಯಾರಥಾನ್‌ಗೆ ಸರಿಯಾದ ವ್ಯವಸ್ಥೆ ಇಲ್ಲದೆ, ಕೊನೆಗೆ ಈ ಕ್ರೀಡೆಯನ್ನೇ ರದ್ದುಗೊಳಿಸಿರುವುದು. ಯೋಗ ಸಮಿತಿ ಆಯೋಜಿಸಿದ್ದ ಯೋಗ ಸ್ಪರ್ಧೆಯನ್ನೇ ಮತ್ತೊಮ್ಮೆ ಕ್ರೀಡಾ ಇಲಾಖೆ ಆಯೋಜಿಸಿರುವುದು. ವಿಭಾಗೀಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸದವರಿಗೆ ಗೌರವಧನ ನೀಡದಿರುವುದು ಹಾಗೂ ಕಬ್ಬಡಿ ಕ್ರೀಡೆಯಲ್ಲೂ ಇದೇ ಪರಿಸ್ಥಿತಿ ಮುಂದುವರೆಯಲು ಕಾರಣವೇನು? ಎಂದು ಅವ್ಯವಸ್ಥೆಗಳ ಪಟ್ಟಿ ಮಾಡಿ, ಈ ಕುರಿತು ಸ್ಥಳೀಯ ಕ್ರೀಡಾಧಿಕಾರಿಗಳಿಗೆ ಮಾಹಿತಿ ನೀಡುವಂತೆ ತಾಕೀತು ಮಾಡಿದ್ದಾರೆ.

ಅಲ್ಲದೆ, ಸ್ಥಳೀಯ ಕ್ರೀಡಾಧಿಕಾರಿಗಳ ತಪ್ಪಿನಿಂದ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಕ್ರೀಡಾಪಟುಗಳಿಗೆ ಅನಾನೂಕಾಲವಾಗಿರುತ್ತದೆ ಮತ್ತು ಕ್ರೀಡಾ ಇಲಾಖೆಯ ಗೌರವ ರಾಷ್ಟ್ರಮಟ್ಟದಲ್ಲಿ ಮಣ್ಣು ಪಾಲಾಗಿದೆ. ಹಾಗಾಗಿ ದಸರಾ ಕ್ರೀಡಾಕೂಟದ ಅವ್ಯವಸ್ಥೆಗೆ ಕಾರಣವೇನು ಎಂದು ಸಮಗ್ರ ವರದಿ ನೀಡಿರುವಂತೆ ಡಾ.ಶಾಲಿನಿ ರಜನೀಶ್ ಖಾರವಾಗಿ ಪತ್ರ ಬರೆದು ಸ್ಥಳೀಯ ಕ್ರೀಡಾಧಿಕಾರಿಗಳಿಗೆ ಸೂಚಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಪತ್ನಿ : ಏನೊಂದ್ರೆ ನೀವು ಯಾಕೆ ಈಜು ಕಲಿಯಲಿಲ್ಲ?
ಪತಿ : ಈಗ ಮಾಡ್ತಿರೋದು ಏನು?
ಪತ್ನಿ : ಎಲ್ರಿ, ಕುರ್ಚಿ ಮೇಲಷ್ಟೇ ಕೂತಿದ್ದೀರಿ
ಪತಿ : ಅಲ್ವೆ, ನಿನ್ನ ಮದುವೆಯಾದ ದಿನದಿಂದ ಸಂಸಾರ ಸಾಗರದಲ್ಲಿ ಈಜುತ್ತಾ ಇಲ್ವಾ?

ಮೈಸೂರು ಮಿತ್ರ

ಶನಿವಾರ, 8 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಚಿಕ್ಕದು ಎನ್ನುವ ಕೆಲಸಗಳನ್ನು ಈಗಲೇ ಚೆನ್ನಾಗಿ ಮಾಡು. ಆಗ ದೊಡ್ಡ ಕೆಲಸ ತಾನಾಗಿಯೇ ನಿನ್ನನ್ನು ಹುಡುಕಿಕೊಂಡು ಬರುತ್ತದೆ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉಂಡವರೇನು ಬಲ್ಲರು ಉಪವಾಸವಿದ್ದವರ ಸುದ್ದಿ

ನಿಮ್ಮ ಪತ್ರಗಳು

ಈಗೆಲ್ಲಾ ದೊಂಬಿ ದಸರಾ!




ಮಾನ್ಯರೆ,

ಇಂದಿನ ದಿನಗಳ ಜಂಬೂಸವಾರಿ ಮೆರವಣಿಗೆಯು ಪಾರಂಪರಿಕ ಉತ್ಸವದ ಸೊಬಗನ್ನು ಕಳೆದುಕೊಂಡು ಅನೇಕ ವಿಧಗಳಲ್ಲಿ 'ದೊಂಬಿ ದಸರಾ' ಆಗಿ ಪರಿವರ್ತಿತವಾಗುತ್ತಿದೆ. ಮೇಲಧಿಕಾರಿಯಿಂದ ಹಿಡಿದು ತಳಮಟ್ಟದ ನೌಕರರವರೆಗೆ ಅಪ್ರಬುದ್ಧತೆಯು ತಾಂಡವವಾಡುತ್ತಿದ್ದು ಅನೇಕ ಮಜಲುಗಳಲ್ಲಿ ಅವ್ಯವಸ್ಥೆಯು ಕಣ್ಣಿಗೆ ರಾಚುತ್ತವೆ. ಇವಕ್ಕೆಲ್ಲ ಒಂದೇ ಒಂದು ನಿದರ್ಶನವೆಂದರೆ, ಜಂಬೂಸವಾರಿ ಮೆರವಣಿಗೆ ಎನ್ನಬಹುದು. ನನ್ನ ಸಂಗ್ರಹದಲ್ಲಿರುವ 1913 ರ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದ ಅಂಬಾರಿ ಮೆರವಣಿಗೆಯ ಚಿತ್ರದಲ್ಲಿ ಅಂಬಾರಿಯ ಮುಂದಿನ ಬಹುದೂರವು ತೆರವಾಗಿರುತ್ತಿತ್ತು. ಅಂಬಾರಿ ಆನೆಯು ಆಪಾದಮಸ್ತಕ (ಕಾಲಿನಿಂದ ಕಲಶದವರೆಗೆ) ಗೋಚರವಾಗುತ್ತಿದ್ದು, ಆಳರಸರ ಕಟ್ಟು–ನಿಟ್ಟಿನ ವ್ಯವಸ್ಥಿತ ಉತ್ಸವವಾಗಿ ಕಂಗೊಳಿಸುತ್ತದೆ. ಆದರೆ, ಇತ್ತೀಚಿನ ದಶಮಾನಗಳಲ್ಲಿ ಪುಡಿ–ಪುಕ್ಕಗಳಿಂದ ತುಂಬಿ–ತುಳುಕುವ ಪರಿಸರದಲ್ಲಿ ಆನೆಯ ಮುಖಭಾಗವು ಕಂಡರೆ ಅದೇ ಭಾಗ್ಯವೆನಿಸೀತು! ಇನ್ನು ಅಂಬಾರಿಗೂ ಅತಿಯಾದ ಹೂವಿನ ಅಲಂಕರಣೆಯು ತುಂಬಿದ್ದು ದೇವಿಯ ಸಮರ್ಪಕ ದರ್ಶನಕ್ಕೂ ತಡೆ ಆಗಿರುವುದೂ ಉಂಟು. ಪ್ರಸ್ತುತ ಎರಡೂ ಛಾಯಾ ಚಿತ್ರಗಳಲ್ಲಿ ಈ ಅವ್ಯವಸ್ಥೆಯು ಕನ್ನಡಿಯಂತೆ ಪ್ರತಿಫಲಿಸುವುದನ್ನು ಕಾಣಬಹುದು. ಇನ್ನು, ಮೆರವಣಿಗೆಯ ವೀಕ್ಷಕ ವಿವರಣೆಯ ಬಗೆಗಂತೂ ಅನೇಕರಿಂದ ಟೀಕೆಗಳು ಕೇಳಿಬಂದಿವೆ. ಹೌದಲ್ಲವೇ? ಸುವ್ಯವಸ್ಥೆ ಇರುವುದಕ್ಕೆ ಇದೇನು ಆಳರಸರ ನವರಾತ್ರಿಯೇ? ಅಲ್ಲ, ಇದು "ಅಪ್ರಬುದ್ಧರ ದೊಂಬಿ ದಸರಾ"!

(ಕ್ಷಮಿಸಿ. ನಾನು ಟೀಕಿಸಿ ಆನಂದಿಸುವವರ ಜಾಯಮಾನದವನಲ್ಲ. ಬದಲಿಗೆ, ಅರಸರ ಕಾಲದ ಮೆರವಣಿಗೆಯನ್ನೂ ನೇರವಾಗಿ (1960 ರಿಂದ 1969ರ ವರೆಗೆ) ಕಂಡ ಕಣ್ಣುಗಳ ನೋವಿನ ಬಡಬಡಿಕೆಯೇ ಇದಾಗಿದೆ).

■ ಮೈ.ನಾ.ಶರ್ಮಾ, ಬೆಂಗಳೂರು

ದಸರಾ ಉಪಸಮಿತಿಗಳ ಅಗತ್ಯವೇನು?

ಮಾನ್ಯರೆ,

ರಾಜ್ಯ ಸರ್ಕಾರದಿಂದ ಆಯೋಜಿಸಲ್ಪಡುತ್ತಿರುವ ಮೈಸೂರು ದಸರಾ ಮಹೋತ್ಸವ ಸಂದರ್ಭದಲ್ಲಿ ಅದರ ಸುಸೂತ್ರ ಆಚರಣೆಗಾಗಿ ಹಲವಾರು ಉಪ ಸಮಿತಿಗಳನ್ನು ರಚಿಸಿ, ಒಂದೊಂದು ಉಪ ಸಮಿತಿಗೂ ಹತ್ತಾರು ಜನ ಸದಸ್ಯರನ್ನು ನೇಮಿಸುತ್ತಾ ಬರಲಾಗುತ್ತಿದೆ. ಆದರೆ ಅಷ್ಟರಲ್ಲಾಗಲೇ ಕಾರ್ಯಕ್ರಮಗಳ ಪರಿಕಲ್ಪನೆ, ಆ ಕಾರ್ಯಕ್ರಮದ ರೂಪುರೇಷೆ, ಅತಿಥಿಗಳ ಆಯ್ಕೆ, ವಿವಿಧ ಸ್ಪರ್ಧೆಗಳಿಗೆ ಸ್ಪರ್ಧಿಗಳ ಆಯ್ಕೆ, ಕಾರ್ಯಕ್ರಮಗಳಿಗೆ ಹಣ ನಿಗದಿ, ಖರೀದಿ ವ್ಯವಹಾರಗಳು, ಆಹ್ವಾನ ಪತ್ರಿಕೆ, ಪತ್ರಿಕಾಗೋಷ್ಠಿ ಸೇರಿದಂತೆ ಎಲ್ಲ ಕೆಲಸಗಳನ್ನೂ ಉಸ್ತುವಾರಿ ಸಚಿವರು, ಶಾಸಕರು,ಸಂಸದರು ಮತ್ತು ಅಧಿಕಾರಿಗಳು ಸೇರಿ ಬಹುತೇಕ ಮುಗಿಸಿಬಿಟ್ಟಿರುತ್ತಾರೆ!

ಈ ವರ್ಷದ ಮೈಸೂರು ದಸರಾ ಕಾರ್ಯಕ್ರಮಗಳು ಸೆಪ್ಟೆಂಬರ್ 26 ರಿಂದ ಪ್ರಾರಂಭವಾಗಿದ್ದರೆ, ದಿನಾಂಕ 29 ರಂದು ಉಪ ಸಮಿತಿಗಳ ಪಟ್ಟಿ ಅಂತಿಮಗೊಳಿಸಿ ಆದೇಶ ಹೊರಡಿಸಲಾಗಿದೆ. ಆ ಸದಸ್ಯರು ತಮ್ಮ ಗುರುತಿನ ಚೀಟಿ ಪಡೆಯುವಷ್ಟರಲ್ಲಿ ಮತ್ತೆರಡು ದಿನ ಕಳೆದುಹೋಗಿದೆ. ಬಹುತೇಕ ಉಪ ಸಮಿತಿಗಳ ಕಾರ್ಯಚಟುವಟಿಕೆಗಳು ಮುಂದಿನ ಒಂದು ಅಥವಾ ಎರಡು ದಿವಸಗಳಲ್ಲಿ ಮುಗಿದೇ ಹೋಗಿದೆ!

ಯಾವ ಸಲಹೆ–ಸೂಚನೆಗಳನ್ನು ನೀಡಲೂ ಅವಕಾಶವಿಲ್ಲದ, ಯಾವ ನಿರ್ಧಾರಗಳನ್ನೂ ಕೈಗೊಳ್ಳಲಾಗದ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಅಗತ್ಯವಾದರೂ ಏನು? ರಾಜಕಾರಣಿಗಳು ಮತ್ತು ಅಧಿಕಾರಿಗಳು ಸೇರಿ ಎಸಗಿರುವ ವೈಫಲ್ಯ/ಅಕ್ರಮಗಳನ್ನು "ಇದು ಸಮಿತಿಯ ತೀರ್ಮಾನ" ಎನ್ನುವ ಮೂಲಕ ತಪ್ಪುಗಳನ್ನು ಅಧಿಕಾರೇತರ ಸದಸ್ಯರ ತಲೆಗೆ ಹೊರಿಸುವ ಸಲುವಾಗಿ ಈ ಪ್ರಹಸನವೇ? ಗಣ್ಯರ ಜೊತೆಗೆ ಫೋಟೋ ತೆಗೆಸಿಕೊಳ್ಳಬಹುದೆನ್ನುವ, ಒಂದೆರಡು ದಸರಾ ಪಾಸ್ ಪಡೆದುಕೊಳ್ಳಬಹುದೆನ್ನುವ ಆಮಿಷವೊಡ್ಡಿ ಕೇವಲ ಎರಡು–ಮೂರು ದಿನಕ್ಕಾಗಿ ಸದಸ್ಯರನ್ನು ನೇಮಿಸುವುದು ಎಷ್ಟು ಸರಿ?

ಪಾಪ, ಯುವ ಸಂಭ್ರಮ ಮುಗಿಯುವ ಹಿಂದಿನ ದಿನ ಅದರ ಅಧ್ಯಕ್ಷರ ನೇಮಕವಾಯಿತು. ಇದರ ಸಾರ್ಥಕ ಏನು ಸ್ವಾಮಿ? ಮುಂಬರುವ ವರ್ಷಗಳಲಾದರೂ ಉಪ ಸಮಿತಿಗಳ ಸದಸ್ಯರನ್ನು ದಸರಾ ಮಹೋತ್ಸವದ ಪ್ರಾರಂಭಕ್ಕೂ ಕನಿಷ್ಠ 15–20 ದಿವಸ ಮುಂಚಿತವಾಗಿ ನೇಮಿಸಬೇಕು ಅಥವಾ ಈ ಅಗತ್ಯವೇ ಇಲ್ಲದ ಸಂಪ್ರದಾಯವನ್ನು ನಿಲ್ಲಿಸುವ ಮೂಲಕ ಅನಗತ್ಯ ಹೊರೆಯನ್ನು ತಪ್ಪಿಸಬೇಕು ಎಂದು ಈ ಮೂಲಕ ಸರ್ಕಾರವನ್ನು ಆಗ್ರಹಿಸುತ್ತಿದ್ದೇನೆ.

■ ಪ್ರವೀಣ್‌ಕುಮಾರ್ ಮಾವಿನಕಾಡು, ಸರಸ್ವತಿಪುರಂ, ಮೈಸೂರು

ದಸರಾ ವೈವಿಧ್ಯಮಯ ಕಾರ್ಯಕ್ರಮಗಳನ್ನು ಮನೆ ಮನೆಗಳಿಗೆ ತಲುಪಿಸಿದ 'ಮೈಸೂರು ಮಿತ್ರ'

ಮಾನ್ಯರೆ,

ವಿಶ್ವ ವಿಖ್ಯಾತ ಕನ್ನಡ ನಾಡಿನ ಸಾಂಸ್ಕೃತಿಕ ರಾಜಧಾನಿ ಮೈಸೂರಿನ ದಸರಾ ಹಬ್ಬವನ್ನು ಅತ್ಯಂತ ವೈಭವಯುತವಾಗಿ ಆಚರಿಸಲಾಯಿತು. ಕಳೆದ ಎರಡು ವರ್ಷಗಳ ಹಿಂದೆ ಕೊರೊನಾ ಮಹಾಮಾರಿಯ ಕರಿನೆರಳಿನಿಂದ ಸರಳವಾಗಿ ಆಚರಿಸಿದ್ದು, ಈ ಬಾರಿ ಯಾವುದೇ ಆತಂಕವಿಲ್ಲದೆ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗಿದೆ. ಪ್ರತಿನಿತ್ಯ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸಿತು. ಸಂಜೆಯಾಗುತ್ತಿದ್ದಂತೆ ನಗರದ ಸುತ್ತಮುತ್ತ ಎಲ್ಲಿ ನೋಡಿದರೂ ಜಗಮಗಿಸುವ ವಿದ್ಯುತ್ ದೀಪಾಲಂಕಾರದಿಂದ ಕಣ್ಮನ ಸೆಳೆಯುತ್ತಿತ್ತು. ಒಂಬತ್ತು ದಿನಗಳ ಕಾಲ ಅರಮನೆ ಆವರಣದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮ, ಯುವ ದಸರಾ, ಯುವ ಸಂಭ್ರಮ, ದಸರಾ ಕುಸ್ತಿ ಇನ್ನಿತರ ವೈವಿಧ್ಯಮಯ ಕಾರ್ಯಕ್ರಮಗಳ ಸಚಿತ್ರ ವರದಿಯನ್ನು 'ಮೈಸೂರು ಮಿತ್ರ' ವರ್ಣರಂಜಿತವಾಗಿ ದಿನನಿತ್ಯ ಪ್ರತ್ಯೇಕ ಪುಟ ಮೀಸಲಿಟ್ಟು ಓದುಗರನ್ನು ಮಂತ್ರ ಮುಗ್ಧಗೊಳಿಸಿದೆ. ಹಾಗೂ ದಸರಾ ಪ್ರಯುಕ್ತ ನಗರದಲ್ಲಿ ನಡೆಯುವಂತಹ ಕಾರ್ಯಕ್ರಮಗಳ ವಿವರ ಪ್ರವಾಸಿಗರಿಗೆ ಮಾರ್ಗದರ್ಶಿಯಾಗಿದೆ. ದಸರಾ ಬಗ್ಗೆ ಬಹಳ ಅಚ್ಚುಕಟ್ಟಾಗಿ ವರದಿ ಮಾಡಿದ 'ಮಿತ್ರ'ನಿಗೆ ವಂದನೆಗಳು.


■ ಎಸ್.ರಾಜಗೋಪಾಲ್, ಗಾಂಧಿನಗರ, ಮೈಸೂರು.




ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಭಾರತದ ದಿಟ್ಟ ನಡೆಗೆ ಮತ್ತೊಂದು ಸಾಕ್ಷಿ



ನರೇಂದ್ರ ಮೋದಿ



ವ್ಲಾಡಿಮಿರ್ ಪುಟಿನ್



ಇಬ್ರಾಹಿಂ ರೈಸಿ

2014ರವರೆಗೆ ಜಾಗತಿಕ ವೇದಿಕೆಗಳಲ್ಲಿ ಭಾರತದ ಸ್ಥಿತಿ ಲೆಕ್ಕಕ್ಕುಂಟು ಆಟಕ್ಕಿಲ್ಲ ಎಂಬಂತಿತ್ತು. ಸಣ್ಣ ಪುಟ್ಟ ದೇಶಗಳು ಭಾರತವನ್ನು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ದೇಶದಲ್ಲಿ ಭಯೋತ್ಪಾದಕ ಕೃತ್ಯಗಳು ಘಟಿಸಿದಾಗಲೆಲ್ಲ ಉನ್ನತ ನಾಯಕರು, ಅಧಿಕಾರಿಗಳು, ಪಾಕ್ ಅನ್ನು ನಿಯಂತ್ರಿಸುವಂತೆ, ಪಾಕ್‌ಗೆ ಬುದ್ಧಿವಾದ ಹೇಳುವಂತೆ ಅಮೇರಿಕದ ಅಧ್ಯಕ್ಷರನ್ನು ಒತ್ತಾಯಿಸುವ ದೇಶ ತಲೆ ತಗ್ಗಿಸುವಂತಹ ದೃಶ್ಯಗಳು ಸಾಮಾನ್ಯವಾಗಿದ್ದವು. 2014ರ ಚುನಾವಣೆ ದೇಶದೊಳಗಿನ ಚಿತ್ರಣವನ್ನೇ ಬದಲಿಸಿತು. ಮೋದಿ ಪ್ರಧಾನಿಯಾದರು. ದೇಶ ಅದುವರೆಗೆ ಅನುಸರಿಸುತ್ತಿದ್ದ ರಕ್ಷಣಾತ್ಮಕ ವಿದೇಶಾಂಗ ನೀತಿ ಆಕ್ರಮಣಕಾರಿಯಾಗಿ ಪರಿವರ್ತಿತವಾಯಿತು. ಇಂಡಿಯಾ ಫಸ್ಟ್ (ಭಾರತ ಪ್ರಥಮ) ವಿದೇಶ ನೀತಿಯ ಹೊಸ ಮಂತ್ರವಾಯಿತು. ಈ ನೀತಿಯನುಸಾರ ಭಾರತವು ರಷ್ಯಾದಿಂದ ಎಸ್.400 ಕ್ಷಿಪಣಿ ರಕ್ಷಣಾ ವ್ಯವಸ್ಥೆ ಖರೀದಿ ಸಂಬಂಧ ಅಮೆರಿಕವು ಆಕ್ಷೇಪಿಸಿ, ನಿರ್ಬಂಧಗಳ ಬೆದರಿಕೆ ಹಾಕಿದಾಗ ಭಾರತವು ತನ್ನ ರಕ್ಷಣಾ ಸಂಬಂಧ ವಿಷಯಗಳನ್ನು ಆಯ್ಕೆ ಮಾಡುವಲ್ಲಿ ಸ್ವತಂತ್ರವಾಗಿದೆಯೆಂದು ಅಮೇರಿಕದ ಬಾಯಿ ಮುಚ್ಚಿಸಿತು. ರಷ್ಯಾ ದಿಂದ ತೈಲ, ಅನಿಲ ಖರೀದಿ ಬಗ್ಗೆ ಯೂರೋ ಪಿಯನ್ ಒಕ್ಕೂಟದ ಆಕ್ಷೇಪಕ್ಕೂ ಭಾರತವು ದಿಟ್ಟ ಪ್ರತ್ಯುತ್ತರ ನೀಡಿತು. ಈ ರೀತಿ ಭಾರತ ಅನುಸರಿಸುತ್ತಿರುವ ಸ್ವತಂತ್ರ ವಿದೇಶ ನೀತಿಯು ಇತ್ತೀಚೆಗೆ ಮುಕ್ತಾಯಗೊಂಡ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಓ) ಶೃಂಗ ಸಭೆಯಲ್ಲೂ ಪ್ರತಿಫಲಿಸಿತು.

ಕಳೆದ ತಿಂಗಳ ದಿ. 15, 16 ರಂದು ಉಜ್ಬೆಕಿಸ್ತಾನದ ರಾಜಧಾನಿ ಸಮರ್‌ಖಂಡ್‌ನಲ್ಲಿ ಎಸ್‌ಸಿಓ ಎಂಟು ದೇಶಗಳ 22ನೇ ಶೃಂಗ ಸಭೆ ನಡೆಯಿತು. ಪ್ರಧಾನಿ ಮೋದಿಯವರು, ಪ್ರಾದೇಶಿಕ ನಾಯಕರೊಂದಿಗೆ ವ್ಯವಹರಿಸುವಾಗ ತಮ್ಮ ಸರ್ಕಾರವು ಜಾಗತಿಕ ಮಹತ್ವದ ವಿಷಯಗಳಿಗೆ ಸಂಬಂಧಿಸಿಂತೆ ತನ್ನ ನಿರ್ಧಾರಿತ ಧೋರಣೆಗಳಿಗನುಗುಣವಾಗಿ ದೃಢ ಹಾಗೂ ನಿರ್ಣಾಯಕ ರೀತಿಯಲ್ಲಿ ವರ್ತಿಸುವ ಸಾಮರ್ಥ್ಯ ತೋರಿಸಿದರು. ಈ ಶೃಂಗವು ರಷ್ಯಾದ ಮುಂದುವರಿ ದಿರುವ ಉಕ್ರೇನ್ ಮೇಲಿನ ಆಕ್ರಮಣ ಹಾಗೂ ಚೀನಾದಿಂದ ತೈವಾನ್ ಮೇಲೆ ಮಿಲಿಟರಿ ಆಕ್ರಮಣದ ಬೆದರಿಕೆಯಂತಹ ಭೂ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ ನಡೆಯಿತು.

1996 ರಲ್ಲಿ ಚೀನಾದ ವಿಶೇಷ ಆಸಕ್ತಿಯಿಂದ ಪ್ರಾರಂಭವಾದ ಐದು ದೇಶಗಳ ಈ ಸಂಘಟನೆ ಈಗ ಜಾಗತಿಕವಾಗಿಯೂ ಅತ್ಯಂತ ಪ್ರಭಾವಿಯಾಗಿರುವ ಎಂಟು ದೇಶಗಳ ಸಂಘಟನೆಯಾಗಿದೆ. ಮುಂದಿನ ದಿನಗಳಲ್ಲಿ ಇರಾನ್ ಸಹಿತ ಇನ್ನೂ ಕೆಲವು ದೇಶಗಳು ಶಾಶ್ವತ ಸದಸ್ಯರಾಗುವ ಸಾಧ್ಯತೆ ಹೆಚ್ಚುತ್ತಿದೆ. ಇದರೊಂದಿಗೆ ವಿಭಿನ್ನ ರಾಜಕೀಯ, ಆಡಳಿತ ವ್ಯವಸ್ಥೆಗಳನ್ನು ಹೊಂದಿರುವ ಸೌದಿ ಅರೇಬಿಯಾ, ಈಜಿಪ್ಟ್, ಟರ್ಕಿ, ಬೆಲಾರೂಸ್ ಮತ್ತು ಮಂಗೋಲಿಯಾ ದೇಶಗಳಿಗೆ ಪ್ರಸ್ತುತ ನಿರೀಕ್ಷಕರ ಸ್ಥಾನ ನೀಡಲಾಗಿದೆ. ಈ ರೀತಿ ಜಗತ್ತಿನಲ್ಲಿ ಅತೀ ಹೆಚ್ಚು ಜನಸಂಖ್ಯೆ, ಬೃಹತ್ ಆರ್ಥಿಕತೆ ಹೊಂದಿರುವ, ಮಿಲಿಟರಿಯಾಗಿಯೂ ಶಕ್ತಿಶಾಲಿಗಳಾಗಿರುವ ದೇಶಗಳಿರುವ ಎಸ್‌ಸಿಓ ಇಂದು ಯೂರೋಪಿಯನ್ ಪ್ರಾದೇಶಿಕ ಗುಂಪುಗಳಿಗಿಂತ ಪ್ರಭಾವಿ ಹಾಗೂ ಶಕ್ತಿಶಾಲಿ ಸಂಘಟನೆಯಾಗುವ ರೀತಿಯಲ್ಲಿ ಬಲಗೊಳ್ಳುತ್ತಿವೆ.

ಎಸ್‌ಸಿಓ ಶೃಂಗ ಸಭೆಯಲ್ಲಿ ಪ್ರಧಾನಿ ಮೋದಿಯವರು, ಪ್ರಸ್ತುತ ಜಗತ್ತಿನಲ್ಲಿ ನಡೆಯುತ್ತಿರುವ ಬಹುತೇಕ ಎಲ್ಲಾ ವಿದ್ಯಮಾನಗಳನ್ನು ಸ್ಪರ್ಶ ಮಾಡಿದರು. ಎಸ್‌ಸಿಓದಲ್ಲಿ ಬರುವ ಎಲ್ಲಾ ದೇಶಗಳ ಮಧ್ಯೆ ಉತ್ತಮ, ವಿಶ್ವಾಸಾರ್ಹ, ಚೇತೋಹಾರಿ ಹಾಗೂ ವಿಭಿನ್ನ ಮಾದರಿಯ ಪೂರೈಕೆ ಸರಪಣಿಯನ್ನು ಅಭಿವೃದ್ಧಿಪಡಿಸಬೇಕೆಂದು ಒತ್ತಾಯಿಸಿದರು. ಪಾಕಿಸ್ತಾನವನ್ನು ಪರೋಕ್ಷವಾಗಿ ಟೀಕಿಸುತ್ತಾ ಸದಸ್ಯ ದೇಶಗಳೊಳಗೆ ಉತ್ತಮ ವಿಶ್ವಾಸಾರ್ಹ ಸಂಪರ್ಕ ಸಂವಹನವಿರುವುದರಿಂದ ಸಾರಿಗೆ, ಸಾಗಾಟಗಳ ಮೇಲೆ ಯಾವುದೇ ರೀತಿಯ ನಿಷೇಧ, ನಿರ್ಬಂಧಗಳಿರಬಾರದೆಂದು ತಿಳಿಸಿದರು.

ಭಾರತವನ್ನು ಪ್ರಾದೇಶಿಕ ಉತ್ಪಾದನಾ ಹಬ್ ಮಾಡುವ ಬಗ್ಗೆ ಒತ್ತು ನೀಡಿದರು. ಆಹಾರ ಭದ್ರತೆಯ ಸಮಸ್ಯೆಗೆ ಅಗ್ಗದ ಹಾಗೂ ಪೌಷ್ಟಿಕವಾದ ಸಿರಿಧಾನ್ಯಗಳು (ಮಿಲೆಟ್ಸ್) ಪರ್ಯಾಯವೆಂದು ತಿಳಿಸಿ, ಭಾರತದಲ್ಲಿ ಸಿರಿಧಾನ್ಯಗಳನ್ನು ಜನಪ್ರಿಯಗೊಳಿಸಲು ಸರಕಾರ ಕೈಗೊಂಡ ಕ್ರಮಗಳನ್ನು ಎಸ್‌ಸಿಓ ಮುಂದಿರಿಸಿದರು. ಮತ್ತು ಮುಂದುವರಿಸಿದ ತಮ್ಮ ಭಾಷಣ ದಲ್ಲಿ ಪಾಕಿಸ್ತಾನದ ಭಯೋತ್ಪಾದನೆ ಯಾಗಲಿ, ಚೀನಾದೊಡಗಿರುವ ಗಡಿ ವಿವಾದದ ಸಮಸ್ಯೆಯನ್ನಾಗಲಿ ಸ್ಪರ್ಶಿಸದೇ ಮೋದಿಯವರು ಅತ್ಯಂತ ವ್ಯಾಪಕವಾದ ವಿಶಾಲ ನೆಲೆಯಲ್ಲಿ ಯುರೇಷಿಯಾ ನಡುವೆ ಅತ್ಯುತ್ತಮ ಸಮನ್ವಯ, ಸಹಕಾರಕ್ಕೆ ಒತ್ತು ನೀಡಿದರು.

ನಡೆಯದ ಮೋದಿ–ಜಿನ್‌ಪಿಂಗ್ ಭೇಟಿ

ಇತ್ತೀಚೆಗೆ ಸೇನಾಧಿಕಾರಿ ಮಟ್ಟದ ಯಶಸ್ವಿ ಮಾತುಕತೆಯಿಂದಾಗಿ ಲಡಾಕ್ ಪ್ರದೇಶದ ಹಾಟ್‌ಸ್ಪ್ರಿಂಗ್ ವಲಯದಲ್ಲಿ ಉಭಯ ದೇಶಗಳ ಸೇನೆಗಳನ್ನು ಹಿಂದೆಗೆಯಲಾಯಿತು. ಈ ರೀತಿ ಗಡಿಯಲ್ಲಿ ಪರಿಸ್ಥಿತಿಯಲ್ಲಿ ಮೋದಿ–ಜಿನ್‌ಪಿಂಗ್ ಭೇಟಿಯಾಗುವರೆಂದು ಜಗತ್ತು ಭಾವಿಸಿತ್ತು. ಆದರೆ ಆಶ್ಚರ್ಯವೆಂದರೆ ಇದು ಸಂಭವಿಸಲಿಲ್ಲ. ವಿದೇಶಾಂಗ ಕಚೇರಿಯು ಅಂತಹ ಭೇಟಿಯಾಗಿಲ್ಲವೆಂದು ತಿಳಿಸಿತು. ಸಮರ್‌ಖಂಡ ಎರಡೂ ನಾಯಕರಿಗೆ ತಮ್ಮ ಮಧ್ಯೆ ಉಂಟಾಗಿರುವ ಅಪನಂಬಿಕೆ, ತಪ್ಪು ಕಲ್ಪನೆಗಳನ್ನು ದೂರ ಮಾಡಲು ಅವಕಾಶ ಕಲ್ಪಿಸಿತ್ತು. ಆದರೆ ಎರಡೂ ಕಡೆಯಿಂದ ಸಕಾರಾತ್ಮಕ ಸ್ಪಂದನವಾಗಲಿಲ್ಲ. ಉಭಯ ನಾಯಕರ ಮಧ್ಯೆ ಸಂಬಂಧ ಸುಧಾರಿಸಿದಲ್ಲಿ ಎರಡೂ ದೇಶದ ಆರ್ಥಿಕತೆಗೆ ಆಗುವ ಲಾಭ ಗೊತ್ತಿದ್ದರೂ ಹಿಂದಿನ ಗಾಯಗಳ ನೋವು ಇಬ್ಬರು ನಾಯಕರಿಗೆ ಕಾಡುತ್ತಿದೆ.

ಮೋದಿ–ಪುಟಿನ್ ಭೇಟಿ


ಮುಂದುವರಿದಿರುವ ಯುಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ನಡೆದ ಮೋದಿ–ಪುಟಿನ್ ದ್ವಿಪಕ್ಷೀಯ ಸಭೆ ಜಗತ್ತಿನ ವಿಶೇಷ ಗಮನ ಸೆಳೆಯಿತು. ಮೋದಿಯವರು ಪುಟಿನ್‌ರನ್ನು ಉದ್ದೇಶಿಸಿ ನೇರವಾದ ಶಬ್ದಗಳಲ್ಲಿ ಈಗ ಯುದ್ಧದ ಸಮಯವಲ್ಲ ಎಂದು ತಿಳಿಸಿದರು. ಪುಟಿನ್ ಅವರು ಮೋದಿಯವರ ಸಲಹಾ ರೂಪದ ಆಗ್ರಹಕ್ಕೆ ತಕ್ಷಣ ಸ್ಪಂದಿಸಿ, ಯುದ್ಧವನ್ನು ಶೀಘ್ರವೇ ಕೊನೆಗಾಣಿಸುವ ಭರವಸೆ ನೀಡಿದರು. ಯುಕ್ರೇನ್ ಯುದ್ಧದ ಪರಿಣಾಮಗಳ ಬಗ್ಗೆ ಜಗತ್ತಿನ ಚಿಂತೆಯನ್ನು ಭಾರತದಂತೆ ಚೀನಾ ಕೂಡಾ ನೇರ ಶಬ್ದಗಳಲ್ಲಿ ಪುಟಿನ್‌ಗೆ ಮನವರಿಕೆ ಮಾಡಿದರು. ಮೋದಿ ಹೇಳಿಕೆಯನ್ನು ಅಮೇರಿಕವು ಸ್ವಾಗತಿಸಿತು. ಯಾವುದೇ ನೆರೆ ದೇಶಗಳನ್ನು ಒತ್ತಾಯದಿಂದ ಪಡೆದುಕೊಳ್ಳಬಾರದು ಎಂದು ಅಮೇರಿಕ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವಾನ್ ಹೇಳಿದ್ದಾರೆ. ಅಮೇರಿಕದ ಪ್ರಮುಖ ಸುದ್ದಿ ಮಾಧ್ಯಮಗಳು ಮೋದಿಯವರು This is no time for war ಎಂದು ಹೇಳಿದ್ದನ್ನು ಮುಖ್ಯ ತಲೆಬರಹದಲ್ಲಿ ಪ್ರಕಟಿಸಿದವು. ವಾಷಿಂಗ್ಟನ್ ಪೋಸ್ಟ್, ನ್ಯೂಯಾರ್ಕ್ ಟೈಮ್ಸ್ ಮೊದಲಾದ ಪ್ರಮುಖ ಮುಂಚೂಣಿ ಪತ್ರಿಕೆಗಳು ವ್ಯಾಪಕ ಪ್ರಚಾರ ನೀಡಿದವು.

ಇರಾನ್ ಅಧ್ಯಕ್ಷರೊಂದಿಗೆ ಭೇಟಿ


ಸಮರ್‌ಖಂಡ್‌ನಲ್ಲಿ ಪ್ರಧಾನಿ ಮೋದಿಯವರು ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿಯವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಉಭಯ ದೇಶಗಳ ನಡುವೆ ಆರ್ಥಿಕ ಸಹಕಾರ ವಿಸ್ತರಿಸುವ ಕ್ಷೇತ್ರಗಳಾದ ಇಂಧನ ವಾಣಿಜ್ಯ ಹಾಗೂ ಸಂಪರ್ಕ ನಿರ್ಮಾಣಗೊಳ್ಳುತ್ತಿರುವ ಶಾಹಿದ್ ಬೆಹಸ್ತಿ ಟರ್ಮಿನಲ್‌ನ ಅಭಿವೃದ್ಧಿಯ ಪರಿಶೀಲನೆ ನಡೆಸಿದರು. ಆರ್ಥಿಕ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ತರಲಿರುವ ವಿಷಯ ಪ್ರಸ್ತಾಪವಾಯಿತು. ಇರಾನ್ ಭಾರತಕ್ಕೆ ಮಾಡುವ ಕಚ್ಚಾತೈಲ ರಫ್ತಿಗೆ ಪ್ರತಿಯಾಗಿ ಭಾರತವು ಡಾಲರ್ ಬದಲು ರೂಪಾಯಿಯಲ್ಲಿ ಪಾವತಿಗೆ ಸಮ್ಮತಿಸಿರುವುದು ಅತ್ಯಂತ ಐತಿಹಾಸಿಕ ಉಪಕ್ರಮವಾಗಿದೆ. ಜಗತ್ತಿನಲ್ಲಿ ಭಾರತದ ರೂಪಾಯಿಗೆ ಬೇಡಿಕೆ ಹೆಚ್ಚುತ್ತಿರುವುದರ ಶುಭ ಲಕ್ಷಣವಾಗಿದೆ. ಇದು ಭಾರತದ ಡಾಲರ್ ಮೇಲಿನ ಅವಲಂಬನೆ ಕಡಿಮೆ ಮಾಡಲಿದೆ. ಆದ್ದರಿಂದ ಈ ನಡೆ ಅಮೇರಿಕದ ನಿದ್ದೆಗೆಡಿಸಿದೆ. ಈ ಪಾವತಿ ವ್ಯವಸ್ಥೆ ಎರಡೂ ದೇಶಗಳನ್ನೂ ವಾಣಿಜ್ಯ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಇನ್ನೂ ಸನಿಹಕ್ಕೆ ತರಲಿದೆ.

ದಸರಾ ಸಂಗೀತೋತ್ಸವದ ಗತ ವೈಭವ...

ಭೀಮ್‌ಸೇನ್ ಜೋಶಿ ಗಾಯನಕ್ಕೆ ಮಾರುಹೋದ ಮುಖ್ಯಮಂತ್ರಿ ಗುಂಡೂರಾಯರು



ಭೀಮ್‌ಸೇನ್ ಜೋಶಿ



ಗುಂಡೂರಾಯರು



✍... ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ, ಮೈಸೂರು

ಅದು 1982. ಅರಮನೆ ಸಂಗೀತೋತ್ಸವದ ಉದ್ಘಾಟನೆ ದರ್ಬಾರ್ ಹಾಲ್‌ನಲ್ಲಿ ನಡೆಯಲಿತ್ತು. ಮಹಾರಾಜರ ಕಾಲದಲ್ಲಿ ನಡೆಯುತ್ತಿದ್ದಂತೆಯೇ ದರ್ಬಾರ್ ಹಾಲ್ ಸಜ್ಜಾಗಿತ್ತು. ಮುಖ್ಯಮಂತ್ರಿ ಆರ್.ಗುಂಡೂರಾಯರೇ ಉದ್ಘಾಟಕರು. ಅವರ ಇಡೀ ಮಂತ್ರಿ ಮಂಡಲವೇ ಅಲ್ಲಿ ನೆರೆದಿತ್ತು. ದರ್ಬಾರ್ ಹಾಲ್‌ಗೆ ಪ್ರವೇಶ ಪಾಸ್ ಇದ್ದ ಆಹ್ವಾನಿತ ಗಣ್ಯರಿಗೆ ಮಾತ್ರ. ಈಗಿನಂತೆ ಅರಮನೆ ಮುಂಭಾಗದ ನೆಲ ವೇದಿಕೆಯಲ್ಲಿ ಸಂಗೀತೋತ್ಸವ ನಡೆಯುತ್ತಿರಲಿಲ್ಲ. ಜನ ಸಾಮಾನ್ಯರು ಹೊರ ಆವರಣದಲ್ಲಿ ಕುಳಿತು ಸಂಗೀತೋತ್ಸವ ಆನಂದಿಸಬಹುದಿತ್ತು.

ಅಂತೂ ಕಾರ್ಯಕ್ರಮ ಉದ್ಘಾಟಿಸಿದ ಮುಖ್ಯಮಂತ್ರಿಗಳು, ತಮ್ಮ ಸ್ಥಳದಲ್ಲಿ ಹೋಗಿ ಕುಳಿತರು. ಉತ್ಸವದ ಮೊತ್ತ ಮೊದಲ ಕಾರ್ಯಕ್ರಮವೇ ಪಂಡಿತ ಭೀಮಸೇನ ಜೋಷಿ ಅವರದ್ದು. ಜೋಷಿಯವರು ಧಾರವಾಡದ ಕನ್ನಡಿಗರು. ಸಂಧ್ಯಾರಾಗ ಚಿತ್ರದ 'ನಂಬಿದೆ ನಿನ್ನ ನಾದ ದೇವತೆಯೇ' ಗೀತೆಯನ್ನು ಹಾಡಿದ್ದವರು ಎಂಬುದಷ್ಟೇ ಅವರ ಬಗ್ಗೆ ನನಗಿದ್ದ ತಿಳುವಳಿಕೆ. 'ಭಾಗ್ಯದ ಲಕ್ಷ್ಮೀ ಬಾರಮ್ಮ' ಮುಂತಾದ ಕೀರ್ತನೆಗಳನ್ನು ಹಾಡಿದ್ದ ಗಾಯಕರು ಎಂದೂ ಗೊತ್ತಿತ್ತು. ಭಾರತ ರತ್ನ ಪುರಸ್ಕಾರ ಬಂದ ಮೇಲೆಯೇ ಅವರ ಸಂಗೀತದ ಮಹತ್ತು ಮತ್ತು ಬೃಹತ್ತು ಎರಡೂ ಬಹು ಜನರಿಗೆ ಗೊತ್ತಾದದ್ದು. ಅವರೊಂದಿಗೆ ಭಾರತ ರತ್ನ ಪ್ರಶಸ್ತಿ ಪಡೆದ ಪಂಡಿತ ರವಿಶಂಕರ್ ಬಗ್ಗೆ ಗಾಯಕ ಪಂ.ಜಸ್‌ರಾಜ್ ಮುಂತಾದವರು ಕಟುವಾಗಿ ಟೀಕಿಸಿದ್ದರು. ಆದರೆ ಜೋಷಿಯವರು ಭಾರತ ರತ್ನ ಪ್ರಶಸ್ತಿಗೆ ಭಾಜನರಾದಾಗ, ಅವರ ಗಾಯನ ಪ್ರತಿಭೆ ಕುರಿತಂತೆ ಒಂದೇ ಒಂದೂ ಅಪಸ್ವರ ಬರಲಿಲ್ಲ. ಆ ಪುರಸ್ಕಾರಕ್ಕೆ ಅವರಲ್ಲದೆ ಮತ್ತಾರು ಅರ್ಹರು ಎಂಬ ಸರ್ವ ಸಮ್ಮತ ಭಾವ ಎಲ್ಲರಲ್ಲಿತ್ತು.

ಆಗೆಲ್ಲಾ ಆಕಾಶವಾಣಿಯಲ್ಲಿ ದಸರಾ ಸಂಗೀತ ಕಾರ್ಯಕ್ರಮ ನೇರವಾಗಿ ಪ್ರಸಾರವಾಗುತ್ತಿದ್ದುದರಿಂದ ಸಂಗೀತ ಕಛೇರಿ ಕರಾರುವಾಕ್ಕಾಗಿ ಏಳು ಗಂಟೆಗೆ ಶುರುವಾಗಬೇಕಿತ್ತು ಅರಮನೆಯ ದರ್ಬಾರ್ ಅಂಗಳ ವೆಂದರೆ ಯಾವುದೋ ಸಾಮಾನ್ಯ ವೇದಿಕೆಯಲ್ಲ. ಅದಕ್ಕೆ ವೈಭವದ ಐತಿಹಾಸಿಕ ಪರಂಪರೆ ಇತ್ತು. ಅಲ್ಲಿ ಹಾಡುವುದಕ್ಕೆ ಅವಕಾಶ ಸಿಕ್ಕರೆ ಅದೇ ಪುಣ್ಯವೆಂದು ಬಹುತೇಕ ಎಲ್ಲಾ ಕಲಾವಿದರೂ ನಂಬಿದ್ದರು. ಗಣ್ಯರು ಆಸೀನರಾಗಿದ್ದ ಸಭಾಂಗಣದ ಎಡ ಪಾರ್ಶ್ವದಲ್ಲಿ ನನಗೆ ಡ್ಯೂಟಿ. ಅಲ್ಲಿದ್ದವರು ಜೋಷಿಯವರ ಪ್ರೌಢಿಮೆ ಕುರಿತು ಮಾತಾಡಿ ಕೊಳ್ಳುತ್ತಿದ್ದರು. ಅವರಿಗಾಗಿ ಅಭಿಮಾನಿಯೊಬ್ಬರು ಪೂನಾದಲ್ಲಿ ಸುಸಜ್ಜಿತ ಬಂಗಲೆಯನ್ನೇ ಕಟ್ಟಿಸಿಕೊಟ್ಟಿದ್ದಾರಂತೆ . ಹಿಂದೂಸ್ತಾನಿ ಸಂಗೀತ ಗಾರರಲ್ಲೇ ಅತ್ಯಂತ ಅಗ್ರಗಣ್ಯರು... ಇತ್ಯಾದಿ.

ಆಕಾಶವಾಣಿಯ ಏಳು ಗಂಟೆಯಾಗಲು ಇನ್ನೂ ಸಮಯವಿತ್ತು. ಹೊಳೆಯುವ ಸಿಲ್ಕ್ ಜುಬ್ಬಾ ಪಂಚೆ ಧರಿಸಿ ಪಕ್ಕವಾದ್ಯದವರೊಂದಿಗೆ ಜೋಷಿಯವರು ವೇದಿಕೆಯಲ್ಲಿ ಆಸೀನರಾಗಿದ್ದರು. ತಬಲಾ ತಂಬೂರಿಗಳೆಲ್ಲ ಶೃತಿಗೊಳ್ಳುತ್ತಿದ್ದವು. ಆದರೂ ಪಂಡಿತ ಭೀಮಸೇನ ಜೋಷಿಯವರೇಕೋ ಅನ್ಯಮನಸ್ಕರಾದಂತಿತ್ತು. ಏಳು ಗಂಟೆಗಾಗಿಯೇ ಕಾಯುತ್ತಿದ್ದ ಅವರು ಮುಖ್ಯಮಂತ್ರಿಗಳತ್ತ ದಿಟ್ಟಿಸಿ ನೋಡುತ್ತಿದ್ದರು. ಅವರ ಮುಖ ಇವರತ್ತ ತಿರುಗಿದಾಗ ಕೈ ಮುಗಿದರು. ಅದೇ ವೇಳೆಗೆ ಗುಂಡೂರಾಯರನ್ನು, ಪಕ್ಕದಲ್ಲಿ ಬೇರ್‍ಯಾರೋ ಮಾತಾಡಿಸುತ್ತಿದ್ದರು. ಅವರು ಇತ್ತ ನೋಡಲಿಲ್ಲ. ಮಾತು ಮುಗಿದ ಮೇಲೆ ಜೋಷಿಯವರು ಮತ್ತೆ ಕೈ ಮುಗಿದರು. ಅವರು ಆಗಲೂ ಗಮನಿಸಲಿಲ್ಲ .ಯಾರೋ ಹೇಳಿದರೆಂದು ಆಮೇಲೆ ಅತ್ತ ನೋಡಿದ ಗುಂಡೂರಾಯರು ಕೈ ಬೀಸಿದರು.

ಏಳಕ್ಕೆ ಇನ್ನೂ ಹತ್ತಾರು ನಿಮಿಷ ಬಾಕಿಯಿತ್ತು. ಅದೇನನ್ನಿಸಿತೋ, ಭೀಮಸೇನ ಜೋಷಿಯವರು ಎದ್ದು ನಿಂತರು. ಮುಖ್ಯಮಂತ್ರಿಗಳನ್ನು ಮಾತಾಡಿಸುವವರಂತೆ ಹೊರಟರು. ತೂರಾಟದ ನಡಿಗೆ ಅದು. ಪಂಚೆಯನ್ನೂ ಸರಿಪಡಿಸಿಕೊಳ್ಳದೆ ಹೆಜ್ಜೆ ಹಾಕಿದ್ದರಿಂದ ಜೋಲಿ ಹೊಡೆದು ಬಿದ್ದರು. ಅದೆಂತಹ ಅವಮಾನಕರ ಸನ್ನಿವೇಶವಾಯ್ತೆಂದರೆ, ಗುಂಡೂರಾಯರೂ ಕುಂತಲ್ಲೇ ಚಡಪಡಿಸಿಬಿಟ್ಟರು. ಆ ತಕ್ಷಣವೇ ಮಫ್ತಿ ಪೊಲೀಸರು ಶ್ರಮಪಟ್ಟು ಜೋಷಿಯವರನ್ನು ಕಛೇರಿ ಸ್ಥಳಕ್ಕೆ ಕರೆದೊಯ್ದು ಕೂರಿಸಿದರು.

ನಾನು ಡ್ಯೂಟಿಯಲ್ಲಿದ್ದ ಜಾಗದಲ್ಲಿ ಕುಳಿತವರ ಪೈಕಿ ಅನೇಕರು ಸಂಗೀತದಲ್ಲಿ ತೀವ್ರ ಆಸಕ್ತಿಯುಳ್ಳ ಶ್ರೋತೃಗಳು ಮತ್ತು ಜೋಷಿಯವರ ಕಟ್ಟಾ ಅಭಿಮಾನಿಗಳು. ತುಂಬ ಕಷ್ಟಪಟ್ಟು ದರ್ಬಾರ್ ಪಾಸನ್ನು ಗಿಟ್ಟಿಸಿಕೊಂಡು ಬಂದು ಕುಳಿತಿದ್ದರು. ತಮ್ಮ ಕಣ್ಮುಂದೆಯೇ ನೆಚ್ಚಿನ ಗಾಯಕನೊಬ್ಬನ ಅಧಃಪತನವನ್ನು ಕಂಡು ತುಂಬ ನೊಂದರು. ಕೆಲವರಂತೂ ಕಣ್ಣೀರು ತುಂಬಿಕೊಂಡರು. we never expected this tragic downfall of a great singer. ಒಬ್ಬರಂತೂ ಜೋರಾಗಿ ಉದ್ಗರಿಸಿದರು. ಇಡೀ ಸಭಾಂಗಣ ಅಪಶಕುನವಾದಂತೆ ಮೌನವಾಗಿತ್ತು. ಅದು ಅರಮನೆ ದರ್ಬಾರ್ ಹಾಲ್ ಆಗದೆ ಬೇರೆ ಜಾಗವಾಗಿದ್ದಿದ್ದರೆ ಜನ ತಲೆಗೊಂದು, ತಟಿಗೊಂದು ಮಾತಾಡಿ ಗಲಾಟೆ ಎಬ್ಬಿಸಿ ಬಿಡುತ್ತಿದ್ದರೇನೋ. ಒಂದು ರೀತಿ ತಮಗೇ ಅವಮಾನ ವಾದಂತೆ ಸಭಾಸದರು, ಮಂತ್ರಿಗಳು ಪೆಚ್ಚಾಗಿ ಕುಳಿತಿದ್ದರು.

ಇದೆಲ್ಲವೂ ಹತ್ತಾರು ನಿಮಿಷ ಅಷ್ಟೇ. ತಮ್ಮ ಗಡಸು ಗಂಟಲು ಸರಿಪಡಿಸಿಕೊಂಡು ಜೋಷಿಯವರು ಒಂದು ಕೀರ್ತನೆ ಶುರು ಮಾಡಿದರು. ಹೇಗೆ ಪ್ರತಿಕ್ರಯಿಸಬೇಕೋ ಗೊತ್ತಾಗದೆ ಶ್ರೋತೃಗಳು ಮೌನವಾಗಿದ್ದರು. ಅದೊಂದು ಕೀರ್ತನೆ ಗೊಗ್ಗರು. ಅಲ್ಲಿಂದ ಮುಂದಕ್ಕೆ ಜೋಷಿಯವರ ಅನನ್ಯ ಕಂಠಸಿರಿ ವಿಜೃಂಭಿಸಿತು. ಅದೇನು ರಾಗ, ಅದೇನು ಆಲಾಪ... ಅದ್ಭುತದಲ್ಲಿ ಪರಮಾದ್ಭುತ ಸಂಭವಿಸಿತು. ಅಮಲಿನ ಅಪಸವ್ಯವನ್ನು ಮರೆಸಿ ಸಂಗೀತ ಸಿರಿ ಮೆರೆಯಿತು. ಎಂದೂ ಮರೆಯಲಾಗದ ಸಂಗೀತ ಕಛೇರಿ ಅದಾಯಿತು.

ಮರೆಯಲಾಗದ ಮತ್ತೊಂದು ಘಟನೆ....

ಅದೇ ವರ್ಷ ಪೊಲೀಸ್ ಸಮೂಹ ವಾದ್ಯಮೇಳಕ್ಕೆ ಮುಖ್ಯಮಂತ್ರಿ ಗುಂಡೂರಾಯರೇ ಮುಖ್ಯ ಅತಿಥಿಗಳು. ರಾಜ್ಯದ ಎಲ್ಲೆಡೆಯಿಂದ ಬಂದಿದ್ದ 560ಕ್ಕೂ ಅಧಿಕ ಮಂದಿ ಪೊಲೀಸ್ ವಾದಕರು ವಿದ್ಯುತ್ ದೀಪಗಳಿಂದ ಝಗಮಗಿಸುತ್ತಿದ್ದ ಅರಮನೆ ಮುಂಭಾಗದಲ್ಲಿ ಕಾರ್ಯಕ್ರಮ ನಡೆಸಿಕೊಟ್ಟರು.

ಪೊಲೀಸ್ ವಾದ್ಯ ಮೇಳವೆಂದರೆ ನಿಂತ ಜಾಗದಲ್ಲಿ ಕುಳಿತೋ, ನಿಂತೋ ನಡೆಸುವ ಸಂಗೀತ ಮೇಳವಲ್ಲ. ಶಿಸ್ತುಬದ್ಧ ಹೆಜ್ಜೆಗಳನ್ನು ಹಾಕುತ್ತಾ, ಅರಮನೆ ಅಂಗಳವಿಡೀ ಸಂಚರಿಸುತ್ತಾ ಒಗ್ಗೂಡಿ ವಾದ್ಯಗಳನ್ನು ನುಡಿಸುವುದು. ಮಾರ್ಚ್ ಫಾಸ್ಟ್ ಚಲನೆಯಲ್ಲಿ ಸಂಗೀತ ಅನಾವರಣಗೊಳಿಸುವುದು. ಪ್ರತಿ ನಿಮಿಷಕ್ಕೆ ಕರಾರುವಾಕ್ಕಾದ ನೂರ ಇಪ್ಪತ್ತು ಹೆಜ್ಜೆಗಳನ್ನು ಹಾಕುತ್ತಾ, 560 ಮಂದಿ ವಾದಕರು ವಿವಿಧ ವಾದ್ಯಗಳನ್ನು ನುಡಿಸುತ್ತಾ ಅಡ್ಡಾಡಿದರೆ ಅವುಗಳಿಂದ ಹೊರ ಹೊಮ್ಮುವ ನಾದ ತರಂಗ ಎಂತಹದ್ದು ಎಂಬುದನ್ನು ನೀವೇ ಊಹಿಸಿ ನೋಡಿ.

ರೇಡಿಯೋ, ಟೇಪ್ ರೇಕಾರ್ಡರ್‌ಗಳಲ್ಲಾದರೆ ಕೇಂದ್ರಿತ ಧ್ವನಿ ಸುರುಳಿ ಹೊರ ಹೊಮ್ಮುತ್ತದೆ. ಅದು ಸೀಮಿತ ರಾಗವಾಗಬಹುದು. ಆದರೆ ಅರಮನೆ ಯಲ್ಲಿ ಸಂಚರಿಸುತ್ತಾ ಬೇರೆ ಬೇರೆ ವಾದ್ಯಗಳಿಂದ ಚಿಮ್ಮುವ ನಾದ ನೂರಾರು ದಿಕ್ಕನ್ನು ಸೀಳುತ್ತಾ ನುಗ್ಗುತ್ತದೆ. ಒಂದೊಂದು ವಾದ್ಯವೂ ನಾನಾ ನೆಲೆಗಳಲ್ಲಿ ಸಂಚರಿಸುತ್ತಿರುವುದರಿಂದ ಪ್ರತಿ ಹೆಜ್ಜೆಯಲ್ಲೂ ಧ್ವನಿ ಪ್ರತ್ಯೇಕವಾಗಿ ಹೊಮ್ಮುತ್ತದೆ.

ಇದನ್ನು ಕೇಳಿದ ಮೇಲಂತೂ ಗುಂಡೂರಾಯರು ಸಂಭ್ರಮಿತರಾದರು. ನಮ್ಮ ರಾಜ್ಯ ಪೊಲೀಸರು ಇಷ್ಟು ಸೊಗಸಾಗಿ ಸಂಗೀತ ನುಡಿಸಬಲ್ಲರೇ ಎಂದು ಬೆರಗಿನಿಂದ ಮೂರ್ನಾಲ್ಕು ಬಾರಿ ಉದ್ಗರಿಸಿದರು. ಅವರಿದ್ದ ಹತ್ತಾರು ಅಡಿಗಳ ದೂರದಲ್ಲಿ, ನಾನು ಕಾರ್ಯಕ್ರಮದ ವೀಕ್ಷಕ ವಿವರಣೆ ನೀಡುತ್ತಿದ್ದೆ. ವಾದ್ಯಮೇಳದ ನಡುವೆ, ವಿಶ್ವಮಾನ್ಯ ಸಂಗೀತಗಾರ ಪೌಲ್ ಮಾರಿಯಟ್‌ನ ಗೀತೆಯೊಂದನ್ನೀಗ ನುಡಿಸುತ್ತಾರೆ ಎಂದು ಅನೌನ್ಸ್ ಮಾಡಿದೆ. ವಾದಕರು ಆ ಗೀತೆಗಾಗಿ ವಾದ್ಯಗಳ ಜೋಡಣೆ ಮಾಡಿಕೊಳ್ಳತೊಡಗಿದರು. ಸುತ್ತಲಿದ್ದ ಸಾವಿರಾರು ಶ್ರೋತೃಗಳು ಮುಂದಿನ ಗೀತೆಗೆ ಕಿವಿ ತೆರೆದು, ಕಾತುರದಿಂದ ಕಾಯುತ್ತಿದ್ದರು.

ನಾನು ಗೀತೆಯ ಹಿನ್ನೆಲೆ ವಿವರ ನೀಡುತ್ತಾ, ಇಂಗ್ಲೀಷ್ ಬ್ಯಾಂಡ್‌ನವರೀಗ ಫ್ರೆಂಚ್ ಸಂಗೀತಗಾರ ಪೌಲ್ ಮಾರಿಯಟ್‌ನ ಆ್ಯ ಲ ಫಿಗಾರೋ ಗೀತೆಯನ್ನು ಸಾದರಪಡಿಸಲಿದ್ದಾರೆ. ಚಿರ ನೂತನವಾಗಿರುವ ಈ ಗೀತೆಯ ಹಿನ್ನೆಲೆ ಹೀಗಿದೆ; ಸೊಗಸಿನ ನೃತ್ಯಗಾರ ಫಿಗಾರೋ, ಸಿಂಗರಿಸಿಕೊಂಡು ball room ನೃತ್ಯಶಾಲೆಗೆ ಬರುತ್ತಾನೆ. ಅಂದದ ಧಿರಿಸು, ಚೆಂದದ ಹ್ಯಾಟು , ಉದ್ದನೆ ಕೋಟು ಧರಿಸಿ ಸಿಗಾರ್ ಸೇದುತ್ತಾ ಬರುವ ಅವನ ವೈಖರಿಯನ್ನು ನೋಡಿ ಸ್ಫೂರ್ತಿಗೊಂಡ ವಾದ್ಯವೃಂದದವರು ಪೌಲ್ ಮಾರಿಯಟ್‌ನ ಹೊಚ್ಚ ಹೊಸ ಕೃತಿಯನ್ನು ನುಡಿಸುತ್ತಾರೆ.

ಅದಕ್ಕೆ ಫಿಗಾರೋ, ಹೆಜ್ಜೆ ಹಾಕಿ ತಕತಕ ಕುಣಿದ ರೀತಿ ಅದ್ಭುತ. ಎಂದೂ ಕೇಳಿಲ್ಲದ ಹಾಡಿಗೆ , ಫಿಗಾರೋ ಕುಣಿದ ರೀತಿ ಚಂದವೋ ಅಥವಾ ಪೌಲ್ ಮಾರಿಯಟ್ ನ ಸಂಗೀತ ಸುಂದರವೋ . . . . ಚರ್ಚೆ ನಡೆದು , ಹೊಸ ಸಂಗೀತಕ್ಕೆ ಜೀವ ತುಂಬಿಸಿ ಕುಣಿದ ಫಿಗಾರೋನ ಹೆಸರೇ ಈ ಗೀತೆಗೆ ಖಾಯಂ ಆಯಿತು. ಅದೇ ಗೀತೆಯನ್ನೀಗ ನಿಮ್ಮ ಮುಂದೆ ಜೀವಂತವಾಗಿಡಲಿದ್ದಾರೆ ಎಂದೆ.

ಸುತ್ತಲೂ ಕಿಕ್ಕಿರಿದು ನಿಂತಿದ್ದ ಜನಸಮೂಹ ನಿಶ್ಶಬ್ದವಾಗಿತ್ತು. ಆ ನೀರವತೆಯ ವಿರಾಮ ಕೂಡ ಪೂರ್ವ ನಿಯೋಜಿತ. ಬ್ಯಾಂಡ್ ಮಾಸ್ಟರ್ ಜೆ.ಎಂ.ಪೆರೇರಾ ಸೂಚನೆ ನೀಡಿದರು. A la Figaro ಗೀತೆ ಶುರುವಾಯಿತು.

ಕಡು ಮೌನದ ಒಡಲಿನಿಂದ ಬ್ಯಾಂಡ್ ವಿಜೃಂಭಿಸಿತು. ಇಡೀ ಜನಸಮೂಹದಲ್ಲಿ ಸ್ಫೂರ್ತಿಯ ಮಿಂಚು ಹರಿಯಿತು. ಆ ಗೀತೆಯ ನಾದಕ್ಕೆ ತಲೆದೂಗದವರೇ ಇಲ್ಲ. ಇಂಗ್ಲೀಷ್ ಬ್ಯಾಂಡ್‌ನವರು ಅದೆಷ್ಟು ಸ್ಫೂರ್ತಿಯುತರಾಗಿ ನುಡಿಸಿದರು ಎಂದರೆ, ಗುಂಡೂರಾಯರು ಕುಳಿತಿದ್ದ ಜಾಗದಲ್ಲೇ ಹಾಡಿಗೆ ತಲೆದೂಗುತ್ತಾ , ಮೈ ಕೈ ಕುಣಿಸುತ್ತಾ, ಕೊನೆಗೆ ಚಿಕ್ಕದಾಗಿ ನೃತ್ಯವನ್ನೂ ಮಾಡೇಬಿಟ್ಟರು!

ಅದೇ ಆ A la Figaro ಗೀತೆಯ ಶಕ್ತಿ! ಅಲ್ಲಿ ನೆರೆದವರಿಗೆ , ಈ ಹಿಂದೆ ಗುಂಡೂರಾಯರು ಬಟ್ಟೆ ಬಿಚ್ಚಿ ಹಾರಿ,ಈಜುಕೊಳಕ್ಕೆ ಹೊಡೆದು ಈಜುಕೊಳ ಉದ್ಘಾಟಿಸಿದ್ದು ನೆನಪಾಯ್ತು!! ●

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ (ಮಹಿಳೆ) ಮತ್ತು ತೋಟದ ಕೆಲಸಕ್ಕೆ (ಪುರುಷ) ಚಿಕ್ಕ ಸಂಸಾರ ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ಆಕರ್ಷಕ ಸಂಬಳ ನೀಡಲಾಗುವುದು. ಸಂಪರ್ಕಿಸಿ:
9481814464
9164093279

ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ
(ಪಾರ್ಟ್ ಟೈಮ್ ಸೌಲಭ್ಯ ವಿರುತ್ತದೆ) ವಿದ್ಯಾರಣ್ಯಪುರಂ ಸುತ್ತಮುತ್ತಲಿನವರಿಗೆ ಮೊದಲ ಆದ್ಯತೆ. ಸಂಪರ್ಕಿಸಿ:
9448402092

J.T.O ಬೇಕಾಗಿದ್ದಾರೆ
ಶ್ರೀ ಅರುಣೋದಯ I.T.I
ಎಲೆಕ್ಟ್ರಾನಿಕ್ ಮೆಕ್ಯಾನಿಕ್ (E/M) ವಿಭಾಗಕ್ಕೆ ಕಿರಿಯ ತರಬೇತಿ ಅಧಿಕಾರಿ (J.T.O) ಬೇಕಾಗಿದ್ದು, ಬಿ.ಇ / ಡಿಪ್ಲೊಮಾ ಇನ್ ಎಲೆಕ್ಟ್ರಾನಿಕ್ & ಟೆಲಿಕಮ್ಯುನಿಕೇಷನ್ ಅಥವಾ ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ವೃತ್ತಿಯಲ್ಲಿ ಪದವಿ ಪಡೆದಿರಬೇಕು.
arunodayaiti2000@gmail.com
0821-2515667 / 9845004150

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

ಬಸವ ಮಾರ್ಗ
ವ್ಯಸನ ಮುಕ್ತ ಕೇಂದ್ರ
100% ಶಾಶ್ವತ ಕುಡಿತ ಮುಕ್ತ ಜೀವನ
21ನೇ ದಿನಗಳ ಕುಡಿತ ಬಿಡಿಸುವ ಶಿಬಿರ
Basava Marga Foundation, No. 23/61, Hebbal Ring Road, Opp. to Bharat Petrol Bunk, Near Sheshadripuram College, Mysuru, Karnataka-570 016.
Mob: 8553111999 / 8803344999

ಮಳಿಗೆಗಳು /ಮನೆ ಬಾಡಿಗೆಗಿದೆ
1) 26x26 ಅಳತೆಯುಳ್ಳ RCC ಕಟ್ಟಡಗಳು.
2) 9x15 ಅಳತೆಯುಳ್ಳ RCC ಕಟ್ಟಡಗಳು.
ನೆಲ ಮಳಿಗೆಗಳು ಬಾಡಿಗೆಗಿದೆ.
3) 2 BHK ಮನೆ ಉತ್ತರದಿಕ್ಕು M.K. ಹಳ್ಳಿ To ಬೇಲಾಡು. ಮುಖ್ಯರಸ್ತೆ, Near ವಿಜಯನಗರ 4ನೇ ಹಂತ ಹತ್ತಿರ, ಮೈಸೂರು–26
9900125264
9845122380

NEW 6 BHK HOUSE FOR SALE
Price Rs. 2.25 cr
Bank Loan Available 40x60 East Face, fully furnished with A/C Solar, 2 Car Parking / With Borewell Muda Approved, Near Srirampura to Dattagalli Ring Road. Call :
9741739955

40x60 ಸೈಟು ಮಾರಾಟಕ್ಕಿದೆ
ದಟ್ಟಗಳ್ಳಿ ಆದಿತ್ಯ ಸರ್ಕಲ್ ಹತ್ತಿರ, ಸೈಟ್, ಹಳೆಮನೆ, ಹೊಸ ಮನೆ, ಮಾರುವವರು, ಕೊಳ್ಳುವವರು ಸಂಪರ್ಕಿಸಿ:
9945042875

ಬೇಕಾಗಿದ್ದಾರೆ
ಸಸ್ಯಾಹಾರಿ ಹಾಗೂ ಮಾಂಸಾಹಾರಿ ಅಡುಗೆ ಮಾಡಲು ಪುರುಷ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ:
Basava Marga Foundation, No. 23/61, Hebbal Ring Road, Opp. to Bharat Petrol Bunk, Near Sheshadripuram College, Mysuru, Karnataka-570 016.
Mob: 8553111999 / 8803344999

GOLD COMPANY
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ – (T&C)
9964522225

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

SEMI COMMERCIAL SITE FOR SALE
2400 Sqft., North Facing, good location, Opposite D.F.R.L, Buddha Marga, Siddharthanagar. Contact:
9448064144/9886394079

ಜಾಗ ಬೇಕಾಗಿದೆ
ಜ್ಯೋತಿವ್ ಇವಿ ಚಾರ್ಜಿಂಗ್ ಸ್ಟೇಷನ್ ಸ್ಥಾಪನೆಗೆ ಅಗತ್ಯವಿರುವ ಭೂಮಿ / ಪ್ಲಾಟ್ / ಕೃಷಿ ಭೂಮಿ / ವಾಣಿಜ್ಯ ಮತ್ತು ವಸತಿ ಆಸ್ತಿ, ಮುಂಗಡ + ಬಾಡಿಗೆ + ಸರ್ಕಾರದ ಸಬ್ಸಿಡಿ ಪ್ರತಿ ಇವಿ ನಿಲ್ದಾಣ ಸ್ಥಾಪನೆಗೆ 5 ರಿಂದ 10 ಲಕ್ಷ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 9711355380

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ತಕ್ಷಣ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ನೋಡಿಕೊಳ್ಳಲು ಅನುಭವವಿರುವ / ಇಲ್ಲದಿರುವ ಯುವಕ, ಯುವತಿಯರು, ಮಹಿಳೆಯರು ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಮಾಡುವವರು ತಕ್ಷಣ ಸಂಪರ್ಕಿಸಿ. ಊಟ, ವಸತಿಯೊಂದಿಗೆ, ಸಂಬಳ: 12,000 – 18,000. ಅಗ್ರಹಾರ
9035113222
9739292222

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಕಂಪನಿ ಹಾಗೂ ಆಫೀಸ್ ವರ್ಕ್‌ಗಳಿಗೆ ಯುವಕ, ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ ವೇತನ + ಓಟಿ, 18,000 ರಿಂದ 30,000
9844702666
9844708666

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www: imkta.in
ALPHA INTERNATIONAL SCHOOL
@ Srirampura & Gokulam
Call: 7829937469, 9901803394
ONLINE TRAINING AVAILABLE

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರಚರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಃಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಹೊಸ ಮನೆ ಮಾರಾಟಕ್ಕಿದೆ.
4 ಅಂತಸ್ತಿನ ಮನೆ 30X40, 2 ಬಿ.ಹೆಚ್.ಕೆ. 6 ಮನೆಗಳು, 3 ರೂಮ್‌ಗಳು ಮತ್ತು ಪಾರ್ಕಿಂಗ್ ವ್ಯವಸ್ಥೆ ಇರುವ ಮನೆ
ಬೆಲೆ : 1.5 ಕೋಟಿ
ಒಟ್ಟು ರೂ. 51,000 ಬಾಡಿಗೆ ಬರುತ್ತಿದೆ.
ಸಾಹಿ ಗಾರ್ಮೆಂಟ್ಸ್ ಎದುರು, ಅಂಗಡೇವರ ಕೊಪ್ಪಲು.
ಸಂಪರ್ಕಿಸಿ :
9900359955
9008580560

ಶ್ರೀ ರಾಘವೇಂದ್ರ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಪಂ.ಎಸ್.ಕೆ.ಪ್ರಶಾಂತ್ ಆಚಾರ್ಯ
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ ದಾಂಪತ್ಯ ಸಮಸ್ಯೆ, ನಾಗದೋಷ, ಕುಜ ದೋಷ, ದುಷ್ಟಶಕ್ತಿ, ಪ್ರೇತಭಾಧೆ, ಸಾಲಭಾದೇ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ತಿಳಿಸುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ ಕಾಂಪ್ಲೆಕ್ಸ್, ಡಾ|| ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೋಟೆಲ್ ಪಾರ್ಕ್‌ಲೇನ್ ರಸ್ತೆ) ಮೈಸೂರು.
9740947045

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್, ಆಸ್ಪತ್ರೆಯ ರೋಗಿಗಳನ್ನು ನೋಡಿಕೊಳ್ಳಲು ಹೌಸ್ ಕೀಪಿಂಗ್, ಲೇಡೀಸ್, ಹುಡುಗರು, ವಾರ್ಡ್ ಬಾಯ್ಸ್, ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಕೆಲವು ಸ್ಥಳಗಳಲ್ಲಿ ಆಹಾರ ಮತ್ತು ವಸತಿ ಉಚಿತ. ಸಂಪರ್ಕಿಸಿ:
8884339446 / 8884286123
8884286321
ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ.(Experienced) good Salary with ESI, EPF Call on Monday Morning 9.30 am. 7975066539

HOUSE FOR LEASE OR RENT
3BHK Duplex Independent and 2BHK Independent House Vijayanagar 4th Stage Rent.
20x30 2BHK House for Lease in Dattagalli
9743532664

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

CHANGE OF NAME
I, R. Saraswathi, residing at No. 3595, Mantapa Street, Veeranagere, Mysore-570 001, have changed my name as Godavari R. on my own free will, infront of Notary L.N. Rajendran on 7-10-2022. I hereby declare that, I shall be known, called and recognised Godavari R. hereinafterwards and shall also use & sign my name as such Godavari R.
Sd/- Godavari R.

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ಯಾದವಗಿರಿ, ಜಾವ ಮುಖ್ಯರಸ್ತೆ, ಬೇಗೋನಿಯ ಸಂಕಲ್ಪ್ ಸೆಂಟ್ರಲ್ ಪಾರ್ಕ್ ಮನೆ ನಂ. 202 ರಲ್ಲಿ ವಾಸವಾಗಿರುವ ಸಂದೀಪ್ ಎಸ್.ಪಿ. ಇವರ ಮಗನಾದ ಸಾತ್ವಿಕ್ ಸಂದೀಪ್ ಶ್ಯಾಮನೂರ್, ಆದ ನಾನು ಈ ಮೂಲಕ ದೃಢೀಕರಿಸುವು ದೇನೆಂದರೆ ನನ್ನ ಹೆಸರು ಸಾತ್ವಿಕ್ ಸಂದೀಪ್ ಶ್ಯಾಮನೂರ್ (Saathvik Sandeep Shyamnur) ಎಂದು ನನ್ನ ಆಧಾರ್ ಕಾರ್ಡ್‌ನಲ್ಲಿ ಸರಿಯಾಗಿ ಇದ್ದು, ನನ್ನ ಪಾಸ್‌ಪೋರ್ಟ್‌ನಲ್ಲಿ ಶ್ಯಾಮನೂರ್ ಸಂದೀಪ್ ಸಾತ್ವಿಕ್ (Shamnur Sandeep Saathvik) ಎಂದು ತಪ್ಪಾಗಿ ನಮೂದಾಗಿದೆ, ಆದ್ದರಿಂದ ನನ್ನ ಹೆಸರು ಸಾತ್ವಿಕ್ ಸಂದೀಪ್ ಶ್ಯಾಮನೂರ್ ಎಂದು ಸರಿಪಡಿಸಿಕೊಡಬೇಕಾಗಿ ಈ ಮೂಲಕ ನೋಟರಿ ಎಸ್.ಎಂ. ಚಂದ್ರಶೇಖರ್‌ರವರ ಮುಂದೆ ದಿನಾಂಕ 6.10.2022 ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಸಾತ್ವಿಕ್ ಸಂದೀಪ್ ಶ್ಯಾಮನೂರ್

ಪ್ರಮಾಣ ಪತ್ರ
ಮೈಸೂರು ಸಿಟಿ, ಗಾಯಿತ್ರಿಪುರಂ, ಜೋನಲ್ ಆಫೀಸ್, 5ನೇ ಕ್ರಾಸ್, 1ನೇ ಹಂತ, ಮನೆ ನಂ. 143 ರಲ್ಲಿ ವಾಸವಾಗಿರುವ ಅಂತೋನಿ ಎಸ್. ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನಾನು ಕೋಟ್ಯಾಕ್ ಮಹೇಂದ್ರ ಬ್ಯಾಂಕ್, ಜಯಲಕ್ಷ್ಮೀಪುರಂ ಶಾಖೆ, ಮೈಸೂರು ಇಲ್ಲಿ ಖಾತೆಯನ್ನು ಹೊಂದಿದ್ದು, ನಾನು ನನ್ನ ಬ್ಯಾಂಕ್ ಖಾತೆ ಮಾಡಿಸುವ ಸಮಯದಲ್ಲಿ ನನ್ನ ಹೆಸರು ಅಂತೋನಿ ಪ್ರದೀಪ್ ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದರೆ ನನ್ನ ಆಧಾರ್ ಕಾರ್ಡಿನಲ್ಲಿ ನನ್ನ ಹೆಸರು ಅಂತೋನಿ ಎಸ್. ಎಂದು ನಮೂದಾಗಿರುತ್ತದೆ. ನನ್ನ ಹೆಸರನ್ನು ನನ್ನ ಬ್ಯಾಂಕ್ ಖಾತೆಯಲ್ಲಿ ಆಧಾರ್ ಕಾರ್ಡಿನಲ್ಲಿರುವಂತೆ ಅಂತೋನಿ ಎಸ್. ಎಂದು ತಿದ್ದುಪಡಿ ಮಾಡಿಸುವ ಸಲುವಾಗಿ ಈ ಪ್ರಮಾಣ ಪತ್ರವನ್ನು ನೋಟರಿ ಸರಸ್ವತಿ ಜೆ. ರವರ ಮುಂದೆ ದಿನಾಂಕ 29.9.2022ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಅಂತೋನಿ ಎಸ್.

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ.
ಸಂಬಳ: ರೂ. 12,000/–.
Mob: 8892258814

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಶತಃಸಿದ್ಧ.
ಡಾ.ಗುರೂಜಿ
ಮೈಸೂರು / ಬೆಂಗಳೂರು
6361740552

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

GAS PIPELINE
(New or Old Houses)
Mob: 9686594241, 9019094163
www.gaspipelinemysore.com

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654



SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಸ್ಟಿಕ್ಕರ್ ಪೇಸ್ಟ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ 10000/-
Ph.9380142144

ಮನೆ ಭೋಗ್ಯಕ್ಕೆ
North Facing, Ground Floor, Single bedroom. 6 ಲಕ್ಷ. Chamaraja Double Road, ಕುರುಬಗೇರಿ. 24 ಗಂಟೆ ನೀರು ಸೌಲಭ್ಯವಿದೆ.
9901313899, 9741213899

MUDA SITE FOR SALE
30/40, 30/40 NEAR TVS FACTORY KADAKOLA, MYSORE HIGH WAY.
COMMERCIAL SITE
80/120, 45/60 MUDA ALLOTED SITE FOR SALE IN VIJAYANAGAR 2ND STAGE MYSORE.
9900464111

ಬೇಕಾಗಿದ್ದಾರೆ SUNBIZ SOLUTIONS
ಕರ್ನಾಟಕದಾದ್ಯಂತ ಬ್ಯಾಂಕ್ ಪ್ರಕ್ರಿಯೆಗಾಗಿ ನಾವು ಟೆಲಿಕಾಲರ್ ಮತ್ತು ಫೀಲ್ಡ್ ಎಕ್ಸಿಕ್ಯೂಟೀವ್ ಅಭ್ಯರ್ಥಿಯನ್ನು ತುರ್ತಾಗಿ ನೇಮಿಸಿಕೊಳ್ಳುತ್ತಿದ್ದೇವೆ. (ಫೀಲ್ಡ್ ಎಕ್ಸಿಕ್ಯೂಟೀವ್ 2 ವೀಲರ್ ಹೊಂದಿರಬೇಕು). ಫ್ರೆಶರ್ ಮತ್ತು ಅನುಭವಿ ಇಬ್ಬರಿಗೂ ಸ್ವಾಗತ. ಆಕರ್ಷಕ ಪ್ರೋತ್ಸಾಹ ಧನವನ್ನು ಗಳಿಸಲು ಮತ್ತು ಕಲಿಯಲು ನಮ್ಮ ತಂಡಕ್ಕೆ ಸೇರಿಕೊಳ್ಳಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ. ದೀಕ್ಷಿತ:
(HR)9513935123 / 9513935117

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

HOUSE FOR RENT
1 BHK - 2nd Floor Kuvempunagar.
Mob: 8197428432

ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಉಚಿತ ವಸತಿ ವ್ಯವಸ್ಥೆ ಇರುತ್ತದೆ. ವೇತನ ರೂ. 12,000/– (30 ವಯಸ್ಸಿನ ಒಳಪಟ್ಟವರಾಗಿರಬೇಕು). ಉಳಿದುಕೊಳ್ಳುವವರಿಗೆ ಆದ್ಯತೆ.
Mob: 88841 79981

Commercial Plot for Sale
37000 sq.ft.
Commercial plot for sale, next to Central Mall, City Centre, Mysore.
Mob: 9945535398

ಬೇಕಾಗಿದ್ದಾರೆ
ಬಲ್ಲಾಳ್ ಸರ್ಕಲ್ ಹತ್ತಿರ ಇರುವ ಹೋಟೆಲ್ ಒಂದಕ್ಕೆ ಪಾರ್ಸೆಲ್ ಕಟ್ಟುವ ಹುಡುಗರು ಹಾಗೂ ಅಡುಗೆ ಸಹಾಯಕರು ಬೇಕಾಗಿದ್ದಾರೆ. (15,000/– ಸಂಬಳ) ಸಂಪರ್ಕಿಸಿ:
7975973014

ಮನೆ ಬಾಡಿಗೆಗೆ ಇದೆ
3BHK ನೆಲ ಅಂತಸ್ತು, No. 1729 7ನೇ ಮೇನ್ ರಸ್ತೆ, 2ನೇ ಹಂತ, ವಿಜಯನಗರ.
9611712846
9481833673

ಪ್ರವಾಸ
ಎಸಿ ರೂಂ, ಊಟದೊಂದಿಗೆ
24–11–2022 ನಾಲ್ಕು ಜ್ಯೋತಿರ್ಲಿಂಗ ವಿಮಾನ ಪ್ರವಾಸ: (ಗುಜರಾತ್, ಮಧ್ಯಪ್ರದೇಶ) ಸರದಾರ್ ಪಟೇಲ್ ಪ್ರತಿಮೆ, 10 ದಿನಗಳು.
12–12–2022 ಕಾಶಿ, ಹರಿದ್ವಾರ, ದೆಹಲಿ. ಎಸಿ ರೈಲು ಪ್ರವಾಸ: 13 ದಿನಗಳು.
ಮಲ್ಲಿಕಾರ್ಜುನ ಪ್ಯಾಕೇಜ್, ತುಮಕೂರು
8496044942, 8277409101

MUDA Approved Sites
20x30, 30x40, 30x50
7 km from KSRTC ನಿಲ್ದಾಣ ಲಲಿತಾದ್ರಿಪುರ ರಿಂಗ್ ರಸ್ತೆಗೆ, 100 Mtrs.
Mob: 99453-44203

32x40 E/F ಸೈಟು @ Rs. 22.50 ಲಕ್ಷ
MUDA Approved Layout
ಬ್ಯಾಂಕ್ ಲೋನ್ ಲಭ್ಯ / ತಕ್ಷಣ ನೋಂದಣಿ ಚಾಮುಂಡಿ ಬೆಟ್ಟದ ಹಿಂಭಾಗ ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ನಂತರ.
Call: 9538583377

ಹೋಟೆಲ್ ಜಸ್ಟ್ ನಾಟಿ
ಸ್ಪೆಷಲ್ ಮೀಲ್ಸ್ – ರೂ. 399
ಮಟನ್ ಮೀಲ್ಸ್ – ರೂ. 300
ನಾಟಿ ಕೋಳಿ ಮೀಲ್ಸ್ – ರೂ. 220
ಚಿಕನ್ ಮೀಲ್ಸ್ – ರೂ. 200
ವಿಜಯನಗರ 4ನೇ ಹಂತ, ಮೈಸೂರು
Mob: 9606110110

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಮಾರಾಟಕ್ಕೆ ಇದೆ
1584 Sq.ft ಕಾರ್ನರ್, ಸೆಮಿ ಕಮರ್ಷಿಯಲ್ MUDA ಸೈಟ್ ರಿಂಗ್ ರೋಡ್ ಹತ್ತಿರ, ವಿಜಯನಗರ 4ನೇ ಹಂತ, ಆಸಕ್ತರು ಸಂಪರ್ಕಿಸಿ: ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
8310151875

ನಿವೃತ್ತ ಅಧಿಕಾರಿಗಳು / ನೌಕರರಿಗೆ ಉದ್ಯೋಗ
ನಿವೃತ್ತ ಅಧಿಕಾರಿಗಳು / ನೌಕರರಿಗೆ ಉದ್ಯೋಗಾವಕಾಶಗಳು, ವಿದ್ಯಾರ್ಹತೆ: SSLC, PUC, Degree, ವೇತನ: 10,000/–, 20,000/–, 30,000/– ಸಂದರ್ಶನಕ್ಕೆ ಹಾಜರುಪಡಿಸಬೇಕಾದ ದಾಖಲೆಗಳು. 1) ವಿದ್ಯಾರ್ಹತೆ ಅಂಕ ಪತ್ರ, 2) ಆಧಾರ್ ಕಾರ್ಡ್, 3) ಪಾನ್ ಕಾರ್ಡ್, 4) ಬ್ಯಾಂಕ್ ಪಾಸ್ ಪುಸ್ತಕ, 5) ಫೋಟೋ –1. ಸಂಪರ್ಕಿಸಿ:
9886647852

GAS GEYSER
Only Rs. 2,999/-
With 2 years Service Free.
Offer only 2 days.

ಹಳೆಯ ಗ್ಯಾಸ್‌ಗೀಸರ್‌ನ್ನು ರಿಪೇರಿ ಮಾಡಲಾಗುವುದು
HARSHA ENTERPRISES
PH: 99454-99180

ಬೇಕಾಗಿದ್ದಾರೆ
ಬಲ್ಲಾಳ್ ಸರ್ಕಲ್ ಹತ್ತಿರ ಇರುವ ಹೋಟೆಲ್‌ಗೆ ದೋಸೆ ಮಾಸ್ಟರ್ ಬೇಕಾಗಿದ್ದಾರೆ. (20 ಸಾವಿರ ಸಂಬಳ) ಸಂಪರ್ಕಿಸಿ:
7975973014

ವಾಣಿಜ್ಯ ನಿವೇಶನ ಮಾರಾಟಕ್ಕಿದೆ
East No. 82 ಸಾರಿಗೆ ನಗರ KSRTC Layout ಶ್ರೀರಾಂಪುರ 51 Lakshs (Nego.)
9741812088
8660768364

ಹೊಸ ಮನೆ ಮಾರಾಟಕ್ಕಿದೆ
ಡ್ಯೂಪ್ಲೆಕ್ಸ್ ಮನೆ 20x30 ವೆಸ್ಟ್ ಫೇಸ್ ನಾರ್ತ್ ಡೋರ್, ಇಟಾಲಿಯನ್ ಕಿಚನ್ ವಾಡ್ರೋಬ್ ಗ್ರಾನೈಟ್ ಸಿಸಿ ಕ್ಯಾಮೆರಾ ಸೋಲಾರ್ ಚಿಮಿಣಿ ಹಾಲ್‌ಗೆ ಪಿಓಪಿ ಮತ್ತೆ ರೂಮಿಗೆ ಫ್ಯಾನ್ ಉಯ್ಯಾಲೆ ಆಲ್ ಟೀಕುಡ್ ಮರ ಜಾಗ್ವಾರ್ ಕಮೋಡಗಳು ಬಾತ್ ಟಬ್ ಆರ್ಕಿಟೆಕ್ ಮನೆ ದಟ್ಟಗಳ್ಳಿ ಕೌಟಿಲ್ಯ ಸ್ಕೂಲ್ ಹತ್ತಿರ. ಸಂಪರ್ಕಿಸಿ.
9900372013

ಬೇಕಾಗಿದ್ದಾರೆ
SSLC Pass / Faile ಆದ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ: S.G.Agencies CH-15, First Floor, Kunchitigara Street, Chamaraj Double Road, Mysore.
9342256526 / 8867778767
0821-4262526

ಬೇಕಾಗಿದ್ದಾರೆ
ವಯಸ್ಸಾದವರನ್ನು ರೋಗಿಗಳನ್ನು ನೋಡಿಕೊಳ್ಳಲು ಅನುಭವವಿರುವ / ಇಲ್ಲದಿರುವ ಯುವತಿಯರು/ ಯುವಕರು ಬೇಕಾಗಿದ್ದಾರೆ. ಯಾವುದೇ ಶುಲ್ಕ ಇರುವುದಿಲ್ಲ. ಉಚಿತ ಊಟ ವಸತಿಯೊಂದಿಗೆ ಸಂಬಳ 12,000 ದಿಂದ 15,000 ಕೂಡಲೇ ಸಂಪರ್ಕಿಸಿ:
8951603018 / 8147031728

HOUSE FOR RENT
Univerisity Layout Near Lingambudhi Palya Mysore. 3BHK Duplex House. Contact:
9342854935

FANTASTIC OPPORTUNITY
For Retired Officials (State Govt / Central Govt / Banking Sector / Public and Private Sector) House wives, Businessmen and Unemployed graduates to be a part of India's Leading insurance company with zero investment and flexible working hours (Work from Home) An opportunity to earn attractive and unlimited commission and incentives. Interested persons may Contact: Sathish H C
7411259365 / 8861918556

STC MARKETING & SERVICES
WANTED
Office Assistant (Female Only), Sales Girls (For Mysore city location) (To work in leading Departmental Stores & Forum Mall) Role: Full Time, Joining Date: Immediate. Mail your Resume at: pebirds96@gmail.com, For More Details:
9844017604

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

HOUSE FOR RENT
Dr. Nataraj 73/1 Out House G.T.R, Siddartha Hotel Near
9342631459

ಬೇಕಾಗಿದ್ದಾರೆ
ಮೈಸೂರು ಕಾಫಿ
ಕಾಫಿ ತಯಾರಿಸುವವರು ಮತ್ತು ಜ್ಯೂಸ್ ಮಾಡುವವರು, ಪೂರ್ಣ ಸಮಯ ಅಥವಾ ಅರೆಕಾಲಿಕ, ಫ್ರೆಶರ್‌ಗಳಿಗೆ ಆದ್ಯತೆ. ಸಂಪರ್ಕಿಸಿ:
7259483181

COMPANY HIRING
Accountant - Min 2 yrs Experience
Sales & Marketing - Min 2 yrs Experience.
Operator - Diploma in Mechanical.
Helpers - ITI Fitter / Machinist
Email: hr@hsrfurn.com

ಮನೆ ಭೋಗ್ಯಕ್ಕೆ ಇದೆ
ಸಸ್ಯಹಾರಿಗಳಿಗೆ ಮಾತ್ರ
#55, 2BHK, 1st Floor, 19th Cross, Ramanuja Road, (Near St. School) Mysore.
9986698617
9449670995

2BHK ಮನೆ ಬಾಡಿಗೆಗೆ ಇದೆ
ನಂ. 362, 6ನೇ ಕ್ರಾಸ್, 'ಎಂ' ಬ್ಲಾಕ್, ಬಸ್‌ಸ್ಟಾಪ್ ಹತ್ತಿರ, 2ನೇ ಮಹಡಿ, ಹೊಸಮನೆ, ಪೂರ್ವ ದಿಕ್ಕಿನ ಬಾಗಿಲು. ಸಂಪರ್ಕಿಸಿ:
8217084649

ಬೇಕಾಗಿದ್ದಾರೆ
ಅಕೌಂಟ್ಸ್ ಜೊತೆ ಕಾರ್ಖಾನೆ ನೋಡಿಕೊಳ್ಳಲು. ಸ್ಥಳ: ಇಂಡುವಾಳು, ಮಂಡ್ಯ.
9900359955 / 9008580560

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಸಂಸ್ಥೆಯಾದ ಆಯುಷ್ಮಾನ್ ಗ್ರೂಪ್ಸ್ ವತಿಯಿಂದ ಹೋಂ ನರ್ಸಿಂಗ್ ಸೆಕ್ಯೂರಿಟಿ ಗಾರ್ಡ್ ಹಾಗೂ ಹೌಸ್ ಕೀಪಿಂಗ್ ಕೆಲಸಕ್ಕೆ ಯುವಕ ಯುವತಿಯರು ಮತ್ತು ಪುರುಷರು ಮಹಿಳೆಯರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 50 ವರ್ಷಗಳು, ವಿದ್ಯಾರ್ಥಿ 7 ರಿಂದ ಡಿಗ್ರಿವರೆಗೂ. ಸಂಪರ್ಕಿಸಿ:
9606714441 / 9880570381
08214242351

RECEPTIONISTS & ROOM BOYS
Wanted Receptionists / Front Office Manager & Room Boys for a Lodge. Hotel Dewans Residency Dewans Road,(Opp. Hotel Sringar) Mysore.
9845155940

HOUSE FOR RENT
2BHK Independent House, J.P.Nagar 2nd Stage, Near JSS Public School, Vegetarian / Salaried Persons Preferred. Contact: Brokers Excuse.
9972709102

ಬೇಕಾಗಿದ್ದಾರೆ
ಸೆಕ್ಯೂರಿಟಿಗಾರ್ಡ್‌ಗಳು
1) ಬಲ್ಲಾಳ್ ಸರ್ಕಲ್, 2) ನಜರ್‌ಬಾದ್, 3) ಹೆಬ್ಬಾಳ್ ಸುತ್ತಮುತ್ತ, 4) ಕೆ.ಆರ್.ಎಸ್ ರಸ್ತೆ, 5) ತೂಬಿನ ಕೆರೆ (ಮಂಡ್ಯ), 6) ಅರಳೆ ಕುಪ್ಪೆ (ಪಾಂಡವಪುರ).
ಹೌಸ್ ಕೀಪರ್ : ಪುರುಷರು – ಲಲಿತಾದ್ರಿಪುರ ರಸ್ತೆ,, ಮಹಿಳೆಯರು : ಮೇಟಗಳ್ಳಿ ಸುತ್ತಮುತ್ತ ಸಂಪರ್ಕಿಸಿ: ಸುರಕ್ಷವೆಲ್ ಡ್ಯೂಟಿ ಪೋರ್ಸ್
9242406261 / 9686422400

ಜಮೀನು ಮಾರಾಟಕ್ಕಿದೆ
5 ಎಕರೆ ಕೆಂಪು ಮಣ್ಣಿನ ಜಮೀನು ತೋಟ ಮಾಡಲು ಯೋಗ್ಯವಾಗಿದೆ. ಥಾರ್ ರಸ್ತೆಗೆ ಇದೆ. ನೀರಾವರಿ ಸೌಲಭ್ಯವಿದೆ. ಬನ್ನೂರಿನಿಂದ 5 ಕಿ.ಮೀ. ಎಕರೆಗೆ 32 ಲಕ್ಷ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
7022360170

ಹೊಸ ಮನೆ ಭೋಗ್ಯಕ್ಕೆ ಇದೆ
ನೆಲ ಮಹಡಿ ಒಂದು BHK ಒಂದು ಮನೆ, ಎರಡು BHK ಒಂದು ಮನೆ, ಸೋಲಾರ್ & ಗೀಜರ್ ವ್ಯವಸ್ಥೆ ಇದೆ. 19ನೇ ಕ್ರಾಸ್, BMC ನಗರ, ಮೈಸೂರು
8368448384
9632370435

ಹೊಸ ಮನೆ ಮಾರಾಟಕ್ಕಿದೆ
20x30 ಸಿಂಗಲ್ ಫ್ಲೋರ್, ಶ್ರೀ ವಿನಾಯಕ ಗಾರ್ಡನ್ ಸಿಟಿ, ಸೆಂಟ್ ಜೋಸೆಫ್, ಸೆಂಟ್ರಲ್ ಸ್ಕೂಲ್ ಹತ್ತಿರ, ಬೆಳವಾಡಿ. ಬೆಲೆ 40/ ಲಕ್ಷ Nego.
7892127234
9739257030

HOUSE FOR RENT
2BHK 1 House Ground Floor & 1BHK 2 House 2nd Floor & 1 Single Room, 3rd Floor, Grand New House at Vijayanagar 4th Stage, Belavadi Post, TSK Layout, Mysuru. Contact: Kariappa:
9900424573

ಮೈಸೂರು ಮಿತ್ರ 43 – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಒಕ್ಕಲಿಗರ ಕೋಟೆಯಲ್ಲಿ ರಾಹುಲ್‌ಗಾಂಧಿ ಐಕ್ಯತಾ ನಡಿಗೆ

ನಾಗಮಂಗಲದಲ್ಲಿ ಮೊಳಗಿದ ಗೌಡರ ಗೌಡ ರಾಹುಲ್‌ಗೌಡ ಘೋಷಣೆ

ಆದಿಚುಂಚನಗಿರಿ ಶ್ರೀಗಳ ಆಶೀರ್ವಾದ ಪಡೆದ ಕಾಂಗ್ರೆಸ್ ಯುವರಾಜ

ಎಂ.ಕೆ.ಮೋಹನ್‌ರಾಜ್



ನಾಗಮಂಗಲ, ಅ.7– ಒಕ್ಕಲಿಗರ ಭದ್ರ ಕೋಟೆ ಮಂಡ್ಯ ಜಿಲ್ಲೆಯಲ್ಲಿ ಭಾರತ್ ಐಕ್ಯತಾ ಯಾತ್ರೆ ಯಶಸ್ವಿಯಾಗಿ ಮೂರು ದಿನ ಪೂರೈಸಿದ್ದು, ಇಡೀ ಜಿಲ್ಲೆಯಲ್ಲಿ ಅತೀ ಹೆಚ್ಚು ಒಕ್ಕಲಿಗ ಸಮುದಾಯವಿರುವ ನಾಗಮಂಗಲದಲ್ಲಿ ಸಾವಿರಾರು ಜನರೊಂದಿಗೆ ರಾಹುಲ್‌ಗಾಂಧಿ ಹೆಜ್ಜೆ ಹಾಕಿದರು. ನಾಗಮಂಗಲ ಪಟ್ಟಣಕ್ಕೆ ಪಾದಯಾತ್ರೆ ಪ್ರವೇಶಿಸುತ್ತಿದ್ದಂತೆ 'ಗೌಡರ ಗೌಡ ರಾಹುಲ್‌ಗೌಡ' ಘೋಷಣೆ ಮೊಳಗಿತು.

ಶುಕ್ರವಾರ ಬೆಳಿಗ್ಗೆ 7 ಗಂಟೆಗೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕೆಮ್ಮಲ್ಲೇನಹಳ್ಳಿ ಗ್ರಾಮದಿಂದ ಪಾದಯಾತ್ರೆ ಆರಂಭವಾಯಿತು. ಇಡಿ ವಿಚಾರಣೆ ಹಿನ್ನಲೆಯಲ್ಲಿ ದೆಹಲಿಗೆ ತೆರಳಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಸಿಎಂ ಜತೆಗಿನ ಸರ್ವಪಕ್ಷ ಸಭೆಯಲ್ಲಿ ಭಾಗವಹಿಸಿದ್ದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅನುಪಸ್ಥಿತಿಯಲ್ಲಿ ಆರಂಭವಾದ ಪಾದಯಾತ್ರೆಯ ನೇತೃತ್ವವನ್ನು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ವಹಿಸಿದ್ದರು.

ಮಾರ್ಗದುದ್ದಕ್ಕೂ ಸಾವಿರಾರು ಜನರು ರಾಹುಲ್‌ಗಾಂಧಿ ನೋಡಲು ಮುಗಿಬಿದ್ದರು. ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಜನರ ಬಳಿಗೆ ತೆರಳಿದ ರಾಹುಲ್, ಅವರ ಮಾತನಾಡಿಸಿ, ಕುಶಲೋಪರಿ ವಿಚಾರಿಸಿದರು. ಕೆಲವು ಕಡೆ ರಾಹುಲ್ ಜೊತೆಗೆ ಸೆಲ್ಫಿ ತೆಗೆಸಿಕೊಳ್ಳಲು ಯುವಕ, ಯುವತಿಯರು ಮುಂದಾದರು. ಈ ಸಂದರ್ಭದಲ್ಲಿ ನೂಕು ನುಗ್ಗಲು ಉಂಟಾದಾಗ, ಜನರನ್ನು ದೂರ ಸರಿಸಲು ಎಸ್‌ಪಿಜಿ ಹಾಗೂ ಪೊಲೀಸ್ ಸಿಬ್ಬಂದಿ ಹರಸಾಹಸ ಪಡಬೇಕಾಯಿತು.

ರಾಹುಲ್‌ಗೌಡ ಘೋಷಣೆ: ಜೆಡಿಎಸ್ ಭದ್ರಕೋಟೆ ನಾಗಮಂಗಲ ಪಟ್ಟಣಕ್ಕೆ ಪಾದಯಾತ್ರೆ ಆಗಮಿಸುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮಾಜಿ ಸಚಿವ ಚಲುವರಾಯಸ್ವಾಮಿ ಬೆಂಬಲಿಗರು ರಾಹುಲ್ ಪರ 'ಗೌಡರ ಗೌಡ ರಾಹುಲ್‌ಗೌಡ' ಘೋಷಣೆ ಮೊಳಗಿಸಿದರು. ಜೊತೆಗೆ ಚಲುವರಾಯಸ್ವಾಮಿ ಪರವೂ ಘೋಷಣೆ ಕೂಗಿದ ಬೆಂಬಲಿಗರು 'ಗೌಡರ ಗೌಡ ಸ್ವಾಮಿ ಗೌಡ' ಎಂದು ಚಲುವರಾಯಸ್ವಾಮಿ ಅವರ ಮತ್ತೊಂದು ಹೆಸರೇಳಿ ಘೋಷಣೆ ಕೂಗಿದರು.

ಪ್ರತಿ ಚುನಾವಣೆಯಲ್ಲೂ ತನ್ನ ಪ್ರಾಬಲ್ಯ ಮೆರೆಯುತ್ತಾ ಬಂದಿರುವ ಜೆಡಿಎಸ್‌ಗೆ ಟಕ್ಕರ್ ಕೊಡಲು ಹಾಗೂ ರಾಹುಲ್ ಪರ ಒಕ್ಕಲಿಗರ ಮನವೊಲಿಸುವ ನಿಟ್ಟಿನಲ್ಲಿ ರಾಹುಲ್‌ಗೌಡ ಘೋಷಣೆಯನ್ನು ಮೊಳಗಿಸಲಾಯಿತು ಎಂಬ ಮಾತುಗಳು ಸ್ಥಳೀಯ ಕಾಂಗ್ರೆಸ್ ವಲಯದಲ್ಲಿ ಕೇಳಿ ಬಂತು.

ಪಾದಯಾತ್ರೆಯಲ್ಲಿ ಪಾಲ್ಗೊಂಡ ಲಂಕೇಶ್ ಕುಟುಂಬಸ್ಥರು: ನಾಗಮಂಗಲ ಪಟ್ಟಣದಲ್ಲಿ ರಾಹುಲ್‌ಗಾಂಧಿ ಜತೆಗೆ ಪಾದಯಾತ್ರೆಯಲ್ಲಿ ಹಿರಿಯ ಪತ್ರಕರ್ತ ದಿ.ಪಿ.ಲಂಕೇಶ್ ಅವರ ಪತ್ನಿ ಇಂದಿರಾ ಲಂಕೇಶ್ ಹಾಗೂ ಪುತ್ರಿ ಕವಿತಾ ಲಂಕೇಶ್ ಭಾಗವಹಿಸಿದ್ದರು. ವಯೋ ಸಹಜ ಅನಾರೋಗ್ಯದಿಂದ ಸ್ವಲ್ಪ ದೂರ ನಡೆದ ಇಂದಿರಾ ಅವರನ್ನು ಸ್ವತಃ ರಾಹುಲ್ ಕಾರಿನ ತನಕ ಕೈಹಿಡಿದು ಕರೆದುಕೊಂಡು ಹೋಗಿ, ಹತ್ತಿಸಿ ಬಂದರು.

ಅಂಚೆ ಚಿಟ್ಟನಹಳ್ಳಿಗೆ ಪಾದಯಾತ್ರೆ ಆಗಮಿಸಿದಾಗ 'ತೊಲಗಲಿ ತೊಲಗಲಿ ಬಿಜೆಪಿ ತೊಲಗಲಿ' ಎಂದು ಧಿಕ್ಕಾರ ಕೂಗಿ ಸೋನಿಯಾ ಹಾಗೂ ರಾಹುಲ್ ಪರ ಕಾಂಗ್ರೆಸ್ಸಿಗರು ಘೋಷಣೆ ಕೂಗಿದರು.

ಬೆಳಿಗ್ಗೆ 7 ಗಂಟೆಯಿಂದ ಶುರುವಾದ ಪಾದಯಾತ್ರೆ 11ಗಂಟೆಯವರೆಗೆ ಸುಮಾರು 11 ಕಿಲೋ ಮೀಟರ್ ಸಾಗಿ ಅಂಚೆ ಭೂವನಹಳ್ಳಿ ತಲುಪಿತು. ಅಲ್ಲಿ ವಿಶ್ರಾಂತಿಗೆ ತೆರಳಿದ ರಾಹುಲ್ ಬಳಿಕ ಎನ್‌ಇಪಿ ಶಿಕ್ಷಣದ ಕುರಿತು ವಿದ್ಯಾರ್ಥಿಗಳು ಹಾಗೂ ರೈತರ ಸಮಸ್ಯೆಗಳ ಕುರಿತು ರೈತ ಮುಖಂಡರೊಂದಿಗೆ ಸಂವಾದ ನಡೆಸಿದರು. ಬಳಿಕ ಊಟ ಮುಗಿಸಿ, ವಿಶ್ರಾಂತಿ ಪಡೆದು ಸಂಜೆ ನಾಲ್ಕು ಗಂಟೆಗೆ ಪಾದಯಾತ್ರೆ ಆರಂಭಿಸಿದರು.

ಅಂಚೆ ಭುವನಹಳ್ಳಿಯಿಂದ ಆರಂಭವಾದ ಮಧ್ಯಾಹ್ನದ ಪಾದಯಾತ್ರೆಗೂ ಸಹಸ್ರ ಸಹಸ್ರ ಜನ ಸಾಥ್ ನೀಡಿದರು. ಇದೇ ಸಂದರ್ಭದಲ್ಲಿ ದಾರಿ ಮಧ್ಯೆ ತೊಳಲಿ ಗ್ರಾಮದ ಬಳಿ ಕಾರ್ಯಕರ್ತರೊಬ್ಬರ ತೋಟದಲ್ಲಿ ರಾಹುಲ್ ಗಾಂಧಿ ಎಳನೀರು ಕುಡಿದರು. ಬಳಿಕ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ತಮ್ಮ ಪುತ್ರ ಹಾಗೂ ನಟ ಸಚಿನ್ ಚಲುವರಾಯಸ್ವಾಮಿ ಅವರನ್ನು ರಾಹುಲ್‌ಗೆ ಪರಿಚಯ ಮಾಡಿಕೊಟ್ಟರು. ರಾಹುಲ್ ಸಚಿನ್‌ರನ್ನು ಪಕ್ಕದಲ್ಲೇ ಕೂರಿಸಿಕೊಂಡು ಕೆಲ ಹೊತ್ತು ಮಾತನಾಡಿದರು. ಸುಮಾರು 11 ಕಿಮೀ ಸಾಗಿದ ಪಾದಯಾತ್ರೆ ಬೆಳ್ಳೂರು ಪಟ್ಟಣ ತಲುಪಿತು. ಬೆಳ್ಳೂರು ಪಟ್ಟಣದಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ರಾಹುಲ್‌ಗಾಂಧಿ, ನಂತರ ಆದಿಚುಂಚನಗಿರಿ ಮಠಕ್ಕೆ ತೆರಳಿ ಮಠದ ಶಾಲಾ ಆವರಣದಲ್ಲಿ ವಾಸ್ತವ್ಯ ಹೂಡಿದ್ದು, ನಾಳೆ ಬೆಳಿಗ್ಗೆ 7 ಗಂಟೆಗೆ ಆದಿಚುಂಚನಗಿರಿ ಮಠದಿಂದ ಪಾದಯಾತ್ರೆ ಆರಂಭವಾಗಿ ಮಾಯಸಂದ್ರ ಮಾರ್ಗವಾಗಿ ತುಮಕೂರು ಜಿಲ್ಲೆಯ ತುರುವೇಕೆರೆ ಪ್ರವೇಶಿಸಲಿದೆ.

ಇಂದಿನ ಪಾದಯಾತ್ರೆಯಲ್ಲಿ ಎಐಸಿಸಿ ಪ್ರಧಾನಕಾರ್ಯದರ್ಶಿಗಳಾದ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಸಿ.ವೇಣುಗೋಪಾಲ್, ವಿಧಾನಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್, ಕೆಪಿಸಿಸಿ ಮಾಜಿ ಅಧ್ಯಕ್ಷ ದಿನೇಶ್‌ಗುಂಡೂರಾವ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಧ್ರುವನಾರಾಯಣ, ಮಾಜಿ ಸಚಿವರಾದ ಎನ್.ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ಸಲೀಂ ಅಹ್ಮದ್, ಎಸ್.ಆರ್.ಪಾಟೀಲ್, ಉಮಾಶ್ರೀ, ಶಾಸಕರಾದ ಪ್ರಿಯಾಂಕ್ ಖರ್ಗೆ, ಡಾ.ರಂಗನಾಥ್, ಯು.ಟಿ. ಖಾದರ್, ಅಂಜಲಿ ನಿಂಬಾಳ್ಕರ್, ಲಕ್ಷ್ಮಿ ಹೆಬ್ಬಾಳ್ಕರ್, ದಿನೇಶ್ ಗೂಳಿಗೌಡ, ಜಿಲ್ಲಾ ಮುಖಂಡರಾದ ಕೆಬಿ.ಚಂದ್ರಶೇಖರ್, ರಮೇಶ್ ಬಂಡಿಸಿದ್ದೇಗೌಡ, ಸಿ.ಡಿ.ಗಂಗಾಧರ್ ಇತರರು ಭಾಗವಹಿಸಿದ್ದರು.

ಆದಿಚುಂಚನಗಿರಿ ಮಠಕ್ಕೆ ರಾಹುಲ್ ಭೇಟಿ



ಪಾದಯಾತ್ರೆ ಮುಗಿದ ಬಳಿಕ ಬೆಳ್ಳೂರಿ ನಲ್ಲಿ ಸಮಾವೇಶ ನಡೆಸಿ ವಾಸ್ತವ್ಯ ಹೂಡಲು ಆದಿಚುಂಚನಗಿರಿ ಮಠಕ್ಕೆ ಆಗಮಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಠಕ್ಕೆ ಭೇಟಿ ನೀಡಿ, ಕಾಲ ಭೈರವೇಶ್ವರನ ದರ್ಶನ ಪಡೆದರು.

ಮಠದಲ್ಲಿ ಪೀಠಾಧ್ಯಕ್ಷ ನಿರ್ಮಲಾನಂದ ನಾಥ ಶ್ರೀಗಳ ಆಶೀರ್ವಾದ ಪಡೆದ ರಾಹುಲ್‌ಗೆ ಮಠದ ಬಗ್ಗೆ ವಿವರಿಸಲಾಯಿತು. ಬಳಿಕ ಶ್ರೀಗಳೊಂದಿಗೆ ಕೆಲಹೊತ್ತು ರಾಹುಲ್ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಸೇರಿದಂತೆ ಹಲವು ಕಾಂಗ್ರೆಸ್ಸಿಗರು ಉಪಸ್ಥಿತರಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಬಳಿ ಬಿಜೆಪಿ ಸರ್ಕಾರದ ಎನ್‌ಇಪಿ ಬಗ್ಗೆ ಶಿಕ್ಷಕರು, ವಿಚಾರವಂತರ ಆಕ್ಷೇಪ

ಅಂಚೆ ಭುವನಹಳ್ಳಿ (ನಾಗಮಂಗಲ), ಅ.7– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಶಿಕ್ಷಣ ತಜ್ಞರ ಜತೆ ಸಭೆ ನಡೆಸಿದರು. ಹಲವು ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು, ಶಿಕ್ಷಕಿಯರು ಈ ಸಂವಾದದಲ್ಲಿ ಭಾಗವಹಿಸಿ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಾಗೂ ಎನ್‌ಇಪಿ ಜಾರಿ ನಂತರ ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ತೊಂದರೆಗಳ ವಿಚಾರವನ್ನು ರಾಹುಲ್ ಗಾಂಧಿ ಮುಂದೆ ಪ್ರಸ್ತಾಪಿಸಿದರು.

ನ್ಯಾಷನಲ್ ಲಾ ಸ್ಕೂಲ್ ಪ್ರಾಧ್ಯಾಪಕರೊಬ್ಬರು ಮಾತನಾಡಿ, ಎನ್‌ಇಪಿ ಜಾರಿ ನಂತರ ಕೋಮುವಾದಿಕರಣ, ವಾಣಿಜ್ಯೀಕರಣ ಹಾಗೂ ಕೇಂದ್ರಿಕರಣದಿಂದ ನಮ್ಮ ದೇಶದ ಶಿಕ್ಷಣ ಕ್ಷೇತ್ರದ ಅಡಿಪಾಯ ನಾಶವಾಗುತ್ತಿದೆ. ಕೋಮುವಾದದ ವಿಷಬೀಜವನ್ನು ಚಿಕ್ಕ ಮಕ್ಕಳ ಮನಸ್ಸಿನಲ್ಲಿ ಬಿತ್ತುತ್ತಿದ್ದಾರೆ ಎಂದು ಆಪಾದಿಸಿದರು.

ರಾಜ್ಯದ ಪಠ್ಯಪುಸ್ತಕದಲ್ಲಿ ಸಾವರ್ಕರ್ ವಿಚಾರವಾಗಿ ಇದ್ದ ಪಾಠದಲ್ಲಿ ಬುಲ್ ಬುಲ್ ಹಕ್ಕಿ ಮೇಲೆ ಕೂತು ಸಾರ್ವಕರ್ ತಾಯ್ನಾಡನ್ನು ಸಂದರ್ಶಿಸುತ್ತಿದ್ದರು ಎಂಬಂತಹ ಕಟ್ಟು ಕಥೆಗಳು ಮಕ್ಕಳ ಮೇಲೆ ಯಾವ ರೀತಿಯ ಪರಿಣಾಮ ಬೀರಲಿದೆ ಎಂಬ ವಿಚಾರವೂ ಚರ್ಚೆ ಆಯಿತು. ಈ ರೀತಿ ಮಾಡುತ್ತಿರುವುದೇಕೆ ಎಂದು ಕೇಳಿದಾಗ, ಜನರಲ್ಲಿ ಚಿಕ್ಕ ವಯಸ್ಸಿನಲ್ಲೇ ಹೊಸ ಹೊಸ ಪುರಾಣಗಳನ್ನು ಸೃಷ್ಟಿಸಿ ಅವರು ನಂಬುವಂತೆ ಮಾಡುವ ಪ್ರಯತ್ನ ನಡೆಯುತ್ತಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆ ಪ್ರಾಮುಖ್ಯತೆ ನೀಡಲು ಇಂತಹ ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮಂಡ್ಯ ಮೂಲದ ಶಿಕ್ಷಕಿ ಮಾತನಾಡಿ, ಪೋಷಕರು ಸರ್ಕಾರಿ ಶಾಲೆಗಿಂತ ಖಾಸಗಿ ಶಾಲೆಗಳತ್ತ ಹೆಚ್ಚಿನ ಒಲವು ತೋರಿದ್ದು, ಅವರ ಪ್ರಕಾರ ಸರ್ಕಾರಿ ಶಾಲೆಗಳ ಮೂಲ ಸೌಕರ್ಯಕ್ಕೆ ಸಮರ್ಪಕವಾಗಿ ಅನುದಾನ ನೀಡುತ್ತಿಲ್ಲ. ಹೀಗಾಗಿ ಬಡವರು ಕೂಡ ಖಾಸಗಿ ಶಾಲೆಗಳತ್ತ ಮುಖಮಾಡಿದ್ದಾರೆ ಎಂದರು. ಇದಕ್ಕೆ ಪರಿಹಾರ ಏನು ಎಂದು ಕೇಳಿದಾಗ ಉತ್ತರಿಸಿದ ರಾಹುಲ್ ಗಾಂಧಿ ಅವರು, ಸರ್ಕಾರಗಳು ಅನುದಾನಗಳನ್ನು ಹೆಚ್ಚಿಸಬೇಕು. ಈ ಬಗ್ಗೆ ಪ್ರಣಾಳಿಕೆಯಲ್ಲಿ ವಿಚಾರ ಸೇರಿಸುತ್ತೇವೆ. ಸರ್ಕಾರದಿಂದ ಉತ್ತಮ ಶಿಕ್ಷಣ ಸಂಸ್ಥೆಗಳನ್ನು ನಡೆಸಲು ಸಾಧ್ಯವಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಐಐಟಿಗಳೆಲ್ಲವೂ ಸರ್ಕಾರದ ಕಾಲೇಜುಗಳಾಗಿವೆ. ಸರ್ಕಾರ ಮನಸ್ಸು ಮಾಡಿದರೆ ಉತ್ತಮ ಶಿಕ್ಷಣ ನೀಡಬಹುದು ಎಂದರು. ಇನ್ನು ಈಗಿನ ಪರಿಸ್ಥಿತಿಯಲ್ಲಿ ಉಳ್ಳವರಿಗೆ ಉತ್ತಮ ಶಿಕ್ಷಣ ಹಾಗೂ ಭವಿಷ್ಯ ಸಿಗುತ್ತಿದ್ದು, ಬಡವರು ಶಿಕ್ಷಣ ವಂಚಿತರಾಗುತ್ತಿದ್ದಾರೆ ಎಂದು ಚರ್ಚಿಸಲಾಯಿತು. ಸರ್ಕಾರಿ ಶಾಲೆ ಅಭಿವೃದ್ಧಿಪಡಿಸಿ ಸಮಾನ ಶಿಕ್ಷಣ ನೀಡುವಂತೆ ಮಾಡಬೇಕು ಎಂಬ ಒತ್ತಾಯ ಮಾಡಲಾಯಿತು. ಇದನ್ನು ಒಪ್ಪಿದ ರಾಹುಲ್ ಗಾಂಧಿ 1947ರಿಂದ ನಮ್ಮ ಶಿಕ್ಷಣ ನೀತಿಗಳಲ್ಲಿ ಸಮಾನ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ. ಮುಂದೆಯೂ ಈ ಬಗ್ಗೆ ಕಾರ್ಯಕ್ರಮ ರೂಪಿಸಲಾಗುವುದು ಎಂದರು.

ಕಡೆಯದಾಗಿ ರಾಹುಲ್ ಗಾಂಧಿ ಅವರು ಮಾತನಾಡಿ, ಇಂದು ಚಿಕ್ಕ ಚರ್ಚೆ ಮಾಡಿದ್ದೇವೆ ಅಷ್ಟೇ. ಇನ್ನು ಮುಂದೆ, ನಮ್ಮ ರಾಜ್ಯದ ಪ್ರಣಾಳಿಕೆ, ಹಾಗೂ ರಾಷ್ಟ್ರ ಪ್ರಣಾಳಿಕೆಗಳಲ್ಲಿ ನಿಮ್ಮ ಅಭಿಪ್ರಾಯ ಸಂಗ್ರಹಿಸಿ ಜನರ ಪ್ರಣಾಳಿಕೆ ಮಾಡಲಾಗುವುದು ಎಂದರು.

ಸಂವಾದದಲ್ಲಿ ಕಾಂಗ್ರೆಸ್ ಮುಖಂಡರಾದ ರಣದೀಪ್‌ಸಿಂಗ್ ಸುರ್ಜೇವಾಲಾ, ಜೈರಾಮ್ ರಮೇಶ್, ಬಿ.ಕೆ.ಹರಿಪ್ರಸಾದ್, ಪ್ರಿಯಾಂಕ್ ಖರ್ಗೆ ಇತರರಿದ್ದರು.

ದಸರೆಯಲ್ಲಿ ಕೆಆರ್‌ಎಸ್‌ಗೆ 60 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಭೇಟಿ

ಶ್ರೀರಂಗಪಟ್ಟಣ, ಅ.7– ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ವಿಶ್ವ ವಿಖ್ಯಾತ ಕೃಷ್ಣರಾಜ ಸಾಗರದ ಬೃಂದಾವನಕ್ಕೆ ವಿಶೇಷ ದೀಪಾಲಂಕಾರ ಹಾಗೂ ಸಾಂಸ್ಕೃತಿ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರಿಂದ ಸುಮಾರು 60 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡಿ ವೀಕ್ಷಣೆ ನಡೆಸಿದ್ದಾರೆ. ಕಳೆದ 7 ದಿನಗಳಿಂದ ಬೃಂದಾವನ ಸೇರಿದಂತೆ ಅಣೆಕಟ್ಟೆಗೆ ವಿಶೇಷವಾಗಿ ಅಲಂಕರಿಸಿದ್ದ ವಿದ್ಯುತ್ ದೀಪಾಲಂಕಾರ, 5 ದಿನಗಳ ಕಾಲ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ನೀರಿನಲ್ಲಿ ತೇಲುವ ವೇದಿಕೆಯಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳ ವೀಕ್ಷಣೆಗೆ ಸಹಸ್ರಾರು ಪ್ರವಾಸಿಗರು ಆಗಮಿಸಿ ವೀಕ್ಷಣೆ ನಡೆಸಿದ್ದರಿಂದ ಕೇವಲ 6 ದಿನದಲ್ಲಿ ಸುಮಾರು 40 ರಿಂದ 50 ಲಕ್ಷ ರೂ. ಆದಾಯ ಬಂದಿದೆ.

ದಕ್ಷಿಣ ಬೃಂದಾವನದ ಕಾರಂಜಿ ಬಳಿ ನಿರ್ಮಿಸಿದ್ದ ವೇದಿಕೆಯಲ್ಲಿ ಕಳೆದ 5 ದಿನಗಳ ಕಾಲ ನಡೆದ ರಸ ಸಂಜೆ ಕಾರ್ಯಕ್ರಮ ಪ್ರವಾಸಿಗರನ್ನು ಆಕರ್ಷಿಸಿದರೆ, ದೋಣಿ ವಿಹಾರ ಕೇಂದ್ರದಲ್ಲಿ ನಿರ್ಮಿಸಿದ್ದ ತೇಲುವ ವೇದಿಕೆಯಲ್ಲಿ ನಡೆದ ಭರತ್ಯ ನಾಟ್ಯ ಸೇರಿದಂತೆ ಇತರೆ ನೃತ್ಯಗಳು ಪ್ರವಾಸಿಗರಿಗೆ ಮುದ ನೀಡಿದವು. ಕಳೆದ ಶನಿವಾರದಿಂದ 7 ದಿನಗಳ ಕಾಲ ನಡೆದ ವಿದ್ಯುತ್ ದೀಪಾಲಂಕಾರ ಶುಕ್ರವಾರ ಕೊನೆಗೊಂಡಿದೆ. ವೀಕ್ಷಣೆಗಾಗಿ ಆಗಮಿಸಿದ್ದ ಪ್ರವಾಸಿಗರು ತಮ್ಮ ಮೊಬೈಲ್‌ಗಳಲ್ಲಿ ಪೋಟೊ ಕ್ಲಿಕ್ಕಿಸಿಕೊಂಡು ಸಂಭ್ರಮಿಸುತ್ತಿದ್ದ ದೃಷ್ಯ ಕಂಡು ಬಂತು.

ಸರ್ಕಾರ ಹೆಚ್ಚು ಪ್ರವಾಸಿಗರನ್ನು ಆಕರ್ಷಣೆ ಮಾಡುವ ನಿಟ್ಟಿನಲ್ಲಿ ಕೆಆರ್‌ಎಸ್‌ನ ಬೃಂದಾವನ ಸೇರಿದಂತೆ ಅಣೆಕಟ್ಟೆಗೆ ವಿಶೇಷವಾಗಿ ವಿದ್ಯುತ್ ಅಲಕಾಂರ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದರಿಂದ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿ ವೀಕ್ಷಣೆ ನಡೆಸಿದ್ದಾರೆ. ಇದರಿಂದ ನಿಗಮಕ್ಕೆ ಹೆಚ್ಚಿನ ಆದಾಯ ಬಂದಿರುವುದಾಗಿ ಕಾವೇರಿ ನೀರಾವರಿ ನಿಗಮದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.



ದಮ್ಮನಕಟ್ಟೆ ಸಫಾರಿ ಕೇಂದ್ರದಲ್ಲಿ 68ನೇ ವನ್ಯಜೀವಿ ಸಪ್ತಾಹ ಸಮಾರೋಪ

ಪ್ರತಿಯೊಬ್ಬರೂ ಗಿಡಮರಗಳನ್ನು ಬೆಳೆಸಿ: ಸಾಲು ಮರದ ತಿಮ್ಮಕ್ಕ ಸಲಹೆ



ಹೆಚ್.ಡಿ.ಕೋಟೆ, ಅ.7– ತಾಲೂಕಿನ ದಮ್ಮನಕಟ್ಟೆ ಸಫಾರಿ ಕೇಂದ್ರದಲ್ಲಿ ಅರಣ್ಯ ಇಲಾಖೆಯಿಂದ ಹಮ್ಮಿಕೊಂಡಿದ್ದ 68ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭವನ್ನು ನಾಡೋಜ, ಪದ್ಮಶ್ರೀ ಪುರಸ್ಕೃತ ಡಾ.ಸಾಲುಮರದ ತಿಮ್ಮಕ್ಕ ಗಿಡನೆಟ್ಟು ದೀಪ ಬೆಳಗುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 80 ವರ್ಷದ ಹಿಂದೆ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ಜೀವನ ನಡೆಸಿದ ನಮಗೆ ಮಕ್ಕಳಿಲ್ಲದ ಚಿಂತೆ ಕಾಡಿತು. ಆ ವೇಳೆ ನನ್ನ ಗಂಡನ ಜೊತೆ ಸೇರಿ ಅರ್ಧ ದಿನ ಕೂಲಿ ಕೆಲಸ ಮಾಡಿ ಉಳಿದ ಅರ್ಧ ದಿನ ರಸ್ತೆ ಅಕ್ಕಪಕ್ಕ ಗಿಡನೆಟ್ಟು ಅವುಗಳನ್ನು ಮಕ್ಕಳೆಂದು ಬೆಳಸಿದೆವು ಎಂದರು.

ಪರಿಸರ, ವನ್ಯಜೀವಿಗಳಿಲ್ಲದೇ ಮನುಷ್ಯನ ಬದುಕಿಲ್ಲ. ವನ್ಯಜೀವಿಗಳಿದ್ದರೆ ಮಾತ್ರ ಜೀವನಚಕ್ರ ಸುಗಮವಾಗಿ ಸಾಗಲು ಸಾಧ್ಯ. ಈಗಾಗಲೇ ನಾವು ಆ ಚಕ್ರವನ್ನು ಕಳೆದುಕೊಂಡಿದ್ದೇವೆ. ಆದ್ದರಿಂದ ಅವುಗಳ ಸಂರಕ್ಷಣೆಗೆ ನಾವೆಲ್ಲರೂ ಸಿದ್ಧವಾಗಬೇಕು. ಅರಣ್ಯ ಇಲಾಖೆ ಅಧಿಕಾರಿಗಳು ಜಾಗೃತಿ ವಹಿಸಿ ಸಂರಕ್ಷಿಸಬೇಕಾಗಿದೆ. ಒಂದು ವೇಳೆ ಅರಣ್ಯ ಇಲಾಖೆ ಅಧಿಕಾರಿಗಳು ತಪ್ಪು ಮಾಡಿದರೇ ಇಡೀ ದೇಶವೇ ನಾಶವಾಗುವ ಸಾಧ್ಯತೆ ಇದೆ ಎಂದರು.

ಇಂದು ಒಳ್ಳೆಯ ಪರಿಸರ ಬಹಳ ಮುಖ್ಯವಾಗಿದ್ದು, ಎಲ್ಲರೂ ಗಿಡ ಮರಗಳನ್ನು ಬೆಳೆಸುವಂತೆ ಸಲಹೆ ನೀಡಿದರು.

ಹುಲಿ ಯೋಜನೆ ಅರಣ್ಯ ಸಂರಕ್ಷಣಾಧಿಕಾರಿ ಹರ್ಷಕುಮಾರ್ ಚಿಕ್ಕನರಗುಂದ ಮಾತನಾಡಿ, ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ವನ್ಯಜೀವಿ ಸಪ್ತಾಹಕ್ಕೆ ಬಂದಿರುವುದು ಹೆಮ್ಮೆಯ ವಿಚಾರ. ಪರಿಸರದ ಬಗ್ಗೆ ಜಾಗೃತಿ ಇಲ್ಲದ ಸಮಯದಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡಿ ಸಮಾಜಕ್ಕೆ ಉತ್ತಮ ಪರಿಸರವನ್ನು ಕೊಡುಗೆಯಾಗಿ ನೀಡಿದ್ದಾರೆ ಎಂದು ತಿಳಿಸಿದರು.

ಇಂಗ್ಲೆಂಡ್‌ನ ಪರಿಸರ ಸಂಸ್ಥೆ 50 ಸಾಧಕ ಮಹಿಳೆಯರಲ್ಲಿ ಸಾಲುಮರದ ತಿಮ್ಮಕ್ಕ ಕೂಡ ಒಬ್ಬರು. ಇದು ನಮ್ಮ ನಾಡಿಗೆ ಹೆಮ್ಮೆಯ ವಿಚಾರ ಎಂದರು.

ವನ್ಯಜೀವಿ ಸಪ್ತಾಹ ಅಂಗವಾಗಿ ಶಾಲಾ ಮಕ್ಕಳಿಗೆ ರಸಪ್ರಶ್ನೆ, ಚಿತ್ರಕಲೆ ಹಾಗೂ ಹಾಡಿ ಗಿರಿಜನ ಯುವಕರಿಗೆ ವಾಲಿಬಾಲ್ ಪಂದ್ಯಾವಳಿ ಏರ್ಪಡಿಸಿ ಬಹುಮಾನ ವಿತರಿಸಲಾಯಿತು. ಇದೇ ವೇಳೆ ಸಾಲುಮರದ ತಿಮ್ಮಕ್ಕ ಕಬಿನಿ ಹಿನ್ನೀರಿನಲ್ಲಿರುವ ಡಿಸ್ಕವರಿ ಖಾಸಗಿ ರೆಸಾರ್ಟ್‌ನಲ್ಲಿ ಮಧ್ಯಾಹ್ನ ಮುದ್ದೆ ಊಟ ಸವಿದರು. ಈ ಸಂದರ್ಭ ಸಾಲು ಮರದ ತಿಮ್ಮಕ್ಕ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಜಗತ್ ರಾಮ್, ಡಾ.ಪೂರ್ಣಿಮಾ, ವನ್ಯಜೀವಿ ಪರಿಪಾಲಕಿ ಕೃತಿಕಾ, ಮಲ್ಲಿಕಾರ್ಜುನ್, ಎಸಿಎಫ್ ರಂಗಸ್ವಾಮಿ, ಆರ್‌ಎಫ್‌ಓಗಳಾದ ಸಿದ್ದರಾಜು, ಮಧು, ಸತೀಶ್, ಮಂಜುನಾಥ್, ಗಿರೀಶ್, ಪಿ.ಚೌಕಾಲೆ, ಹರ್ಷಿತ್ ಗೌಡ, ಸತೀಶ್, ಪಶುವೈದ್ಯ ರಮೇಶ್, ಗ್ರಾಪಂ ಅಧ್ಯಕ್ಷ ಮಹದೇವಯ್ಯ, ನರಸಿಂಹೇಗೌಡ, ಶಿವಪ್ಪ ಇದ್ದರು.

10 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ತಿ.ನರಸೀಪುರ, ಅ.7– ಸರ್ಕಾರದಿಂದ ಹೆಚ್ಚಿನ ಅನುದಾನ ದೊರೆತರೆ ಕ್ಷೇತ್ರದ ಎಲ್ಲಾ ಗ್ರಾಮಗಳನ್ನು ಮಾದರಿ ಗ್ರಾಮಗಳನ್ನಾಗಿ ಮಾಡುವ ಆಶಯ ಹೊಂದಿರುವುದಾಗಿ ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನ ಹಾಗೂ ರಾಜ್ಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ (ಪಿಡಬ್ಲ್ಯೂಡಿ) ಯೋಜನೆಯಡಿ 10 ಕೋಟಿ ರೂ. ವೆಚ್ಚದಲ್ಲಿ ಹಮ್ಮಿಕೊಳ್ಳಲಾಗಿರುವ ಸಿಸಿ ರಸ್ತೆ, ಚರಂಡಿ ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳಿಗೆ ಶುಕ್ರವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮೀಣ ರಸ್ತೆಗಳು ಸುಧಾರಣೆಯಾದರೆ ಜನರ ಆರ್ಥಿಕ ಮಟ್ಟವೂ ಸುಧಾರಣೆಯಾಗುವ ಹಿನ್ನೆಲೆಯಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ವಿಶೇಷ ಅನುದಾನದಡಿ ಕಾಮಗಾರಿ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ತಂದು ಸಾಮಾನ್ಯ ವರ್ಗದ ಬಡಾವಣೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ ಎಂದರು.

ರಾಜ್ಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದಿಂದ ಹನುಮನಾಳು ಗ್ರಾಮದ ಅಭಿವೃದ್ಧಿಗೆ 2 ಕೋಟಿ ರೂ. ಹಾಗೂ 5 ಕೋಟಿ ರೂ. ವೆಚ್ಚದಲ್ಲಿ ಕೊಡಗಹಳ್ಳಿ ಗ್ರಾಮದ ಕೆರೆ ಏರಿ ವಿಸ್ತರಣೆ ಮಾಡಲಾಗುತ್ತಿದೆ. ಕಾಮಗಾರಿ ತ್ವರಿತವಾಗಿ ನಡೆದು ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ ಎಂದರು.

ಇದೇ ವೇಳೆ ಶಾಸಕರು ಕೆಆರ್‌ಐಡಿಎಲ್ ಅನುದಾನದಡಿ ಮೇಗಳಕೊಪ್ಪಲು ಹಾಗೂ ಬಿ.ಬೆಟ್ಟಹಳ್ಳಿ ಗ್ರಾಮದಲ್ಲಿ ತಲಾ 25 ಲಕ್ಷ, ಕುಂತನಹಳ್ಳಿ ಗ್ರಾಮದಲ್ಲಿ 20 ಲಕ್ಷ, ಬೀಡನಹಳ್ಳಿಯಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವ ಸಿಸಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಡಿ.ಜಯರಾಂ, ಸದಸ್ಯ ಕೆ.ಬಿ.ಜಯರಾಂ, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಜಿಲ್ಲಾ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಬೃಂದಾ ಕೃಷ್ಣೇಗೌಡ, ಜೆಡಿಎಸ್ ಕಾರ್ಯಾಧ್ಯಕ್ಷ ಬಿ.ಆರ್.ಮಂಜುನಾಥ್, ಬೀಡನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ರಾಜು, ಸಿದ್ದರಾಜು, ಅತ್ತಹಳ್ಳಿ ಕುಮಾರ್, ನಾಗರಾಜು, ಅಪ್ಪುಗೌಡ, ದೀಪು ದರ್ಶನ್, ಬೇವಿನಹಳ್ಳಿ ಸತೀಶ್, ಅತ್ತಹಳ್ಳಿ ರವಿ, ಸತೀಶ್, ನವೀನ್, ಎಇಇ ಪಿ.ಲಕ್ಷ್ಮಣ ರಾವ್, ನಟೇಶ್, ಎಇ ಅನಿಲ್ ಕುಮಾರ್, ಪ್ರತಿಭಾ, ರಾಜೂ ನಾಯಕ್, ಕೆಆರ್‌ಐ ಡಿಎಲ್‌ನ ದಿಲೀಪ್ ಕುಮಾರ್, ನರೇಗಾ ಎಡಿ ಶಶಿಕುಮಾರ್, ಸಿಡಿಪಿಓ ಭವ್ಯಶ್ರೀ, ಪಿಡಿಓ ಮಾದೇಶ್, ಪವಿತ್ರ, ಸತೀಶ್ ಚಂದ್ರ, ಶಿವಸ್ವಾಮಿ ಮತ್ತಿತರರಿದ್ದರು.

ಪರಿಶಿಷ್ಟ ವರ್ಗಕ್ಕೆ ಮೀಸಲಾತಿ ನೀಡಿರುವುದು ಸ್ವಾಗತಾರ್ಹ

ಭೇರ್ಯ, ಅ.7– ರಾಜ್ಯ ಸರ್ಕಾರ ಪರಿಶಿಷ್ಟ ವರ್ಗ(ನಾಯಕ)ಕ್ಕೆ ಶೇ.7ರಷ್ಟು ಮೀಸಲಾತಿ ನೀಡಿರುವುದು ಸ್ವಾಗತಾರ್ಹ ಎಂದು ಜಿಲ್ಲಾ ಯುವ ಜೆಡಿಎಸ್ ಉಪಾಧ್ಯಕ್ಷ ಕಗ್ಗೆರೆ ಕುಚೇಲ ಸಂತಸ ವ್ಯಕ್ತಪಡಿಸಿದರು.

ಭೇರ್ಯ ಗ್ರಾಪಂ ನೂತನ ಅಧ್ಯಕ್ಷೆ ಜ್ಯೋತಿ ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ನಮ್ಮ ಸಮುದಾಯದ ವಾಲ್ಮೀಕಿ ಶ್ರೀ ಪ್ರಸನ್ನಾನಂದಸ್ವಾಮೀಜಿಗಳು ಕಳೆದ 245 ದಿನಗಳ ಕಾಲ ಬಿಸಿಲು, ಮಳೆ, ಚಳಿಯನ್ನು ಲೆಕ್ಕಿಸದೇ ಸಮಾಜದ ಮುಖಂಡರೊಂದಿಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹೋರಾಡಿದ ಪ್ರತಿಫಲವಾಗಿ ರಾಜ್ಯ ಸರ್ಕಾರ ಇಂದು ನಾಯಕ ಜನಾಂಗಕ್ಕೆ ಶೇ.7ರಷ್ಟು ಮೀಸಲಾತಿ ನೀಡಿದೆ ಎಂದು ತಿಳಿಸಿದರು.

ಮೀಸಲಾತಿ ಹೋರಾಟದಲ್ಲಿ ಶ್ರೀ ಪ್ರಸನ್ನಾನಂದಸ್ವಾಮೀಜಿಗಳಿಗೆ ಬೆನ್ನೆಲುಬಾಗಿ ನಿಂತಿದ್ದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಶಾಸಕ ಸಾ.ರಾ.ಮಹೇಶ್ ಹಾಗೂ ಜೆಡಿಎಸ್‌ನ ಎಲ್ಲಾ ಶಾಸಕರು ಹೋರಾಟದಲ್ಲಿ ಭಾಗಿಯಾಗಿ ಸರ್ಕಾರದ ಮೇಲೆ ಒತ್ತಡ ಹಾಕಿದ್ದರು ಎಂದ ಅವರು, ನಾಯಕ ಜನಾಂಗಕ್ಕೆ ಮೀಸಲಾತಿ ನೀಡದಿದ್ದರೇ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಬಹಿಷ್ಕರಿಸುವುದಾಗಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗಿತ್ತು. ನಮ್ಮ ಬೇಡಿಕೆ ಈಡೇರಿಸಿದ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಈ ವೇಳೆ ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ತಾಲೂಕು ಜೆಡಿಎಸ್ ಅಧ್ಯಕ್ಷ ಕುಮಾರ್, ಖಜಾಂಚಿ ನಾಗಣ್ಣ, ಗ್ರಾಪಂ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಬಿ.ಕೆ.ಕುಮಾರ್, ಶಿವಣ್ಣ, ಯೋಗೇಶ್, ರವಿ, ಕುಮಾರ್, ಮಹೇಶ್ ನಾಯಕ, ಚಿದಂಬರ ನಾಯಕ, ಶಾಂತಕುಮಾರ್, ರಾಜಯ್ಯ, ತನು, ಹರೀಶ್, ಶಿವಣ್ಣ ಸೇರಿದಂತೆ ಇತರರು ಹಾಜರಿದ್ದರು.



ಸರಗೂರು ಪಟ್ಟಣದ 9ನೇ ವಾರ್ಡ್ ನಿವಾಸಿ ಜವರಮ್ಮ ಅವರ ಮನೆ ನಿರ್ಮಾಣ ಕಾಮಗಾರಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಶಶಿಧರ್ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಪಪಂ ಅಧ್ಯಕ್ಷೆ ರಾಧಿಕಾ, 9ನೇ ವಾರ್ಡ್ ಸದಸ್ಯ ಶ್ರೀನಿವಾಸ್, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸುನಂದ ರಾಜ್, ಜ್ಞಾನವಿಕಾಸ ಸಮನ್ವಯಾಧಿಕಾರಿ ಅಶ್ವಿನಿ, ವಲಯ ಮೇಲ್ವಿಚಾರಕಿ ರೇಖಾ, ಸೇವಾ ಪ್ರತಿನಿಧಿ ವನಿತಾ ಹಾಗೂ ನಿವಾಸಿಗಳು ಇದ್ದರು.

ಜಾತಿ ಆಧಾರದ ಮೇಲೆ ಅಭಿವೃದ್ಧಿ ಕಾರ್ಯ ಮಾಡಲ್ಲ

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಭೂಮಿ ಪೂಜೆ



ಕಂಪಲಾಪುರ, ಅ7– ನಾನು ಜಾತಿ ಆಧಾರದ ಮೇಲೆ ಅಭಿವೃದ್ಧಿ ಕಾರ್ಯ ಮಾಡುವುದಿಲ್ಲ ಎಂದು ಶಾಸಕ ಕ.ಮಹದೇವ್ ತಿಳಿಸಿದರು.

ಗ್ರಾಮದ ಪರಿಶಿಷ್ಟ ಜಾತಿ ಹಾಗೂ ಪಂಗಡದ ಬೀದಿಗಳಲ್ಲಿ ಅಂದಾಜು 35 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈ ಹಿಂದೆ ತಾಲೂಕಿನಲ್ಲಿ ಅಧಿಕಾರದಲ್ಲಿದ್ದವರು ಜನರ ಬಳಿ ಮತ ಪಡೆದು ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ಆ ಕೆಲಸಗಳನ್ನು ನಾನು ಕೇವಲ 4 ವರ್ಷಗಳಲ್ಲಿ ಮಾಡಿದ್ದೇನೆ, 2 ಬಾರಿ ಸೋತರು ಧೃತಿಗೆಡದೆ ಮತದಾರರ ಕಷ್ಟಸುಖಗಳಿಗೆ ಸ್ಪಂದಿಸಿದ ಫಲವೇ ನಾನು ಇಂದು ಶಾಸಕನಾಗಿದ್ದಾನೆ. ಪಿರಿಯಾಪಟ್ಟಣ ಹಾಗೂ ಕಂಪಲಾಪುರ ನನ್ನ 2 ಕಣ್ಣುಗಳಿದ್ದಂತೆ. ಆದ್ದರಿಂದ ಬೇರೆ ಹಳ್ಳಿಗಳಿಗಿಂತ ತಾಲೂಕಿನ ಹೆಬ್ಬಾಗಿಲಾಗಿರುವ ಕಂಪಲಾಪುರಕ್ಕೆ ಹೆಚ್ಚು ಅನುದಾನ (3 ಕೋಟಿ) ನೀಡಿದ್ದೇನೆ. ಇದನ್ನು ಮತದಾರರಿಗೆ ಮನವರಿಕೆ ಮಾಡಿಕೊಟ್ಟು, ಮತ್ತೆ ನನಗೆ ಜನತೆಯ ಆಶೀರ್ವಾದ ಪಡೆಯಲು ಕಾರ್ಯಕರ್ತರು ಕಟಿಬದ್ಧರಾಗಿ ಕೆಲಸ ಮಾಡಬೇಕು ಎಂದರು.

ಕೋವಿಡ್ ಸಮಯದಲ್ಲಿ ಜೀವವನ್ನು ಲೆಕ್ಕಿಸದೇ ಜನರ ಆರೋಗ್ಯದ ದೃಷ್ಟಿಯಿಂದ ಹಗಲಿರುಳು ದುಡಿದಿದ್ದೇನೆ. ಕುರುಬ ಸಮುದಾಯಕ್ಕೆ 8 ಕೋಟಿಗೂ ಹೆಚ್ಚು ಅನುದಾನ ನೀಡಿರುವೆ. ನನಗೆ ಮತ ನೀಡದ ಸಮುದಾಯಕ್ಕೂ ಅನುದಾನ ನೀಡಿದ್ದೇನೆ ಎಂದರು.

ತಾಲೂಕು ಜೆಡಿಎಸ್ ಉಪಾಧ್ಯಕ್ಷ ಕೆ.ಕುಮಾರ್ ಮಾತನಾಡಿದರು. ಈ ವೇಳೆ ತಹಸೀಲ್ದಾರ್ ಕೆ.ಚಂದ್ರಮೌಳಿ, ಇಓ ಸಿ.ಆರ್.ಕೃಷ್ಣಕುಮಾರ್, ಇಂಜಿನಿಯರ್ ಮಲ್ಲಿಕಾರ್ಜುನ, ಕಂದಾಯ ನಿರೀಕ್ಷಕ ಶ್ರೀಧರ್, ಜೆಇ ಚಂದ್ರಶೇಖರ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಸುನೀತಾ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಗ್ರಾಪಂ ಅಧ್ಯಕ್ಷೆ ಮಮತ, ಪಿಡಿಓ ಪರಮೇಶ್, ಸದಸ್ಯರಾದ ಜಾನಕಿ, ಕವಿತ, ನಾಗರಾಜ್, ಪ್ರತಿಭಾ, ಸಹಕಾರ ಸಂಘದ ಅಧ್ಯಕ್ಷ ಕೆ.ಎನ್.ಜಯಣ್ಣ, ನಿರ್ದೇಶಕ ಕೆ.ಆರ್.ಸಂತೋಷ್, ಡೇರಿ ಅಧ್ಯಕ್ಷ ಕೃಷ್ಣೇಗೌಡ, ಕೆ.ಎಂ.ಲಕ್ಷ್ಮಣ್, ಮಾಜಿ ಅಧ್ಯಕ್ಷ ಆಸೀಫ್, ಗಿರೀಶ್, ಭದ್ರೇಗೌಡ, ಕೃಷ್ಣ, ಯ.ಸ್ವಾಮಿಗೌಡ, ನಾಗೇಗೌಡ, ತಮ್ಮಯ್ಯ, ಈರಯ್ಯ, ವಕೀಲ ನಾಗರಾಜ್, ಗ್ರಾಮ ಲೆಕ್ಕಿಗ ಮನು, ಗುತ್ತಿಗೆದಾರ ಕೃಷ್ಣೇಗೌಡ, ಚನ್ನೇಗೌಡ, ವಸಂತ್, ರಾಜಣ್ಣ, ಲೋಕೇಶ್, ಮಹೇಶ್, ರಾಮು ಸೇರಿದಂತೆ ಗ್ರಾಮಸ್ಥರಿದ್ದರು.

ಕಾಡಾನೆಗಳ ದಾಳಿಗೆ ಕಬ್ಬಿನ ಫಸಲು ನಾಶ

ಹಂಪಾಪುರ, ಅ.7– ಕಾಡಾನೆಗಳ ದಾಳಿಗೆ ಕಬ್ಬಿನ ಫಸಲು ನಾಶವಾಗಿರುವ ಘಟನೆ ಇಲ್ಲಿಗೆ ಸಮೀಪದ ಹೊಮ್ಮರಗಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶಾರದಮ್ಮ ಅವರಿಗೆ ಸೇರಿದ 5 ಎಕರೆ ಹಾಗೂ ಮಂಜುಳಾ ಅವರಿಗೆ ಸೇರಿದ 3 ಎಕರೆ ಸೇರಿದಂತೆ 8 ಎಕರೆಯಲ್ಲಿ ಬೆಳೆಯಲಾಗಿದ್ದ ಕಬ್ಬಿನ ಫಸಲು ನಾಶವಾಗಿದೆ. ಕಾಡಿನಿಂದ ಆಗಮಿಸಿದ 3 ಆನೆಗಳು ಕಬ್ಬಿನ ಗದ್ದೆಗೆ ನುಗ್ಗಿ ತಿಂದು, ತುಳಿದು ನಾಶಪಡಿಸಿದೆ. ಅಲ್ಲದೇ ಅಕ್ಕಪಕ್ಕದ ಜಮೀನಿನಲ್ಲಿದ್ದ ಜೋಳ, ರಾಗಿ, ಭತ್ತದ ಫಸಲು ನಾಶವಾಗಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಈ ಭಾಗದಲ್ಲಿ ವನ್ಯಜೀವಿಗಳ ಹಾವಳಿ ಹೆಚ್ಚಾಗಿದೆ. ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಅಲ್ಲದೇ ನಷ್ಟಕ್ಕೊಳಗಾದ ರೈತರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಲು ಮುಂದಾಗಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಮೈಸೂರು ಮಿತ್ರ ಶನಿವಾರ 8 ಅಕ್ಟೋಬರ್ 2022

ಬಿಜೆಪಿ ಸರ್ಕಾರ ನಮ್ಮ ಸಂಸ್ಕೃತಿ, ಇತಿಹಾಸವನ್ನು ನಾಶ ಮಾಡುತ್ತಿದೆ



ಬೇಳೂರು,ಅ.7– ರಾಜ್ಯ ಬಿಜೆಪಿ ಸರ್ಕಾರ ಈ ನೆಲದ ಸಂಸ್ಕೃತಿ ಹಾಗೂ ಇತಿಹಾಸವನ್ನು ನಾಶ ಪಡಿಸುವ ಕೆಲಸ ಮಾಡುತ್ತಿದ್ದು, ಮಹನೀಯರ ಇತಿಹಾಸವನ್ನು ಒಂದೆಡೆ ಪಠ್ಯದಿಂದ ಕೈಬಿಟ್ಟು ಇತಿಹಾಸ, ಸಂಸ್ಕೃತಿಗೆ ಚ್ಯುತಿ ತರುತ್ತಿದ್ದರೆ ಮತ್ತೊಂದೆಡೆ ಕೆಲವೊಂದು ಕಡೆ ಇಟ್ಟಿರುವ ಮಹನೀಯರ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಬದಲಾವಣೆ ಮಾಡಲು ಹೊರಟಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಕಿಡಿಕಾರಿದರು.

ಪಟ್ಟಣದಲ್ಲಿ ಬಹಿರಂಗ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ಒಂದೆಡೆ ಬಸವಣ್ಣನನ್ನು ಹೊಗಳುವ ಬಿಜೆಪಿ ಮತ್ತೊಂದೆಡೆ ಅವರ ಹೆಸರನ್ನು ಪಠ್ಯದಿಂದ ಕೈಬಿಡಲು ಹೊರಟಿದೆ. ಜೊತೆಗೆ ಬಡವರು, ರೈತರನ್ನು ಆರ್ಥಿಕ ನೀತಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಂಕಷ್ಟಕ್ಕೆ ದೂಡಿವೆ. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಬಡವರು ಹಾಗೂ ರೈತರನ್ನು ಆರ್ಥಿಕ ಸಮಸ್ಯೆಯಿಂದ ನಿವಾರಣೆ ಮಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇವೆ ಎಂದರು.

ಕೃಷಿ ಕಾಯ್ದೆಯಿಂದ ರೈತರಿಗೆ ಅನುಕೂಲವಾಗುವುದಿಲ್ಲ. ಇದನ್ನು ಅಸ್ತ್ರ ಮಾಡಿಕೊಂಡು ದೇಶದಲ್ಲಿ ರೈತರು, ಬಡವರು, ಕೂಲಿಕಾರರನ್ನು ದಮನ ಮಾಡುವ ಕಾಯ್ದೆ ಇದಾಗಿದೆ. ಜನರನ್ನು ದಮನ ಮಾಡುವಲ್ಲಿ ಕೇಂದ್ರ ಸರ್ಕಾರ ಯಶಸ್ವಿಯಾಗುತ್ತಿದ್ದು, ಈ ಯಶಸ್ಸು ಬಹಳ ದಿನ ಇರುವುದಿಲ್ಲ. ಈ ಕಾಯ್ದೆಯಿಂದ ಸಣ್ಣಪುಟ್ಟ ವ್ಯಾಪಾರಸ್ಥರು ಹಾಗೂ ರೈತರನ್ನು ಮುಗಿಸಿದ್ದಾರೆ. ಜೊತೆಗೆ ದೇಶವನ್ನು ಎರಡು ಹೋಳು ಮಾಡಲು ಹೊರಟಿದೆ ಎಂದು ಕಿಡಿಕಾರಿದರು.

ದೇಶವನ್ನು ಬಡವರು ಹಾಗೂ ಶ್ರೀಮಂತರು ಎಂದು ಎರಡು ಭಾಗ ಮಾಡಲು ಪ್ರಧಾನಿ ಮೋದಿ ಹೊರಟಿದ್ದು, ಕೇಂದ್ರ ಸರ್ಕಾರ ಶ್ರೀಮಂತರ ಪರ ಇದೆ. ಇದನ್ನು ನಾವು ಒಪ್ಪಲ್ಲ. ಇನ್ನು ಮುಂದೆ ದೇಶದಲ್ಲಿ ಸಮಾನತೆ ಬೇಕು. ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೋಗಲಾಡಿಸಬೇಕು. ಭಾರತದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಪ್ರತಿಯೊಬ್ಬರೂ ವಿರೋಧಿಸಬೇಕು. ಈ ಎಲ್ಲಾ ಸಮಸ್ಯೆಗಳನ್ನಿಟ್ಟುಕೊಂಡು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪಾದಯಾತ್ರೆ ಹಮ್ಮಿಕೊಂಡಿದ್ದೇನೆ ಎಂದರು. ವೇದಿಕೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಸಿ.ವೇಣುಗೋಪಾಲ್, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಎಂ. ವೀರಪ್ಪಮೊಯ್ಲಿ ಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಇತರರಿದ್ದರು.

ಆದಿಚುಂಚನಗಿರಿಯಲ್ಲಿ ಭಜನೆಯಲ್ಲಿ ಭಾಗಿ: ಆದಿಚುಂಚನಗಿರಿ ಶ್ರೀಮಠಕ್ಕೆ ಭೇಟಿ ನೀಡಿ ಕಾಲಭೈರವೇಶ್ವರನ ದರ್ಶನ ಪಡೆದ ರಾಹುಲ್, ಮಠದ ಪೀಠಾಧಿಪತಿ ನಿರ್ಮಲಾನಂದನಾಥಶ್ರೀಗಳೊಂದಿಗೆ ಮಾತುಕತೆ ನಡೆಸಿದರು. ಬಳಿಕ ನೂರಾರು ಮಕ್ಕಳೊಂದಿಗೆ ಭಜನೆಯಲ್ಲಿ ಪಾಲ್ಗೊಂಡು ಮಕ್ಕಳನ್ನುದ್ದೇಶಿಸಿ ಭಾಷಣ ಮಾಡಿದರು.

ಹುಲಿ ದಾಳಿಗೆ ಎರಡು ಎಮ್ಮೆ ಬಲಿ



ಗೋಣಿಕೊಪ್ಪ, ಅ.7– ಹುಲಿ ದಾಳಿಗೆ ಎರಡು ಎಮ್ಮೆಗಳು ಬಲಿಯಾಗಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಹರಿಹರ ಗ್ರಾಮದಲ್ಲಿ ಶುಕ್ರವಾರ ಸಂಜೆ ನಡೆದಿದೆ.

ಗ್ರಾಮದ ಬೋಪಯ್ಯ ಜಾನುವಾರುಗಳನ್ನು ಕಳೆದುಕೊಂಡವರು. ಆಕ್ರೋಶಗೊಂಡ ಸುತ್ತಮುತ್ತಲಿನ ಪ್ರದೇಶದ ರೈತರು ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಬರುವಂತೆ ರೈತರು ಆಗ್ರಹಿಸಿದ ನಂತರ ಅಧಿಕಾರಿಗಳು ಭೇಟಿ ನೀಡಿ ಹುಲಿಯ ಚಲನವಲನ ಪತ್ತೆ ಮಾಡಲು ಸಿಸಿ ಕ್ಯಾಮರಾ ಅಳವಡಿಸಲು ನಿರ್ಧರಿಸಲಾಯಿತು. ಗ್ರಾಮದ ಜನರಿಗೆ ಎಚ್ಚರ ವಹಿಸುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಸಾಲಭಾದೆ: ಕೆರೆಗೆ ಹಾರಿ ರೈತ ಆತ್ಮಹತ್ಯೆ



ಚಿಕ್ಕೇರಿ, ಅ.7– ಸಾಲಭಾದೆಗೆ ಹೆದರಿ ರೈತನೋರ್ವ ವ್ಯಾನ್ ಸಮೇತ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಹೊಬಳಿಯ ಗೋವಿಂದನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಲಿಂಗಪ್ಪನವರ ಪುತ್ರ ವೀರಪ್ಪಾಜಿ (42) ತನ್ನ ಜಮೀನಿನಲ್ಲಿ ಕೃಷಿ ಚಟುವಟಿಕೆ ಮಾಡಲು ಸಂಘ ಸಂಸ್ಥೆಯಿಂದ 2 ಲಕ್ಷ ರೂ. ಜೊತೆಗೆ ಕೈಸಾಲವಾಗಿ 5 ಲಕ್ಷ ರೂ. ಸಾಲ ಪಡೆದುಕೊಂಡಿದ್ದ ಎನ್ನಲಾಗಿದೆ. ಸತತವಾಗಿ ಸುರಿದ ಮಳೆಯಿಂದ ಬೆಳೆ ನಿರೀಕ್ಷೆ ಮಟ್ಟದಲ್ಲಿ ಬಾರದೆ ಕೊಳೆತು ಹಾಳಾಗಿತ್ತು. ಜೊತೆಗೆ ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದೆ ಸಾಲದ ಹೊರೆ ಮತ್ತಷ್ಟು ಹೆಚ್ಚಳವಾಗಿತ್ತು. ಸಾಲದ ಹೊರೆ, ಸಾಲಗಾರರ ಕಾಟಕ್ಕೆ ಹೆದರಿದ ರೈತ ಖಿನ್ನತೆಗೆ ಒಳಗಾಗಿದ್ದ. ಬುಧವಾರ ಸಂಜೆ ತನ್ನ ಓಮ್ನಿ ವ್ಯಾನ್ ತೆಗೆದುಕೊಂಡು ಹೋಗಿ ಸಮೀಪದಲ್ಲಿರುವ ಮಾರ್ಗೋನಹಳ್ಳಿ ಕೆರೆಯಲ್ಲಿ ವ್ಯಾನ್ ಸಮೇತ ಹಾರಿ ಸಾವಿಗೀಡಾಗಿದ್ದಾನೆ.

ಜಮ್ಮು–ಕಾಶ್ಮೀರದಲ್ಲಿ ಅಗ್ನಿಪಥ್ ನೇಮಕಾತಿಗೆ ಭಾರೀ ಬೇಡಿಕೆ; ಸರತಿ ಸಾಲಿನಲ್ಲಿ ನಿಂತ ಸಾವಿರಾರು ಯುವಕರು

ಶ್ರೀನಗರ: ಭಾರತೀಯ ಸೇನೆಯ ಅಗ್ನಿಪಥ್ ನೇಮಕಾತಿ ಜಮ್ಮುವಿನ ಸಾಂಬ ಜಿಲ್ಲೆಯಲ್ಲಿ ಅ.7 ರಂದು ಪ್ರಾರಂಭವಾಗಿದ್ದು ಸಾವಿರಾರು ಅಭ್ಯರ್ಥಿಗಳು ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಅಗ್ನಿವೀರ್ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಅಭ್ಯರ್ಥಿ ರೋಹಿತ್ ಸಿಂಗ್ ಮಾತನಾಡಿ, ಯಾರು ಚೆನ್ನಾಗಿ ಅಭ್ಯಾಸ ಮಾಡಿದ್ದಾರೋ ಅವರನ್ನು ಆಯ್ಕೆ ಮಾಡಲಾಗುತ್ತದೆ. ನಾನು ದೇಶ ಸೇವೆ ಮಾಡುವುದಕ್ಕೆ ಉತ್ಸುಕನಾಗಿದ್ದೇನೆ, ಅದ್ದರಿಂದ ಸೇನೆಗೆ ಸೇರುತ್ತಿದ್ದೇನೆ ಎಂದು ಹೇಳಿದ್ದಾರೆ. ಕೇಂದ್ರ ಸಚಿವ ಸಂಪುಟ ಜೂ.14 ರಂದು ಭಾರತೀಯ ಯುವಕರಿಗೆ ಸೇನೆಗೆ ಸೇರಲು ಅಗ್ನಿಪಥ್ ಹೆಸರಿನ ನೇಮಕಾತಿ ಯೋಜನೆಯನ್ನು ಜಾರಿಗೆ ತಂದಿತ್ತು. ಈ ಯೋಜನೆಯ ಮೂಲಕ ಆಯ್ಕೆಯಾದ ಯುವಕರನ್ನು ಅಗ್ನಿವೀರರು ಎನ್ನಲಾಗುತ್ತದೆ. ಈ ಯೋಜನೆಯ ಪ್ರಕಾರ ಯುವಕರಿಗೆ ಸೇನೆಯಲ್ಲಿ ಸೇವೆ ಸಲ್ಲಿಸಲು 4 ವರ್ಷಗಳ ಕಾಲ ಅವಕಾಶ ಕಲ್ಪಿಸಲಾಗುತ್ತದೆ.

ಉಚಿತ ಸಂಸ್ಕೃತ ಸಂಭಾಷಣಾ ಶಿಬಿರ



ಮೈಸೂರು, ಅ. 7–ದಸರಾ ಪ್ರಯುಕ್ತ ಹತ್ತು ದಿನಗಳ ಉಚಿತ ಸಂಸ್ಕೃತ ಸಂಭಾಷಣಾ ಶಿಬಿರವನ್ನು ಸೆ.26 ರಿಂದ ಅ.6 ರವರೆಗೆ ರೂಪನಗರದ ದೀಪಾ ಶಾಲೆಯಲ್ಲಿ ಲಕ್ಷ್ಮಿ ರಾಘವ್ ಮತ್ತು ಮಾಲಿನಿ ಶೇಷ್ಯಾ ಆಯೋಜಿಸಿದ್ದರು. ನಮ್ಮ ಪ್ರಾಚೀನ ಭಾಷೆಯನ್ನು ಉಳಿಸಿ, ಬೆಳೆಸುವುದು ನಮ್ಮ ಕರ್ತವ್ಯವೆಂದು ತಿಳಿದು, ಮೊದಲ ಹೆಜ್ಜೆಯಾಗಿ, ನಿತ್ಯ ಬಳಕೆಯ ಲಘು ವಾಕ್ಯಗಳನ್ನು ಹೇಳಿಕೊಡಲಾಯಿತು. ಡಾ.ಸುರೇಶ್ ಹೆಗಡೆ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳು ಸಂಸ್ಕೃತವನ್ನು ತಮ್ಮ ದಿನಚರಿಯ ಭಾಗವಾಗಿ ಬಳಸಬೇಕೆಂದು ಕಿವಿಮಾತು ಹೇಳಿದರು.

ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆ ಹೆಚ್ಚಳ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರಿಗೆ ರಾಜ್ಯ ಸರ್ಕಾರ ಸಂತಸ ಸುದ್ದಿ ನೀಡಿದ್ದು, ಕಳೆದ ಜುಲೈ 1ರಿಂದಲೇ ಪೂರ್ವಾನ್ವಯವಾಗುವಂತೆ ತುಟ್ಟಿಭತ್ಯೆ ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ. ಈ ಬಗ್ಗೆ ಸ್ವತಃ ಸಿಎಂ ಬಸವರಾಜ ಬೊಮ್ಮಾಯಿ ಅವರು ಟ್ವಿಟರ್ ನಲ್ಲಿ ಮಾಹಿತಿ ನೀಡಿದ್ದು, 'ರಾಜ್ಯ ಸರ್ಕಾರಿ ನೌಕರರಿಗೆ ಜುಲೈ 1ರಿಂದ ಜಾರಿಗೆ ಬರುವಂತೆ ತುಟ್ಟಿ ಭತ್ಯೆಯನ್ನು ಶೇ. 3.75 ರಷ್ಟು ಹೆಚ್ಚಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಸರ್ಕಾರ 1,282.72 ಕೋಟಿ ರೂ. ವಾರ್ಷಿಕ ವೆಚ್ಚ ಭರಿಸಲಿದೆ. ಸರ್ಕಾರಿ ಆದೇಶ ಹೊರಡಿಸಲಾಗುವುದು ಎಂದು ಟ್ವೀಟ್ ಮಾಡಿದ್ದಾರೆ. ಇತ್ತೀಚೆಗಷ್ಟೇ ಕೇಂದ್ರ ಸರ್ಕಾರವೂ ಕೂಡ ತನ್ನ ನೌಕರರಿಗೆ ಶೇ. 4ರಷ್ಟು ತುಟ್ಟಿಭತ್ಯೆ ಹೆಚ್ಚಳ ಮಾಡಿತ್ತು.

15 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಭಾರೀ ಸಮಸ್ಯೆ

ಬೆಂಗಳೂರು: ರಾಜ್ಯಾದ್ಯಂತ ಪ್ರಾಥಮಿಕ ಶಾಲೆಗಳಿಗೆ 15 ಸಾವಿರ ಶಿಕ್ಷಕರ ನೇಮಕಕ್ಕೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕೈಗೊಂಡಿರುವ ಅಭಿಯಾನಕ್ಕೆ ತಡೆಯುಂಟಾಗಿದೆ. ಕಾರಣ, ರಾಜ್ಯದ ಹಲವು ಜಿಲ್ಲೆಗಳಲ್ಲಿ ಇದರ ಅರ್ಧದಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಸಾಕಷ್ಟು ಅರ್ಹ ಅಭ್ಯರ್ಥಿಗಳಿಲ್ಲ ಎಂದು ಹೇಳಲಾಗುತ್ತಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಾಕಷ್ಟು ಅರ್ಹ ಅಭ್ಯರ್ಥಿಗಳು ಇಲ್ಲ. ರಾಯಚೂರಿನಲ್ಲಿ ಸುಮಾರು 469 ಗಣಿತ ಶಿಕ್ಷಕರ ಹುದ್ದೆಗಳು ಖಾಲಿಯಿದ್ದು, 230 ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಇಲಾಖೆಯು 1:2 ಅನುಪಾತದ ವಿಧಾನವನ್ನು ಅನುಸರಿಸುತ್ತಿದ್ದು, ಅದರ ಅಡಿಯಲ್ಲಿ ಪ್ರತಿ ಹುದ್ದೆಗೆ 2 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಇಬ್ಬರು ಅಭ್ಯರ್ಥಿಗಳಲ್ಲಿ ಒಬ್ಬರನ್ನು ಹಿರಿತನ, ಅನುಭವ ಮತ್ತು ಅವರ ಪದವಿಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ.

ಡಿಸೆಂಬರ್ 15ರ ವೇಳೆಗೆ 'ನಮ್ಮ ಕ್ಲಿನಿಕ್' ಆರಂಭ



ಬೆಂಗಳೂರು: "ನಮ್ಮ ಕ್ಲಿನಿಕ್" ಡಿಸೆಂಬರ್ 15 ರಂದು ಕಾರ್ಯಾರಂಭ ಮಾಡಲಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ. ರಾಜ್ಯಾದ್ಯಂತ 438 ಕ್ಲಿನಿಕ್‌ಗಳನ್ನು, ಬೆಂಗಳೂರಿನಲ್ಲಿ 243 ಕ್ಲಿನಿಕ್‌ಗಳನ್ನು ಸ್ಥಾಪಿಸಲಾಗುವುದು. ಚಿಕಿತ್ಸಾಲಯಗಳನ್ನು ಪ್ರಾಥಮಿಕವಾಗಿ ಬಿಪಿಎಲ್ ಕುಟುಂಬಗಳು ಮತ್ತು ಕೊಳೆಗೇರಿ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ವಿಸ್ತಾರಗೊಳಿಸಲಾಗಿದೆ ಪ್ರತಿ ವಾರ್ಡ್‌ನಲ್ಲಿ ಸ್ಥಾಪಿಸಲಾಗುವುದು. ಇದು ಸರ್ಕಾರದ ಆರೋಗ್ಯ ಉಪಕ್ರಮಗಳ ಬಗ್ಗೆ ಜಾಗೃತಿಯನ್ನು ಹೆಚ್ಚಿಸುತ್ತದೆ ಎಂದು ಡಾ.ಸುಧಾಕರ್ ಹೇಳಿದರು. ಸರ್ಕಾರಿ ಮತ್ತು ಬಾಡಿಗೆ ಕಟ್ಟಡಗಳಲ್ಲಿ 1,000–2,000 ಚದರ ಅಡಿ ಜಾಗದಲ್ಲಿ ಕ್ಲಿನಿಕ್‌ಗಳನ್ನು ಸ್ಥಾಪಿಸಲಾಗುತ್ತದೆ. ಅದಕ್ಕೆ 155 ಕೋಟಿ ರೂಪಾಯಿ, 138 ಕೋಟಿ ಸಿಬ್ಬಂದಿ ವೆಚ್ಚ ಮತ್ತು 17.52 ಕೋಟಿ ರೂಪಾಯಿಗಳು ಸೇರಿ ಸಾಕಷ್ಟು ಖರ್ಚು–ವೆಚ್ಚವಿದೆ. ಆರೋಗ್ಯ ಇಲಾಖೆಯ ಸಹಾಯವಾಣಿ 108ರ ಅಸಮರ್ಪಕ ಕಾರ್ಯಕ್ಕೆ ಸಂಬಂಧಿಸಿದಂತೆ ಜಿವಿಕೆಯ ಆಂಬ್ಯುಲೆನ್ಸ್ ಟೆಂಡರ್‌ಗಳನ್ನು ಅಂತಿಮಗೊಳಿಸಲಾಗುತ್ತಿದೆ. ಎರಡು ತಿಂಗಳೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ, ನಂತರ ಹೊಸ ಸಂಸ್ಥೆಯನ್ನು ಆಂಬ್ಯುಲೆನ್ಸ್ ಸೇವೆಗೆ ಅಂತಿಮಗೊಳಿಸಲಾಗುವುದು ಎಂದರು.

ಜೀವ ರಕ್ಷಕ ಸೇವಾ ಪ್ರಶಸ್ತಿ ಪ್ರದಾನ



ಮೈಸೂರು, ಅ. 7–ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನಿಗಳ ದಿನಾಚರಣೆ ಅಂಗವಾಗಿ 40ಕ್ಕೂ ಹೆಚ್ಚು ಬಾರಿ ಸ್ವಯಂ ಪ್ರೇರಿತ ರಕ್ತದಾನ ಮಾಡುವ ಮೂಲಕ ಇನ್ನೊಬ್ಬರ ಜೀವ ಉಳಿಸುವ ಕೆಲಸದಲ್ಲಿ ಮುಂದಾಗಿರುವ ರಕ್ತದಾನಿಗಳಿಗೆ ಬ್ಲಡ್ ಆನ್ ಕಾರ್ಡ್ ಕ್ಲಬ್ ಹಾಗೂ ಜೀವಧಾರ ರಕ್ತನಿಧಿ ಕೇಂದ್ರ ವತಿಯಿಂದ ನ್ಯೂ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಜೀವ ರಕ್ಷಕ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಚಿರಂಜಿಲಾಲ್ ಕುಮವತ್, ಸುಮ, ಸಪ್ನಾ ಮಂಡೋತ್, ಜ್ಯೋತಿ ಎಸ್, ಮಹದೇವಸ್ವಾಮಿ ಎಂ, ಅಕ್ಷಯ್ ಕುಮಾರ್ ಎ, ಕೈಲಾಶ್ ವೈಷ್ಣವ್, ಅದ್ವಿತ್ ಎಂ, ಆದಿತ್ಯ ಗುಮ್ಮಾರಾಜು, ಶಿವಕುಮಾರ್ ಹೆಚ್ ಎಂ, ಮಮತಾ ದೇವಿ ರಾಠೋರ್, ಅಭಿಮನ್ಯು ಸಿಂಗ್, ವಿಕಾಸ್ ರಾಠೋರ್ ಮೋದಿ, ಪ್ರಕಾಶ್ ರಾಠೋರ್, ಕೈಲಾಶ್ ರಾಠೋರ್ ಪ್ರಶಸ್ತಿ ಪುರಸ್ಕೃತರು.

ದಾನಗಳಲ್ಲೆ ರಕ್ತದಾನ ಶ್ರೇಷ್ಠದಾನ ರಕ್ತವನ್ನು ದಾನ ಮಾಡುವುದು ಒಳ್ಳೆಯ ಕಾರ್ಯ. ರಕ್ತದಾನ ಮತ್ತೊಬ್ಬರ ಪ್ರಾಣ ಉಳಿಸುವ ಜತೆಗೆ ವ್ಯಕ್ತಿ ಆರೋಗ್ಯಯುತ ಜೀವನ ನಡೆಸಲು ಸಹಕಾರಿಯಾಗಿದೆ. ರಕ್ತಕ್ಕೆ ಪರ್ಯಾಯ ಇಲ್ಲ. ಆದ್ದರಿಂದ ಸಾವಿನ ಅಂಚಿನಲ್ಲಿರುವವರ ಜೀವ ಉಳಿಸಬೇಕಾದರೆ ರಕ್ತ ಮೂಲಾಧಾರ. ಆದ್ದರಿಂದ ಪ್ರತಿಯೊಬ್ಬರೂ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಲು ಮುಂದೆ ಬರಬೇಕು.18 ರಿಂದ 60 ವರ್ಷ ವಯಸ್ಸಿನ ಆರೋಗ್ಯವಂತ ಪುರುಷರು ಹಾಗೂ ಮಹಿಳೆಯರು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬೇಕು. ಒಂದು ಯುನಿಟ್ ರಕ್ತದಿಂದ ನಾಲ್ಕು ಜನರ ಪ್ರಾಣ ಉಳಿಸಬಹುದಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಯುವಜನರು ರಕ್ತದಾನ ಮಾಡಲು ಮುಂದೆ ಬರಬೇಕು.ಇದರಿಂದ ಪ್ರಾಣಹಾನಿ ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು. ರಕ್ತದಾನ ಇತರರಿಗೆ ಮರುಜನ್ಮ ನೀಡುವ ಶ್ರೇಷ್ಠ ಮತ್ತು ಸಾರ್ಥಕ ಸೇವೆಯಾಗಿದೆ.ರಕ್ತದ ಅವಶ್ಯಕತೆ ಉಂಟಾದಾಗ ಮಾತ್ರ ರಕ್ತದ ಮಹತ್ವ ಪ್ರತಿಯೊಬ್ಬರಿಗೂ ಅರಿವಾಗುತ್ತದೆ.ಆದ್ದರಿಂದ ಯುವಕರು ರಕ್ತದಾನದ ಕುರಿತು ಇರುವ ಮೌಢ್ಯಗಳನ್ನು ತೊಡೆಯುವ ಕೆಲಸ ಮಾಡಬೇಕು ಎಂದು ಸಮಾರಂಭದಲ್ಲಿ ಮಾತನಾಡಿದವರು ಕಿವಿಮಾತು ಹೇಳಿದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ನಗರ ಮಹಿಳಾ ಮೋರ್ಚಾ ಅಧ್ಯಕ್ಷರಾದ ಹೇಮಾ ನಂದೀಶ್, ಸಮಾಜ ಸೇವಕರಾದ ಚೇತನಾ ಭೂಷಣ್, ಸೀಮಂತಿನಿ ಬಿ ಶರ್ಮಾ, ಬಿಜೆಪಿ ಮೈಸೂರು ನಗರ ಯುವ ಮೋರ್ಚಾ ಉಪಾಧ್ಯಕ್ಷ ಕೆ ಎಂ ನಿಶಾಂತ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಬ್ಲಡ್ ಆನ್ ಕಾಲ್ ಕ್ಲಬ್ ಮೈಸೂರು, ದೇವೇಂದ್ರ ಪರಿಹಾರಿಯ ಆನಂದ್ ಮಂಡೂತ್ ಹಾಗೂ ಇನ್ನಿತರರು ಹಾಜರಿದ್ದರು.

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದಿದ್ದ ಎಮ್ಮೆಗಳ ಮಾಲೀಕರ ವಿರುದ್ಧ ಎಫ್‌ಐಆರ್



ಅಹಮದಾಬಾದ್: ಮುಂಬೈ–ಗಾಂಧಿನಗರ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಡಿಕ್ಕಿ ಹೊಡೆದು ರೈಲಿನ ಮುಂಭಾಗಕ್ಕೆ ಹಾನಿ ಮಾಡಿದ ಎಮ್ಮೆಗಳ ಮಾಲೀಕರ ವಿರುದ್ಧ ಗುಜರಾತ್‌ನ ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಪ್ರಕರಣ ದಾಖಲಿಸಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಎಮ್ಮೆಗಳಿಗೆ ಡಿಕ್ಕಿ ಹೊಡೆದ ನಂತರ ಹಾನಿಗೊಳಗಾದ ಸೆಮಿ–ಹೈ ಸ್ಪೀಡ್ ರೈಲಿನ ಡ್ರೈವರ್ ಕೋಚ್‌ನ ನೋಸ್ ಕೋನ್ ಕವರ್ ಅನ್ನು ಮುಂಬೈನಲ್ಲಿ ಬದಲಾಯಿಸಲಾಗಿದೆ ಎಂದು ಪಶ್ಚಿಮ ರೈಲ್ವೆ (ಡಬ್ಲ್ಯುಆರ್) ಹೇಳಿಕೆಯಲ್ಲಿ ತಿಳಿಸಿದೆ.

ಗುರುವಾರ ಬೆಳಗ್ಗೆ 3 ಗಂಟೆ ಸುಮಾರಿಗೆ ರೈಲು ಗಾಂಧಿನಗರಕ್ಕೆ ತೆರಳುತ್ತಿದ್ದಾಗ ಅಹಮದಾಬಾದ್ ಬಳಿ ಮುಂಬೈ ಸೆಂಟ್ರಲ್–ಗಾಂಧಿನಗರ ವಂದೇ ಭಾರತ್ ರೈಲು ಸುಮಾರು 11 ಇದ್ದ ಎಮ್ಮೆಗಳ ಹಿಂಡಿಗೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ನಾಲ್ಕು ಎಮ್ಮೆಗಳು ಮೃತಪಟ್ಟಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಹಮದಾಬಾದ್‌ನ ವತ್ವಾ ಮತ್ತು ಮಣಿನಗರ ರೈಲು ನಿಲ್ದಾಣಗಳ ನಡುವೆ ವಂದೇ ಭಾರತ್ ರೈಲಿನ ಮಾರ್ಗದಲ್ಲಿ ಬಂದ ಎಮ್ಮೆಗಳ ಅಪರಿಚಿತ ಮಾಲೀಕರ ವಿರುದ್ಧ ಆರ್‌ಪಿಎಫ್ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಿದೆ ಎಂದು ಅಹಮದಾಬಾದ್ ವಿಭಾಗದ ಡಬ್ಲ್ಯುಆರ್‌ನ ಹಿರಿಯ ವಕ್ತಾರ ಜಿತೇಂದ್ರ ಕುಮಾರ್ ಜಯಂತ್ ಹೇಳಿದ್ದಾರೆ.

ಇದುವರೆಗೆ ಎಮ್ಮೆಗಳ ಮಾಲೀಕರನ್ನು ಗುರುತಿಸಲು ರೈಲ್ವೆ ಪೊಲೀಸರಿಗೆ ಸಾಧ್ಯವಾಗಿಲ್ಲ ಮತ್ತು ಆ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ಹೇಳಿದರು.

ಜಾನುವಾರುಗಳ ಡಿಕ್ಕಿಯಲ್ಲಿ ರೈಲಿನ ಡ್ರೈವರ್ ಕೋಚ್‌ನ ನೋಸ್ ಕೋನ್ ಕವರ್ ಮತ್ತು ಅದರ ಮೌಂಟಿಂಗ್ ಬ್ರಾಕೆಟ್‌ಗಳು ಹಾನಿಗೊಳಗಾಗಿವೆ. ಆದಾಗ್ಯೂ, ರೈಲಿನ ಪ್ರಮುಖ ಭಾಗಗಳ ಮೇಲೆ ಯಾವುದೇ ಪರಿಣಾಮ ಬೀರಿಲ್ಲ.

ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ರೈಲು ಇಂದು ಮುಂಬೈನಿಂದ ಹೊರಟಿದೆ. ಭವಿಷ್ಯದಲ್ಲಿ ಇಂತಹ ಘಟನೆಗಳನ್ನು ತಡೆಯಲು ಪಶ್ಚಿಮ ರೈಲ್ವೆ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಹೇಳಿದರು. ವಂದೇ ಭಾರತ್ ಸರಣಿಯ ಮೂರನೇ ಸೇವೆಯಾದ ಸ್ವದೇಶಿ ವಿನ್ಯಾಸ ಮತ್ತು ತಯಾರಿಸಿದ ಸೆಮಿ–ಹೈಸ್ಪೀಡ್ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 30 ರಂದು ಗಾಂಧಿನಗರದಲ್ಲಿ ಚಾಲನೆ ನೀಡಿದರು ಮತ್ತು ಮರುದಿನದಿಂದ ವಾಣಿಜ್ಯ ಚಾಲನೆ ಪ್ರಾರಂಭಿಸಲಾಯಿತು.

ಕಾಶ್ಮೀರದ ಟಿಟ್ವಾಲ್‌ನಲ್ಲಿ ನೆಲೆ ನಿಲ್ಲಲಿದ್ದಾಳೆ ಶೃಂಗೇರಿ ಶಾರದಾಂಬೆ!

ಚಿಕ್ಕಮಗಳೂರು: ಪಾಕ್ ಆಕ್ರಮಿತ ಪಿ.ಓ.ಕೆಯ ಕಾಶ್ಮೀರದ ಗಡಿಯಲ್ಲಿರುವ ಟಿಟ್ವಾಲ್‌ನಲ್ಲಿ ಕಾಶ್ಮೀರ ಪುರವಾಸಿನ ಶೃಂಗೇರಿ ಶಾರದಾಂಬೆ ನೆಲೆ ನಿಲ್ಲಲಿದ್ದಾಳೆ. ಈಗಾಗಲೇ ಟಿಟ್ವಾಲ್‌ನಲ್ಲಿ ಕಾಶ್ಮೀರಿ ಪುರವಾಸಿನಿ ಶಾರದಾಂಬೆ ದೇಗುಲದ ಜೀರ್ಣೋದ್ಧಾರ ಕಾರ್ಯ ನಡೆಯುತ್ತಿದ್ದು, ಕಾಶ್ಮೀರದ ಶಾರದಾ ಪೀಠಕ್ಕೆ ಜಿಲ್ಲೆಯ ಶೃಂಗೇರಿ ಶಾರದಾಂಬೆ ಸನ್ನಿಧಿಯಿಂದ ಕಾಶ್ಮೀರಿ ಪಂಡಿತರಿಗೆ ಶಾರದಾಂಬೆ ಮೂರ್ತಿಯನ್ನು ಹಸ್ತಾಂತರಿಸಲಾಗಿದೆ. ಕಾಶ್ಮೀರದ ಗಡಿಭಾಗದ ನೀಲಂ ಕಣಿವೆಯ ಟಿಟ್ವಾಲ್‌ನಲ್ಲಿ ನಿರ್ಮಾಣವಾಗುತ್ತಿರುವ ಶಾರದಾ ದೇಗುಲಕ್ಕೆ ಮೂರ್ತಿಯನ್ನು ಹಸ್ತಾಂತರಿಸಲಾಗಿದೆ. ವಿಜಯದಶಮಿ ದಿನದಂದು ಶೃಂಗೇರಿ ಗುರುವತ್ರಯರಾದ ಭಾರತೀ ತೀರ್ಥ ಸ್ವಾಮೀಜಿ ಹಾಗೂ ವಿಧುಶೇಖರ ಶ್ರೀಗಳು ಪಂಚಲೋಹದ ಶೃಂಗೇರಿ ಶಾರದಾಂಬೆಯ ಮೂರ್ತಿಯನ್ನು ಕಾಶ್ಮೀರಿ ಪಂಡಿತರಿಗೆ ಹಸ್ತಾಂತರಿಸಿದ್ದಾರೆ. ಕಾಶ್ಮೀರದ ಭಾಗವಾದ ಟಿಟ್ವಾಲ್‌ನಲ್ಲಿ ಪುರಾತನ ಶಾರದಾಂಬೆ ದೇಗುಲ ಸುಮಾರು ಒಂದೂವರೆ ಕೋಟಿ ವೆಚ್ಚದಲ್ಲಿ ಮರು ನಿರ್ಮಾಣವಾಗುತ್ತಿದೆ. ಕಾಶ್ಮೀರಿ ಪಂಡಿತರ ಸಮಿತಿ ಮುಖ್ಯಸ್ಥ ರವೀಂದ್ರ ಪಂಡಿತ್‌ಗೆ ಗುರುವತ್ರಯರು ಮೂರ್ತಿಯನ್ನ ಹಸ್ತಾಂತರಿಸಿದ್ದಾರೆ. ಶಾರದಾಂಬೆ ದೇಗುಲ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದ್ದು, ಮುಂದಿನ ನವರಾತ್ರಿ ವೇಳೆಗೆ ಕಾಶ್ಮೀರದಲ್ಲಿ ಶಾರದಾಂಬೆ ದೇಗುಲ ಲೋಕಾರ್ಪಣೆಗೊಳ್ಳಲಿದೆ. ಕಾಶ್ಮೀರದಲ್ಲಿ ನೂತನ ದೇವಾಲಯ ನಿರ್ಮಾಣವಾಗುತ್ತಿರುವ ಜಾಗದಲ್ಲಿ ಶಿಲ್ಪಿಗಳಿಗೆ ಭಾಷೆ ಗೊತ್ತಿಲ್ಲ. ನೆಟ್‌ವರ್ಕ್ ಇಲ್ಲ. ತರಕಾರಿ ಸಿಗೋದು ಕಷ್ಟ, ಇಂತಹ ಕಡೆ ಮರೋಪಾದಿಯಲ್ಲಿ ಹಗಲಿರುಳೆನ್ನದೆ ನಮ್ಮ ಶಿಲ್ಪಿಗಳು ತಿಂಗಳುಗಳ ಕಾಲ ಶ್ರಮಿಸಿ ಕಲ್ಲಿನ ಕೆಲಸ ಮುಗಿಸಿರೋದು ಹೆಮ್ಮೆಯ ಸಂಗತಿ. ದೇವಾಲಯದ ಮೇಲ್ಛಾವಣಿ ಕೆಲಸ ಆರಂಭವಾಗಬೇಕಿದ್ದು, ಪ್ರಾಯೋಗಿಕವಾಗಿ ದೇವಾಲಯದ ಮಹಾದ್ವಾರವನ್ನು ಅಳವಡಿಸಲಾಗಿದೆ. ಕಾಶ್ಮೀರದಲ್ಲಿ ಶಿಲಾಮಯ ದೇಗುಲ ಇನ್ನೇನು ಕೆಲವೇ ದಿನಗಳಲ್ಲಿ ಭಕ್ತರ ದರ್ಶನಕ್ಕೆ ಲಭ್ಯವಾಗಲಿದೆ. ಪಂಚಲೋಹದಲ್ಲಿ ನಿರ್ಮಾಣವಾಗಿರುವ ಶ್ರೀ ಶಾರದಾ ದೇವಿ ವಿಗ್ರಹವು 100 ಕೆಜಿ ತೂಕವಿದ್ದು, ಬೆಂಗಳೂರಿನ ಶಿಲ್ಪಿಗಳು ಸುಂದರವಾಗಿ ಶಾರದೆಯ ಮೂರ್ತಿಯನ್ನ ನಿರ್ಮಾಣ ಮಾಡಿದ್ದಾರೆ.

ಕುಶಾಲನಗರ ಪಪಂ ಮುಖ್ಯಾಧಿಕಾರಿ ದಿಢೀರ್ ವರ್ಗಾವಣೆ ಖಂಡಿಸಿ ಪ್ರತಿಭಟನೆ



ಕುಶಾಲನಗರ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ವರ್ಗಾವಣೆ ರದ್ದುಗೊಳಿಸುವಂತೆ ಆಗ್ರಹಿಸಿ ಕುಶಾಲನಗರದ ಪ್ರಜ್ಞಾವಂತ ನಾಗರಿಕ ವೇದಿಕೆ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಯಿತು.

ಕುಶಾಲನಗರ, ಅ.7– ಸ್ಥಳೀಯ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ವರ್ಗಾವಣೆ ರದ್ದುಗೊಳಿಸುವಂತೆ ಆಗ್ರಹಿಸಿ ಕುಶಾಲನಗರದ ಪ್ರಜ್ಞಾವಂತ ನಾಗರಿಕ ವೇದಿಕೆ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಯಿತು.

ವೇದಿಕೆ ಪ್ರಮುಖ ವಿ.ಪಿ.ಶಶಿಧರ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕುಶಾಲನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಿಂದ ಪಟ್ಟಣ ಪಂಚಾಯತ್ ಕಛೇರಿ ವರೆಗೆ ಕಾಲ್ನಡಿಗೆಯಲ್ಲಿ ತೆರಳಿದ ಪ್ರತಿಭಟನಾಕಾರರು ಮಡಿಕೇರಿ ಶಾಸಕ ಅಪ್ಪಚ್ಚುರಂಜನ್ ವಿರುದ್ಧ ಧಿಕ್ಕಾರ ಕೂಗಿದರು. ಓರ್ವ ದಕ್ಷ ಅಧಿಕಾರಿಯನ್ನು ವರ್ಗಾವಣೆಗೊಳಿಸಿ ಆ ಜಾಗಕ್ಕೆ ಭ್ರಷ್ಟಾಚಾರ ಕಳಂಕ ಹೊತ್ತಿರುವ ಅಧಿಕಾರಿಯೊಬ್ಬರನ್ನು ನಿಯೋಜಿಸುವ ಮೂಲಕ ಅಪ್ಪಚ್ಚುರಂಜನ್ ಭೂ ಮಾಫಿಯಾಗೆ ಸಹಕಾರ ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಕೂಡಲೆ ಮುಖ್ಯಾಧಿಕಾರಿ ಕೃಷ್ಣಪ್ರಸಾದ್ ಅವರ ವರ್ಗಾವಣೆ ರದ್ದುಗೊಳಿಸುವಂತೆ ಆಗ್ರಹಿಸಿದರು. ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ವಿ.ಪಿ.ಶಶಿಧರ್, ಕುಶಾಲನಗರದಲ್ಲಿ ಭೂ ಮಾಫಿಯ ಮಿತಿಮೀರಿದೆ. ಅಕ್ರಮ ದಾಖಲೆಗಳನ್ನು ಸೃಷ್ಟಿಸಿ ಸರಕಾರಿ ಭೂಮಿಗಳನ್ನು ಕಬಳಿಸುವ ಹುನ್ನಾರಗಳು ನಡೆಯುತ್ತಿವೆ. ಅನಧಿಕೃತ, ಅಕ್ರಮ ಲೇಔಟ್‌ಗಳು ನಿಯಮ ಉಲ್ಲಂಘಿಸಿ ರಚನೆಯಾಗುತ್ತಿವೆ. ಇಂತಹ ಪ್ರಕ್ರಿಯೆಗಳ ವಿರುದ್ಧ ಮುಖ್ಯಾಧಿಕಾರಿ ಕೃಷ್ಣಪ್ರಸಾದ್ ಅವರು ಕಟ್ಟುನಿಟ್ಟಾಗಿ ಯಾವುದೇ ಆಮಿಷಕ್ಕೆ ಒಳಗಾಗದೆ ಊರಿನ ಆಸ್ತಿಪಾಸ್ತಿ ರಕ್ಷಣೆಯಲ್ಲಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದರು. ಆಸ್ಪತ್ರೆಗೆಂದು ಪರವಾನಗಿ ಪಡೆದು ಲೇಔಟ್ ಆಗಿ ಬದಲಾದ ಕ್ಯಾರವಾನ್ ಲೇಔಟ್ ಪ್ರಕರಣ ಸಂಬಂಧ ಅಕ್ರಮಕ್ಕೆ ಸಹಕರಿಸದ ಮುಖ್ಯಾಧಿಕಾರಿಯನ್ನು ಶಾಸಕರೇ ವರ್ಗಾವಣೆ ಗೊಳಿಸಿ ಆ ಸ್ಥಾನಕ್ಕೆ ತಮ್ಮ ಆಜ್ಞೆಯಂತೆ ಅಕ್ರಮಕ್ಕೆ ಸಹಕರಿಸುವ ವ್ಯಕ್ತಿಯನ್ನು ಹುಡುಕಿ ತಂದಿದ್ದಾರೆ ಎಂದು ಆರೋಪಿಸಿದರು. ಜಿಪಂ ಮಾಜಿ ಅಧ್ಯಕ್ಷ ಎಚ್.ಎಸ್.ಅಶೋಕ್ ಮಾತನಾಡಿ, ಕುಶಾಲನಗರ ಉತ್ತಮ ನಗರವಾಗಿ ರೂಪುಗೊಳ್ಳಬೇಕಾದರೆ ನಿಷ್ಠಾವಂತ ಅಧಿಕಾರಿಗಳು ಅಗತ್ಯ. ಈಗಾಗಲೆ ಪಟ್ಟಣದಲ್ಲಿ ಅಕ್ರಮ ಲೇಔಟ್ ಗಳ ಹಾವಳಿ ಹೆಚ್ಚಾಗಿದೆ. ನಗರ ಯೋಜನಾ ಪ್ರಾಧಿಕಾರದ ನಿಯಮಾನುಸಾರ ಎಲ್ಲಾ ನಿರ್ಮಾಣ ಕಾಮಗಾರಿ ನಡೆಯುವುದು ಅಗತ್ಯ. ನಗರ ಯೋಜನಾ ಪ್ರಾಧಿಕಾರದ ಅಧಿಕಾರಿ ಕೂಡ ಇತ್ತೀಚೆಗೆ ಬದಲಾಗಿರುವುದು ವಿಷಾದಕರ ಸಂಗತಿ ಎಂದರು. ಕುಶಾಲನಗರ ಪಪಂ ಸದಸ್ಯ ವಿ.ಎಸ್.ಆನಂದಕುಮಾರ್ ಮಾತನಾಡಿ, ಕಸ ವಿಲೇವಾರಿ ಘಟಕ, ವಸತಿ ರಹಿತರಿಗೆ ಸೂರು, ಬೀದಿಬದಿ ವ್ಯಾಪಾರಿಗಳ ಅಭ್ಯುದಯಕ್ಕೆ ಯೋಜನೆಗಳನ್ನು ರೂಪಿಸಿದಂತಹ ಅಧಿಕಾರಿಯನ್ನು ವರ್ಗಾಯಿಸಿರುವುದು ಸರಿಯಲ್ಲ ಎಂದರು. ಡಿ.ಎಸ್.ಎಸ್ ಸಂಚಾಲಕ ಕೆ.ಬಿ.ರಾಜು ಮಾತನಾಡಿದರು.

ಪ್ರತಿಭಟನೆಯಲ್ಲಿ ಪಪಂ ಸದಸ್ಯರಾದ ಪ್ರಮೋದ್ ಮುತ್ತಪ್ಪ, ಸುಂದರೇಶ್, ವೇದಿಕೆ ಪ್ರಮುಖರಾದ ವಿ.ಜೆ.ನವೀನ್, ಚಂದ್ರು, ಎಸ್.ಎನ್.ರಾಜೇಂದ್ರ, ಎಂ.ಡಿ.ರಮೇಶ್, ಅಜಿತ್, ಶಿವಶಂಕರ್, ಆದಂ, ದೇವ್ರು, ನಂಜುಂಡಪ್ಪ ಮತ್ತಿತರರು ಇದ್ದರು.

ಹಾರಂಗಿಯಲ್ಲಿ ಇಂದು ಟ್ರೀಪಾರ್ಕ್, ನೂತನ ಸಾಕಾನೆ ಶಿಬಿರ ಲೋಕಾರ್ಪಣೆ



ದುಬಾರೆಯಿಂದ ಆರು ಸಾಕಾನೆಗಳ ಸ್ಥಳಾಂತರ

"ಹಾರಂಗಿ ಬಳಿ ನೂತನ ಟ್ರೀಪಾರ್ಕ್ ಹಾಗೂ ಸಾಕಾನೆ ಶಿಬಿರ ಆರಂಭಿಸಲು 80 ಲಕ್ಷ ರೂ. ಅನುದಾನ ಬಿಡುಗಡೆಗೊಂಡಿದ್ದು, ಇದೀಗ ಬಹುತೇಕ ಕಾಮಗಾರಿ ಪೂರ್ಣಗೊಂಡಿದೆ. ರಸ್ತೆ ಚರಂಡಿ ಸೇರಿದಂತೆ ಇನ್ನಿತರ ಅಗತ್ಯ ಸೌಕರ್ಯಗಳನ್ನು ಒದಗಿಸಬೇಕಾಗಿದೆ. ಈಗ ದುಬಾರೆ ಯಿಂದ ಆರು ಆನೆಗಳನ್ನು ಹಾರಂಗಿ ಶಿಬಿರಕ್ಕೆ ಸ್ಥಳಾಂತರ ಮಾಡಲಾಗಿದೆ.

–ಶಿವರಾಮ್,
ವಲಯ ಅರಣ್ಯಾಧಿಕಾರಿ, ಕುಶಾಲನಗರ.

"ಹಾರಂಗಿ ಜಲಾಶಯ ಬಳಿ ಟ್ರೀಪಾರ್ಕ್ ಹಾಗೂ ಸಾಕಾನೆ ಶಿಬಿರ ಆರಂಭಗೊಂಡಿರುವುದು ತುಂಬ ಸಂತಸ ತಂದಿದೆ. ಹಾರಂಗಿಯಲ್ಲಿ ಸಾಕಾನೆ ಶಿಬಿರ ಆರಂಭಿಸಬೇಕು ಎಂದು ಶಾಸಕ ಅಪ್ಪಚ್ಚುರಂಜನ್ ಹಾಗೂ ಸಚಿವರಿಗೆ ಮನವಿ ಪತ್ರ ಸಲ್ಲಿಸಲಾಗಿತ್ತು. ಶಾಸಕ ರಂಜನ್ ಅವರ ಪ್ರಯತ್ನದಿಂದ ನೂತನ ಶಿಬಿರ ನಿರ್ಮಾಣವಾಗಿದೆ. ಇದರಿಂದ ಪ್ರವಾಸಿಗರಿಗೆ ಹಾಗೂ ಸ್ಥಳೀಯರಿಗೆ ಸಂತೋಷವಾಗಿದೆ. ಜೊತೆಗೆ ಪ್ರವಾಸೋದ್ಯಮ ಅಭಿವೃದ್ಧಿಗೆ ಇದು ಸಹಕಾರಿಯಾಗಿದೆ.

–ಭಾಸ್ಕರ್ ನಾಯಕ್, ಉಪಾಧ್ಯಕ್ಷ,
ಕೂಡುಮಂಗಳೂರು ಗ್ರಾಪಂ ಹಾರಂಗಿ.



ಕುಶಾಲನಗರ, ಅ.7– ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ಹಾರಂಗಿ ಜಲಾಶಯ ಬಳಿ ನಿರ್ಮಾಣಗೊಂಡಿರುವ ವೃಕ್ಷೋದ್ಯಾನದ (ಟ್ರೀಪಾರ್ಕ್) ಆವರಣದಲ್ಲಿ ನೂತನ ಸಾಕಾನೆ ಶಿಬಿರಕ್ಕೆ ಆರು ಸಾಕಾನೆಗಳನ್ನು ದುಬಾರೆ ಯಿಂದ ಸ್ಥಳಾಂತರ ಮಾಡಿದ್ದು, ಅ.8ರಂದು ಶನಿವಾರ ಜಿಲ್ಲೆಯ 3ನೇ ಸಾಕಾನೆ ಶಿಬಿರ ಲೋಕಾರ್ಪಣೆ ಆಗಲಿದೆ.

ಪ್ರಕೃತಿ ಸೌಂದರ್ಯದಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿರುವ ಪ್ರವಾಸಿಗರ ಸ್ವರ್ಗ ಎಂದೇ ಕರೆಯುವ ಕೊಡಗು ಜಿಲ್ಲೆಯಲ್ಲಿ ಮತ್ತೊಂದು ಸಾಕಾನೆ ಶಿಬಿರ ಆರಂಭವಾಗುತ್ತಿರುವುದು ಪ್ರವಾಸಿಗರಿಗೆ ಮತ್ತು ಸ್ಥಳೀಯರಿಗೆ ಹರ್ಷ ತಂದಿದೆ.

ಜಿಲ್ಲೆಯಲ್ಲಿ ಈಗಾಗಲೇ ದುಬಾರೆ ಹಾಗೂ ಮತ್ತಿಗೋಡು ಸಾಕಾನೆ ಶಿಬಿರಗಳಿದ್ದು, ಮೂರನೇ ಶಿಬಿರವಾಗಿ ಹಾರಂಗಿ ಗುರುತಿಸಿಕೊಳ್ಳಲಿದೆ. ಹಾರಂಗಿ ಜಲಾಶಯಕ್ಕೆ ಹೊಂದಿಕೊಂಡಂತಿರುವ ಬಲಭಾಗದ ಹಿನ್ನೀರಿನ ದಂಡೆಯಲ್ಲಿ ಶಿಬಿರ ನಿರ್ಮಿಸಲಾಗಿದೆ. ಅರಣ್ಯ ಇಲಾಖೆಯ 40 ಎಕರೆ ಪ್ರದೇಶದಲ್ಲಿ ಸುಮಾರು 80 ಲಕ್ಷ ರೂ. ವೆಚ್ಚದಲ್ಲಿ ಟ್ರೀಪಾರ್ಕ್ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಈ ಆವರಣದಲ್ಲಿರುವ ಹತ್ತು ಎಕರೆ ಪ್ರದೇಶದಲ್ಲಿ ಸಾಕಾನೆ ಶಿಬಿರವನ್ನು ಅಭಿವೃದ್ಧಿ ಪಡಿಸಲಾಗಿದೆ.

ಹಾರಂಗಿ ಸಾಕಾನೆ ಶಿಬಿರದಲ್ಲಿ ಮಾವುತರಿಗೆ ವಸತಿ ಗೃಹ ನಿರ್ಮಾಣ, ಹಿನ್ನೀರಿನಲ್ಲಿ ದೋಣಿ ವಿಹಾರ, ಆನೆಗಳಿಗೆ ಆಹಾರ ತಯಾರಿಸಲು ಅಡುಗೆ ಮನೆ, ಎರಡು ಉಗ್ರಾಣ ಸೇರಿದಂತೆ ಶಿಬಿರ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರಿಗೆ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ



ಹಾಗೂ ಅರಣ್ಯ ಪ್ರದೇಶಕ್ಕೆ ಹಾನಿಯಾಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ವಿದ್ಯುತ್ ಸಂಪರ್ಕ ಕಾಮಗಾರಿಯನ್ನು ಯುಜಿ ಕೇಬಲ್ ಬಳಸಿ ಅಂಡರ್ ಗ್ರೌಂಡ್ ಸಂಪರ್ಕ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಈಗಾಗಲೇ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿದ್ದು, ರಸ್ತೆ, ಚರಂಡಿ ಸೇರಿದಂತೆ ಇನ್ನಿತರ ಕೆಲವು ಕಾಮಗಾರಿಗಳು ಬಾಕಿ ಉಳಿದಿದ್ದು, ಹೊಸ ವರ್ಷದ ಆರಂಭದ ಹೊತ್ತಿಗೆ ನೂತನ ಸಾಕಾನೆ ಶಿಬಿರ ಲೋಕಾರ್ಪಣೆ ಆಗಲಿದೆ.

ಆರು ಆನೆಗಳ ಸ್ಥಳಾಂತರ: ದುಬಾರೆ ಸಾಕಾನೆಗಳಾದ ರಾಮ (68 ವರ್ಷ) ಮಾವುತ ಎಂ.ಎನ್. ಮಂಜುನಾಥ್ ಕಾವಾಡಿಗ ಪೊನ್ನಪ್ಪ, ಏಕದಂತ (52 ವರ್ಷ) ಮಾವುತ ನಾಗರಾಜ್ ಕಾವಾಡಿಗ ಜೀವನ್, ಮಾರುತಿ (21 ವರ್ಷ) ಮಾವುತ ಭರತ್ ನಾಯಕ್, ಕಾವಾಡಿಗ ಸುನೀಲ್, ಸುಬ್ರಮಣಿ (35 ವರ್ಷ) ಮಾವುತ ಮೇಘರಾಜ್ ಕಾವಾಡಿಗ ಕರಿಯಣ್ಣ, ವಿಕ್ರಮ (58 ವರ್ಷ) ಮಾವುತ ಜೆ.ಕೆಪುಟ್ಟ, ಕಾವಾಡಿಗ ಹೇಮಂತ ಕುಮಾರ, ವಿಜಯ(48 ವರ್ಷ) ಮಾವುತ ಭೋಜಪ್ಪ , ಕಾವಾಡಿಗ ಭರತ್ ಅವರನ್ನು ಹಾರಂಗಿ ಶಿಬಿರಕ್ಕೆ ಪ್ರಥಮ ಹಂತದಲ್ಲಿ ಸ್ಥಳಾಂತರ ಮಾಡಲಾಗಿದೆ.

ಹಿರಿಯ ಅಧಿಕಾರಿಗಳ ಭೇಟಿ ಪರಿಶೀಲನೆ: ರಾಜ್ಯ ಅರಣ್ಯ ಇಲಾಖೆಯ ಕಾರ್ಯಪಡೆ ಮುಖ್ಯಸ್ಥ ಪಿಸಿಸಿಎಫ್ ಆರ್.ಕೆ.ಸಿಂಗ್, ನೋಡೆಲ್ ಅಧಿಕಾರಿ ಎಪಿಸಿಸಿಎಫ್ ಬ್ರಿಜೇಶ್ ಕುಮಾರ್ ಅವರು ದುಬಾರೆ ಹಾಗೂ ಹಾರಂಗಿ ಟ್ರೀಪಾರ್ಕ್, ಸಾಕಾನೆ ಶಿಬಿರಕ್ಕೆ ಈಚೆಗೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲನೆ ನಡೆಸಿದರು. ದುಬಾರೆಯಿಂದ ಪ್ರಥಮ ಹಂತವಾಗಿ ಆರು ಸಾಕಾನೆಗಳನ್ನು ಸ್ಥಳಾಂತರಗೊಳಿಸಲು ಸಮ್ಮತಿ ಸೂಚಿಸಿದರು. ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಭೇಟಿಗೆ ಅವಕಾಶ ಮಾಡಿಕೊಡುವಂತೆ ಸೂಚನೆ ನೀಡಿದರು.

ಹೈಕೋರ್ಟ್ ಆದೇಶ

ಸಾಕಾನೆ ಶಿಬಿರಗಳಲ್ಲಿ ಅಗತ್ಯ ಸಂಖ್ಯೆಗಿಂತ ಹೆಚ್ಚು ಸಾಕಾನೆಗಳಿದ್ದು, ಅವುಗಳ ಒತ್ತಡವನ್ನು ತಗ್ಗಿಸಲು ಹೈಕೋರ್ಟ್ ಈ ಹಿಂದೆ ಆದೇಶ ನೀಡಿತ್ತು. ಒಂದು ಶಿಬಿರದಲ್ಲಿ ಗರಿಷ್ಠ 15 ಆನೆಗಳು ಮಾತ್ರ ಎಂಬ ನಿಯಮವಿದ್ದು, ಅದರಂತೆ ದುಬಾರೆ ಶಿಬಿರದಲ್ಲಿ ಒತ್ತಡ ತಪ್ಪಿಸುವ ನಿಟ್ಟಿನಲ್ಲಿ ಹೊಸ ಶಿಬಿರ ಆರಂಭಿಸಲಾಗಿದೆ.

ಪ್ರಸ್ತುತ ದುಬಾರೆ ಶಿಬಿರದಲ್ಲಿ 31 ಸಾಕಾನೆಗಳಿದ್ದು, ಒತ್ತಡ ಹೆಚ್ಚಿರುವ ಕಾರಣ ಪ್ರಾರಂಭಿಕವಾಗಿ ಐದು ಆನೆಗಳನ್ನು ಹಾರಂಗಿಗೆ ಸ್ಥಳಾಂತರಿಸಲಾಗಿದೆ. ಹೆಚ್ಚಿನ ಅನುದಾನ ಬಿಡುಗಡೆಯಾದ ನಂತರ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಿ ಹಂತ ಹಂತವಾಗಿ ಮತ್ತಷ್ಟು ಆನೆಗಳನ್ನು ಹಾರಂಗಿ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಮ್ ತಿಳಿಸಿದರು.

ಸೌಲಭ್ಯಕ್ಕೆ ಆಗ್ರಹಿಸಿ ಕ್ರೀಡಾಪಟುಗಳ ಪ್ರತಿಭಟನೆ



ವಿರಾಜಪೇಟೆ,ಅ7– ಕ್ರೀಡಾಪಟುಗಳಿಗೆ ಸೂಕ್ತ ಸೌಲಭ್ಯಗಳನ್ನು ನೀಡುವಂತೆ ಆಗ್ರಹಿಸಿ ವಿರಾಜಪೇಟೆಯಲ್ಲಿ ಕ್ರೀಡಾಪಟುಗಳು ಹಾಗೂ ಕ್ರೀಡಾ ಸಂಸ್ಥೆಗಳ ಪ್ರತಿನಿಧಿಗಳು ಪಟ್ಟಣದ ತೆಲುಗರ ಬೀದಿಯಿಂದ ತಾಲೂಕು ಕಚೇರಿಯ ವರೆಗೆ ಪ್ರತಿಭಟನಾ ಜಾಥಾ ನಡೆಸಿದರು.

ಈ ಸಂದರ್ಭ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಅಂತರ್ ರಾಷ್ಟ್ರೀಯ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ, ವಿರಾಜಪೇಟೆಯಲ್ಲಿ ಯಾವುದೇ ಸುಸಜ್ಜಿತವಾದ ಕ್ರೀಡಾಂಗಣ ಇಲ್ಲವಾಗಿದ್ದು, ಕ್ರೀಡಾ ಚಟುವಟಿಕೆಗಳಿಗಾಗಿ ಮಡಿಕೇರಿ, ಪೊನ್ನಂಪೇಟೆಗೆ ತೆರಳುವ ಸ್ಥಿತಿಯಿದೆ. ಕ್ರೀಡಾಪಟುಗಳಿಗೆ ಕನಿಷ್ಠ ಮೂಲ ಸೌಕರ್ಯ ಒದಗಿಸಲು ಸ್ಥಳೀಯ ಆಡಳಿತ ಮತ್ತು ಸರ್ಕಾರಗಳು ವಿಫಲವಾಗಿದೆ ಎಂದು ಆರೋಪಿಸಿದರು.

ನಗರದ ಜೂನಿಯರ್ ಕಾಲೇಜು ಅವರಣದಲ್ಲಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರೀಡಾಂಗಣದ ಕಾಮಗಾರಿ 5 ವರ್ಷಗಳಿಂದ ಸ್ಥಗಿತಗೊಂಡಿದೆ. ಮಾತ್ರವಲ್ಲದೆ ಬಾಸ್ಕೆಟ್ ಬಾಲ್ ಅಂಕಣ ದುರಸ್ತಿ ಕಾಣದೆ ವರ್ಷಗಳಾಗಿದ್ದು, ಇದರಿಂದ ಕ್ರೀಡಾಪಟುಗಳಿಗೆ ಹಿನ್ನಡೆ ಉಂಟಾಗಿದೆ. ತಾಲೂಕು ಮೈದಾನ ಕ್ರೀಡೆ ಮತ್ತು ಸಾರ್ವಜನಿಕ ಕಾರ್ಯ ಕ್ರಮಗಳಿಗೆ ಸೀಮಿತವಾಗಿದೆ. ಆದರೆ ಈ ಪ್ರದೇಶದಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ತಕ್ಷಣವೇ ವಾಹನ ನಿಲುಗಡೆಯನ್ನು ಸ್ಥಗಿತಗೊಳಿಸಿ ಮೈದಾನದ ಯಥಾಸ್ಥಿತಿಯನ್ನು ಕಾಪಾಡಬೇಕು ಎಂದು ಒತ್ತಾಯಿಸಿದರು.

ತಾಲೂಕಿನಲ್ಲಿ ಫುಟ್ಬಾಲ್ ಮತ್ತು ಹಾಕಿ ಆಟಗಾರರಿಗೆ ಆಸ್ಟ್ರೋಟರ್ಫ್ ಮೈದಾನ ನಿರ್ಮಾಣವಾಗಬೇಕು, ಅಥ್ಲೇಟಿಕ್ಸ್‌ಗಳಿಗೆ ಸಿಂಥೆಟಿಕ್ ಟ್ರ್ಯಾಕ್, ಈಜುಪಟುಗಳಿಗೆ ಈಜುಕೊಳ ನಿರ್ಮಾಣ ಕಾರ್ಯಗಳಿಗೆ ಒತ್ತಾಯಿಸಿ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದೇವೆ. ಕ್ರೀಡಾಪಟುಗಳ ಮನವಿಯನ್ನು ಸ್ಥಳೀಯ ಜಿಲ್ಲಾಡಳಿತ ಮತ್ತು ಸರ್ಕಾರಗಳು ಪರಿಗಣಿಸಿ ಸಮಸ್ಯೆಗಳಿಗೆ ಪರಿಹಾರ ಸೂಚಿಸಬೇಕು. ತಪ್ಪಿದಲ್ಲಿ ಮುಂದಿನ ದಿನಗಳಲ್ಲಿ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಎಚ್ಚರಿಸಿದರು.

ಎಜಾಜ್ ಅಹಮ್ಮದ್ ಮಾತನಾಡಿ, ನಗರದಲ್ಲಿ ವಿವಿಧ ಕ್ರೀಡಾ ಸಂಸ್ಥೆಗಳು ಹಲವು ಬಗೆಯ ಕ್ರೀಡಾ ಉತ್ಸವಗಳನ್ನು ಆಚರಿಸಿಕೊಂಡು ಬಂದಿದೆ. ಸುಸಜ್ಜಿತವಾದ ಕ್ರೀಡಾಂಗಣವಿಲ್ಲದೆ ಕ್ರೀಡಾ ಪ್ರತಿಭೆಗಳಿಗೆ ಸೌಕರ್ಯವಿಲ್ಲದೆ ರಾಜ್ಯ, ದೇಶ ವಿದೇಶ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಿರಿಯ ವಾಲಿಬಾಲ್ ಕ್ರೀಡಾಪಟು ಅಬ್ದುಲ್ ರೆಹಮಾನ್ ಮಾತನಾಡಿ, ವಾಲಿಬಾಲ್ ಕ್ರೀಡೆಯಲ್ಲಿ ವಿಫುಲ ಅವಕಾಶಗಳಿದ್ದರೂ ಕ್ರೀಡಾಂಗಣ ಮತ್ತು ಮೂಲ ಸೌಕರ್ಯಗಳಿಂದ ವಂಚಿತರಾಗಿ ಕ್ರೀಡಾ ಪ್ರತಿಭೆಗಳು ಮೂಲೆಗುಂಪಾಗುವ ಸ್ಥಿತಿ ತಲೆದೋರಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕ್ರೀಡಾಪಟುಗಳ ಈ ಹೋರಾಟಕ್ಕೆ ವಾಲಿಬಾಲ್ ಕ್ರೀಡಾ ಸಂಸ್ಥೆಗಳ ಬೆಂಬಲವಿದೆ ಎಂದರು.

ಬಳಿಕ ತಾಲೂಕು ಉಪ ತಹಸೀಲ್ದಾರ್ ಪ್ರದೀಪ್ ಕುಮಾರ್ ಮೂಲಕ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಲಾಯಿತು. ಪ್ರತಿಭಟನಾ ಜಾಥಾದಲ್ಲಿ ನೂರಕ್ಕೂ ಅಧಿಕ ಮಂದಿ ಕ್ರೀಡಾಪಟುಗಳು, ವಿವಿಧ ಕ್ರೀಡೆಗಳನ್ನು ಆಯೋಜಿಸುವ ಕ್ರೀಡಾ ಸಂಸ್ಥೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಯುಎಇನಲ್ಲಿ ಕೈಲ್ ಮುಹೂರ್ತ ಆಚರಣೆ



ಮಡಿಕೇರಿ, ಅ.7– ಯುಎಇನಲ್ಲಿ ನೆಲೆಸಿರುವ ಅರೆಭಾಷೆ ಗೌಡ ಕುಟುಂಬದವರು ಇತ್ತೀಚೆಗೆ ಅಜ್ಮಾನ್ ಬೀಜ್ ಹೋಟೆಲ್‌ನಲ್ಲಿ ಕೈಲ್ ಮುಹೂರ್ತ ಸಮಾರಂಭವನ್ನು ಆಚರಿಸಿದರು.

ಆಯುಧ ಪೂಜೆಯೊಂದಿಗೆ ಆರಂಭವಾದ ವಿವಿಧ ಕ್ರೀಡಾ ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ವೀರಾಜಪೇಟೆ ಕ್ಷೇತ್ರದ ಶಾಸಕ ಕೆ.ಜಿ. ಬೋಪಯ್ಯ ಸೇರಿದಂತೆ ಹಲವಾರು ಕೊಡಗು ಗೌಡ ಜನಾಂಗದ ಪ್ರಮುಖರು ಹಾಗೂ ಹಿತೈಷಿಗಳು ವೀಡಿಯೊ ಮುಖಾಂತರ ಶುಭ ಹಾರೈಸಿದರು.

ಸಮಿತಿ ಸದಸ್ಯರಾದ ಆನೇರ, ಬೆಳ್ಯನ, ಗುಡ್ಡನ, ಕಡ್ಲೇರ, ಕಲ್ಲಂಬಿ, ಕರ್ಣಯ್ಯನ, ಕತ್ರಿಕೊಲ್ಲಿ, ಕುದುಪಜೆ, ಕೊಂಪುಳಿರ, ಮುಕ್ಕಾಟಿರ, ಮೊಟ್ಟನ ಕುಟುಂಬದವರ ನೇತೃತ್ವದಲ್ಲಿ ಕಾರ್ಯಕ್ರಮ ಸುವ್ಯವಸ್ಥಿತವಾಗಿ ಏರ್ಪಡಿಸಲಾಗಿತ್ತು.

ಕೊಳ್ಳೇಗಾಲ ನಗರಸಭೆ ಉಪಚುನಾವಣೆ
ಸೆಕ್ಟರ್ ಅಧಿಕಾರಿ ನೇಮಕ

ಚಾಮರಾಜನಗರ, ಅ.7–ಕೊಳ್ಳೇಗಾಲ ನಗರಸಭೆಯಲ್ಲಿ ತೆರವಾಗಿರುವ 7 ಸದಸ್ಯ ಸ್ಥಾನಕ್ಕೆ ಅ.28ರಂದು ನಿಗದಿಯಾಗಿರುವ ಉಪ ಚುನಾವಣೆ ಸಂಬಂಧ ಕಟ್ಟುನಿಟ್ಟಾಗಿ ಮಾದರಿ ನೀತಿ ಸಂಹಿತೆ ಅನುಷ್ಠಾನಗೊಳಿಸಲು ಸೆಕ್ಟರ್ ಅಧಿಕಾರಿಗಳನ್ನು ನೇಮಕ ಮಾಡಿ ಡಿಸಿ ಚಾರುಲತಾ ಸೋಮಲ್ ಆದೇಶ ಹೊರಡಿಸಿದ್ದಾರೆ.

ಕೊಳ್ಳೇಗಾಲ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಸಿ.ಎಂ.ನವೀನ್ (ಮೊ. 9740349997) ಸೆಕ್ಟರ್ ಅಧಿಕಾರಿಯಾಗಿ, ಸಹಾಯಕ ಸಿಬ್ಬಂದಿಯಾಗಿ ಕೊಳ್ಳೇಗಾಲ ತಾಲೂಕು ಕಸಬಾ ಹೋಬಳಿಯ ರಾಜಸ್ವ ನಿರೀಕ್ಷಕ ರಂಗಸ್ವಾಮಿ(ಮೊ.990257 1663) ನೇಮಕವಾಗಿದ್ದಾರೆ. ಕೊಳ್ಳೇಗಾಲ ನಗರಸಭೆಯ ವಾರ್ಡ್ ಸಂಖ್ಯೆ 2, 6,7, 13, 21, 25 ಹಾಗೂ 26ರಲ್ಲಿ ಚುನಾವಣೆ ನಡೆಯಲಿದ್ದು, ಪಟ್ಟಣ ಠಾಣೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಪಿ.ಚೇತನ್(ಮೊ.94808–04 653) ಭದ್ರತೆ ಕಾರ್ಯ ನಿರ್ವಹಿಸಲಿದ್ದಾರೆ.

ಗುಂಡ್ಲುಪೇಟೆ ಕಣಿಯನಪುರ ಕಾಲೋನಿಗೆ ಜಿಪಂ ಸಿಇಓ ಭೇಟಿ
ಲಂಟಾನ ಕರಕುಶಲ ಉತ್ಪನ್ನಗಳ ವೀಕ್ಷಣೆ



ಚಾಮರಾಜನಗರ, ಅ.7– ಗುಂಡ್ಲುಪೇಟೆ ತಾಲೂಕಿನ ಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಣಿಯನಪುರ ಕಾಲೋನಿಗೆ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಭೇಟಿ ನೀಡಿ, ಲಂಟಾನದಿಂದ ತಯಾರಿಸುವ ಕರಕುಶಲ ವಸ್ತುಗಳು, ಗೃಹಪಯೋಗಿ ಉತ್ಪನ್ನಗಳನ್ನು ವೀಕ್ಷಿಸಿದರು.

ಪರಿಶಿಷ್ಟ ಪಂಗಡದ ಮಹಿಳೆಯರನ್ನು ಒಳಗೊಂಡಿರುವ ಸ್ವ–ಸಹಾಯ ಸಂಘದ ಮಹಿಳೆಯರಿಗೆ ಪ್ರಧಾನ ಮಂತ್ರಿ ವನ್–ಧನ್ ವಿಕಾಸ ಕೇಂದ್ರದಲ್ಲಿ ಸೆ.20ರಿಂದ ಎನ್‌ಆರ್‌ಎಲ್‌ಎಂ ಯೋಜನೆಯಡಿ ಹಮ್ಮಿಕೊಂಡಿರುವ ಲಂಟನಾ ಕರಕುಶಲ ವಸ್ತುಗಳು, ಗೃಹೋಪಯೋಗಿ ಉತ್ಪನ್ನಗಳ ಕುರಿತು ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ ಕುರಿತು ಮಾಹಿತಿ ಪಡೆದರು.

ಕಣಿಯನಪುರ ಕಾಲೋನಿಯ ಎನ್‌ಆರ್ ಎಲ್‌ಎಂ ಸ್ವ–ಸಹಾಯ ಸಂಘದ ಮಹಿಳೆಯರೊಂದಿಗೆ ಸಂವಾದ ನಡೆಸಿ, ಮಹಿಳೆಯರು ತಯಾರಿಸಿರುವ ಉತ್ಪನ್ನಗಳಾದ ಮೊಬೈಲ್ ಸ್ಟ್ಯಾಂಡ್, ಪೆನ್‌ಸ್ಟಾಂಡ್, ಟೀಪಾಯಿ, ಅಲಂಕಾರಿಕ ಟ್ರೇ, ಪೂಜಾಬುಟ್ಟಿ, ಪಕ್ಷಿಗಳ ಗೂಡು, ಪುಸ್ತಕಗಳ ಕಪಾಟು, ಗಿಫ್ಟ್ ಟ್ರೇ, ಹಣ್ಣಿನ ಸ್ಟ್ಯಾಂಡ್ ಹಾಗೂ ಕಸದ ಬುಟ್ಟಿಗಳ ವಿನ್ಯಾಸಕ್ಕೆ ಮನಸೋತರು. ಬಳಿಕ ಮಾತನಾಡಿದ ಅವರು, ಲಂಟನಾದಿಂದ ತಯಾರಿಸಿರುವ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇದ್ದು, ಗುಣಮಟ್ಟದ ಉತ್ಪನ್ನ ತಯಾರಿಸಿದರೆ ಉತ್ತಮ ಬೆಲೆ ಸಿಗಲಿದೆ. ಇದರಿಂದ ಕುಟುಂಬ ನಿರ್ವಹಣೆ ಹಾಗೂ ಆರ್ಥಿಕ ಸ್ವಾವಲಂಬನೆಗೆ ಸಹಾಯವಾಗುವ ಜೊತೆಗೆ ಗ್ರಾಮಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತವೆ ಎಂದು ಸಿಇಓ ಅಭಿಪ್ರಾಯಪಟ್ಟರು.

ಜಿಪಂ ಯೋಜನಾ ನಿರ್ದೇಶಕ ಪ್ರೇಮ್ ಕುಮಾರ್, ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ ಉಪನಿರ್ದೇಶಕ ರಾಜೇಂದ್ರಪ್ರಸಾದ್, ಗುಂಡ್ಲುಪೇಟೆ ತಾಪಂ ಇಓ ಶ್ರೀಕಂಠರಾಜ್ ಅರಸ್, ಪಿಡಿಓಗಳು ಇದ್ದರು.

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ನಾಮಫಲಕ ಕಡ್ಡಾಯ
ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚನೆ



ಚಾಮರಾಜನಗರ, ಅ.7–ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲೆಯ ಎಲ್ಲಾ ಸಾರ್ವಜನಿಕ ಪ್ರದೇಶಗಳಲ್ಲಿ ಧೂಮಪಾನ ನಿಷೇಧದ ನಾಮಫಲಕವನ್ನು ಕಡ್ಡಾಯವಾಗಿ ಅಳವಡಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಜಿಲ್ಲಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎಲ್ಲಾ ಸಾರ್ವಜನಿಕ ಸ್ಥಳಗಳು, ಇಂದಿರಾ ಉಪಹಾರ ಮಂದಿರಗಳು ಸೇರಿದಂತೆ ಮಲೈ ಮಹದೇಶ್ವರಬೆಟ್ಟದ ಪ್ರಾಧಿಕಾರ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ ಕೋಟ್ಪಾ ಸೆಕ್ಷನ್–4ರಂತೆ ಕನಿಷ್ಠ 60X45 ಸೆ.ಮೀ ಅಳತೆಯ ಧೂಮಪಾನ ನಿಷೇಧದ ನಾಮಫಲವನ್ನು ಅಳವಡಿಸಿ ಪ್ರದರ್ಶಿಸಬೇಕು. ಜಿಲ್ಲಾಧಿಕಾರಿ ತಾಕೀತು ಮಾಡಿದರು.

ತಂಬಾಕು, ಬೀಡಿ, ಸಿಗರೇಟ್, ಗುಟ್ಕಾ ಸೇರಿದಂತೆ ಎಲ್ಲಾ ಬಗೆಯ ತಂಬಾಕು ಬಳಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಅನುಕೂಲವಾಗುವಂತೆ ಎಲ್ಲಾ ತಾಲೂಕುಗಳಲ್ಲಿ ತಾಲೂಕು ಮಟ್ಟದ ಗುಲಾಬಿ ಆಂದೋಲನ ಕಾರ್ಯಕ್ರಮ ನಡೆಸಬೇಕು.

ಕೊಳ್ಳೇಗಾಲ ಪಟ್ಟಣದ ವಿವಿಧ ಪ್ರದೇಶ, ಗುಂಡ್ಲುಪೇಟೆ ಪಟ್ಟಣ ಸಾರ್ವಜನಿಕ ಆಸ್ಪತ್ರೆ ಹಾಗೂ ತಾಲೂಕಿನ ಕಬ್ಬಳ್ಳಿ ಗ್ರಾಮದ ಆರೋಗ್ಯ ಕೇಂದ್ರ ಆವರಣದಲ್ಲಿ ಧೂಮಪಾನ ಮಾಡುವವರು ಹೆಚ್ಚಿದ್ದು, ಕಾರ್ಯಾಚರಣೆ ನಡೆಸಿ ದಂಡ ವಿಧಿಸುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಪಂ ಉಪ ಕಾರ್ಯದರ್ಶಿ ಗುಡೂರು ಭೀಮಸೇನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ. ವಿಶ್ವೇಶ್ವರಯ್ಯ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಸುಧಾ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಾಗರಾಜು, ಆರ್‌ಸಿಹೆಚ್ ಅಧಿಕಾರಿ ಡಾ. ಮಂಜುನಾಥ್, ತಾಲೂಕು ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ್, ಇತರರು ಸಭೆಯಲ್ಲಿದ್ದರು.

ಡಾ.ಅಂಬೇಡ್ಕರ್‌ರ ನಾಗಪುರ ದೀಕ್ಷಾಭೂಮಿ ಯಾತ್ರೆಗೆ ಚಾಲನೆ



ಯಳಂದೂರು,ಅ.7–ಪಟ್ಟಣದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಏರ್ಪಡಿಸಿರುವ ಮಹಾರಾಷ್ಟ್ರದ ನಾಗಪುರ ದೀಕ್ಷಾ ಭೂಮಿ ಯಾತ್ರೆಗೆ ಡಾ.ಅಂಬೇಡ್ಕರ್ ಅನುಯಾಯಿಗಳು ತೆರಳಿದರು.

ಪ್ರವಾಸ ವಾಹನಕ್ಕೆ ತಾಲೂಕು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರ ಕೇಶವ ಮೂರ್ತಿ ಅವರು ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಯರಿಯೂರು ರಾಜಣ್ಣ, ಯಳಂದೂರು ತಾಲೂಕಿನ ವಿವಿಧ ಗ್ರಾಮಗಳಿಂದ 45 ಜನರು ಡಾ.ಬಿ.ಆರ್.ಅಂಬೇಡ್ಕರ್‌ರ ನಾಗಪುರ ದೀಕ್ಷಾಭೂಮಿ ಯಾತ್ರೆ ಕೈಗೊಂಡಿದ್ದು, ಅಂಬೇಡ್ಕರ್ ಬಳಸುತ್ತಿದ್ದ ವಸ್ತುಗಳು, ಅವರ ಲೇಖನಗಳು ಸೇರಿದಂತೆ ನಾಗಪುರದಲ್ಲಿ ನೋಡ ಬೇಕಾದ ಸ್ಥಳಗಳಾದ ಜೀರೋ ಮೈಲ್, ಸಂವಿಧಾನ ಚೌಕ, ಚೌಡರ ಸರ್ಕಲ್, ಹಿಂದುಪುರ ಬುದ್ಧವಿಹಾರ ಕೇಂದ್ರ, ನಾಗಲೋಕ ಪ್ರವಾಸಿ ಕೇಂದ್ರಗಳಿಂದ ಅಂಬೇಡ್ಕರ್ ಅವರು ನಡೆದು ಬಂದ ದಾರಿಗಳನ್ನು ಎಳೆ ಎಳೆಯಾಗಿ ತಿಳಿಯಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಕಂದಹಳ್ಳಿ ನಾರಾಯಣ್, ಮುಖಂಡರಾದ ಸುರೇಶ್ ಹೊನ್ನೂರು, ಶಾಂತರಾಜು ಕೆಸ್ತೂರು, ಅಗರ ರಾಜು, ಮಹದೇವ, ರಾಚಪ್ಪ, ಕಾಂತರಾಜು ಮಾಂಬಳ್ಳಿ, ಕುಮಾರಸ್ವಾಮಿ, ಶಿವಕುಮಾರ್, ಶಂಕರ್ ನಾಗ್, ಇತರರಿದ್ದರು.

ಹೈಕೋರ್ಟ್ ನ್ಯಾಯಮೂರ್ತಿ ಜಿ.ಬಸವರಾಜು ಅವರಿಗೆ ಸನ್ಮಾನ



ಚಾಮರಾಜನಗರ, ಅ.7–ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವ ಜಿ.ಬಸವರಾಜು ಅವರನ್ನು ನಗರದ ಜನಾರ್ಧನ ಪ್ರತಿಷ್ಠಾನದಿಂದ ಗೌರವಿಸಿ ಸನ್ಮಾನಿಸಲಾಯಿತು.

ನಗರಕ್ಕೆ ಭೇಟಿ ನೀಡಿದ್ದ ಬಸವರಾಜು ಅವರನ್ನು ಜನಾರ್ಧನ ಪ್ರತಿಷ್ಠಾನದ ಅಧ್ಯಕ್ಷ ಅನಂತಪ್ರಸಾದ್ ಅವರು, ನಗರದ ಹರಳುಕೋಟೆ ಜನಾರ್ಧನಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ಅವರಿಗೆ 'ನ್ಯಾಯಾಂಗ ಮೇರು' ಬಿರುದು, ಫಲತಾಂಬೂಲ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಬರಹಗಾರ ಎಸ್.ಲಕ್ಷ್ಮೀನರಸಿಂಹ, ಜಿ.ಬಸವರಾಜು ಅವರು ಜಿಲ್ಲೆಯ ಪ್ರಧಾನ ಜಿಲ್ಲಾ ನ್ಯಾಯಧೀಶರಾಗಿ 3 ವರ್ಷ ಅತ್ಯುತ್ತಮ ಸೇವೆ ಸಲ್ಲಿಸಿ, ನ್ಯಾಯಾಂಗದ ಘನತೆ ಎತ್ತಿ ಹಿಡಿದಿದ್ದಾರೆ ಎಂದು ಬಣ್ಣಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಇಂದೂಶೇಖರ್, ಮಂಜು, ಸತೀಶ್, ಗಿರೀಶ್, ಜಿಲ್ಲಾ ನ್ಯಾಯಾಲಯದ ಸಿಬ್ಬಂದಿ ಇದ್ದರು.

ನಾಳೆ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ

ಚಾಮರಾಜನಗರ, ಅ.7– ಜಿಲ್ಲಾಡಳಿತ, ಜಿಪಂ ಹಾಗೂ ಜಿಲ್ಲಾ ಪರಿಶಿಷ್ಟ ವರ್ಗಗಳ ಇಲಾಖೆಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಅ.9ರಂದು ಬೆಳಗ್ಗೆ 10 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸಪ್ರಸಾದ್ ಉಪ ಸ್ಥಿತಿ ವಹಿಸುವರು. ಶಾಸಕರಾದ ಆರ್.ನರೇಂದ್ರ, ಎನ್. ಮಹೇಶ್, ಸಿ.ಎಸ್.ನಿರಂಜನ್‌ಕುಮಾರ್, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು, ನಗರಸಭೆ ಅಧ್ಯಕ್ಷೆ ಸಿ.ಎಂ.ಆಶಾ ನಟರಾಜು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಚಿಕ್ಕಎಲಚೆಟ್ಟಿಯಲ್ಲಿ ಶಿವರಾತ್ರಿ ರಾಜೇಂದ್ರ ಶ್ರೀಗಳ 107ನೇ ಜಯಂತಿ



ಗುಂಡ್ಲುಪೇಟೆ,ಅ.7–ತಾಲೂಕಿನ ಚಿಕ್ಕಎಲಚೆಟ್ಟಿ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಜಿಲ್ಲಾ ಬಸವ ಕೇಂದ್ರ ಹಾಗೂ ಎನ್‌ರಿಚ್ ಬಳಗದಿಂದ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 107ನೇ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದ ಚಿಕ್ಕತುಪ್ಪೂರು ಶಿವಪೂಜಾ ಮಠಾಧ್ಯಕ್ಷ ಶ್ರೀ ಚನ್ನವೀರಸ್ವಾಮಿಗಳು, ರಾಜೇಂದ್ರ ಶ್ರೀಗಳು ಶರಣ ಸಾಹಿತ್ಯ ಪರಿಷತ್ತು ಸ್ಥಾಪಿಸಿ, ಎಲ್ಲಾ ಶರಣರಿಗೂ ವಚನ ಸಾಹಿತ್ಯ ತಿಳಿಯುವಂತೆ ಮಾಡಿದರು. ಎಲ್ಲರೂ ವೀರಶೈವ ಲಿಂಗಾಯತ ಧರ್ಮದ ಆಚಾರ–ವಿಚಾರಗಳನ್ನು ಪಾಲಿಸುವ ಮೂಲಕ ನಮ್ಮ ಮುಂದಿನ ಪೀಳಿಗೆಗೂ ಬಸವಾದಿ ಶರಣರ ತತ್ವಾದರ್ಶಗಳನ್ನು ತಿಳಿಸುವುದು ಆದ್ಯ ಕರ್ತವ್ಯ ಎಂದರು.

ಎಂಸಿಎಸ್ ಪ್ರೌಢಶಾಲೆ ಶಿಕ್ಷಕ ಹೆಚ್.ಎಂ.ಮಹದೇವಸ್ವಾಮಿ ಮಾತನಾಡಿ, ರಾಜೇಂದ್ರ ಶ್ರೀಗಳು ಕರುಣಾಮಯಿಗಳು, ನಿರ್ಜೀವಿ ವಸ್ತುಗಳ ಬಗ್ಗೆಯೂ ಕನಿಕರ ಪಡುತ್ತಿದ್ದವರು ಎಂದು ಸ್ಮರಿಸಿದರು. ಜಿಲ್ಲಾ ಬಸವ ಕೇಂದ್ರದ ಅಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ ಮಾತನಾಡಿ, ಬಸವ ತತ್ವಗಳನ್ನು, ಶರಣರ ವಚನಗಳನ್ನು ಮನೆ ಮನೆಗೆ, ಶರಣರ ಮನಸ್ಸುಗಳಿಗೆ ತಲುಪಿಸುವುದು ನಮ್ಮ ಬಸವ ಕೇಂದ್ರದ ಸದುದ್ದೇಶ ಎಂದರು.

ಅಧ್ಯಕ್ಷರು–ಪ್ರಧಾನ ಕಾರ್ಯದರ್ಶಿ ಆಯ್ಕೆ: ಇದೇ ಸಂದರ್ಭದಲ್ಲಿ ಗುಂಡ್ಲುಪೇಟೆ ತಾಲೂಕು ಬಸವ ಕೇಂದ್ರದ ಅಧ್ಯಕ್ಷರಾಗಿ ಪತ್ರಕರ್ತ ಚಂದ್ರು ಎನ್.ಲಕ್ಕೂರು ಹಾಗೂ ಪ್ರಧಾನ ಕಾರ್ಯದರ್ಶಿ ಯಾಗಿ ಬಾಚಹಳ್ಳಿ ಜಗದೀಶ್‌ರನ್ನು ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಎಂ.ವೇದಮೂರ್ತಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಬಾಚಹಳ್ಳಿ ಪಟೇಲ್ ಮಲ್ಲಪ್ಪ, ಜಿಲ್ಲಾ ನಿರ್ದೇಶಕರಾದ ದೇಪಾಪುರ ಶಿವಸ್ವಾಮಿ, ಶೋಭಾ ಸಿದ್ದರಾಜು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಪರಮೇಶ್, ತಾಲೂಕು ಬಸವ ಕೇಂದ್ರ ಅಧ್ಯಕ್ಷರಾದ ಮಂಜು ಹೊನ್ನೂರು, ಗುರುಸ್ವಾಮಿ ಧನಗೆರೆ, ವೃಷಬೇಂದ್ರ ಕಣ್ಣೂರು, ಶರಣರಾದ ದುಗ್ಗಟ್ಟಿ ರಾಜೇಶ್, ತಾಪಂ ಮಾಜಿ ಸದಸ್ಯ ಡಿ.ಪಿ.ಪ್ರಕಾಶ್, ಸಂತೇಮರಳ್ಳಿಯ ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಮಹದೇವಪ್ರಭು ಇತರರಿದ್ದರು.

ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಅ.7–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ತಾಲೂಕಿನ ಚಂದಕವಾಡಿ ಭಾಗದ ಹಿರಿಕೆರೆ ಎನ್‌ಜೆವೈ ಹಾಗೂ ನವೋದಯ ಫೀಡರ್‌ನಲ್ಲಿ ತುರ್ತು ಕಾಮಗಾರಿ ನಿಮಿತ್ತ ಅ.8ರಂದು ಬೆಳಗ್ಗೆ 9ರಿಂದ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಹಿರಿಕೆರೆ ಎನ್‌ಜೆವೈ ಫೀಡರ್‌ನ ವ್ಯಾಪ್ತಿಯ ಕಾಗಲವಾಡಿ, ಹುರುಳಿನಂಜನಪುರ, ಸರಗೂರು, ಬಸಪ್ಪನಪಾಳ್ಯ, ಚಂದಕವಾಡಿ, ಹೆಬ್ಬಸೂರು, ಹಂಚಿತಾಳಪುರ, ಕೊಕ್ಕನಹಳ್ಳಿ, ಮಾದೇಶ್ವರ ಕಲೋನಿ, ಅಂಬ್ಯನಪುರ, ಕೋಟೇತಿಟ್ಟು, ಹಿತ್ತಲಗುಡ್ಡ, ಮಲ್ಲದೇವನಹಳ್ಳಿ ಹಾಗೂ ನವೋದಯ ಫೀಡರ್‌ನ ವ್ಯಾಪ್ತಿಯ ನಾಗವಳ್ಳಿ, ನಲ್ಲೂರು, ಹೊಂಡರಬಾಳು, ಕಾಳಿಕಾಂಭಕಾಲೋನಿ, ಕುಂಟಗುಡಿ ಕಾಲೋನಿ, ಮಾದೇಗೌಡನ ಕೊಪ್ಪಲು ಮತ್ತು ಕುಂಭೇಶ್ವರ ಕಾಲೋನಿ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮೈಸೂರು ಮಿತ್ರ ಶನಿವಾರ 8 ಅಕ್ಟೋಬರ್ 2022

ಆರ್‌ಬಿಐನಿಂದ ಪ್ರಾಯೋಗಿಕವಾಗಿ ಡಿಜಿಟಲ್ ಕರೆನ್ಸಿ ಬಿಡುಗಡೆ

ನವದೆಹಲಿ: ಶೀಘ್ರದಲ್ಲೇ ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿಯು (CBDC) ಇ–ರೂಪಾಯಿಯನ್ನು (Digital Rupee) ಪ್ರಾಯೋಗಿಕ ಬಳಕೆ ಪ್ರಾರಂಭಿಸಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಶುಕ್ರವಾರ ತಿಳಿಸಿದೆ. ಆರ್‌ಬಿಐ ಮತ್ತು ಸಿಬಿಡಿಸಿ ಈಗಾಗಲೇ ಡಿಜಿಟಲ್ ಕರೆನ್ಸಿ (Digital Currency) ಕುರಿತಾಗಿ ಹಲವು ಪ್ರಾಯೋಗಿಕ ಕೆಲಸಗಳಿಗೆ ಕೈ ಹಾಕಿದ್ದು, ಕರೆನ್ಸಿಗಳ ಬಗ್ಗೆ ಮತ್ತು ನಿರ್ದಿಷ್ಟವಾಗಿ ಡಿಜಿಟಲ್ ರೂಪಾಯಿಯ ಯೋಜಿತ ವೈಶಿಷ್ಟ್ಯಗಳ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲು ಈಗಿನಿಂದಲೇ ಪ್ರಯತ್ನಿಸುತ್ತಿದೆ. ನಿರ್ದಿಷ್ಟ ಬಳಕೆಗಾಗಿ ಸಿಬಿಡಿಸಿ ಇ–ರೂಪಾಯಿಯ ಪ್ರಾಯೋಗಿಕ ಬಳಕೆಯನ್ನು ಪ್ರಾರಂಭಿಸಲಿದೆ ಎಂದು ಆರ್‌ಬಿಐ ತಿಳಿಸಿದೆ. ಪ್ರಾಯೋಗಿಕ ಯೋಜನೆಗಳ ವ್ಯಾಪ್ತಿ ವಿಸ್ತರಿಸಿದಂತೆ, ಕಾಲಕಾಲಕ್ಕೆ ಡಿಜಿಟಲ್ ರೂಪಾಯಿಯ ನಿರ್ದಿಷ್ಟ ವೈಶಿಷ್ಟ್ಯಗಳು ಮತ್ತು ಪ್ರಯೋಜನಗಳ ಕುರಿತು ಆರ್‌ಬಿಐ ಮಾಹಿತಿ ಪಡೆದುಕೊಂಡು ಇ–ರೂಪಾಯಿ ಕುರಿತಾಗಿ ದೇಶದಲ್ಲಿ ಮತ್ತಷ್ಟು ಕಾರ್ಯರೂಪಗಳೊಂದಿಗೆ ಜಾರಿಗೆ ತರಲು ಚಿಂತಿಸಿದೆ.

ಒಂದನೇ ಪುಟದಿಂದ

ಮೀಸಲಾತಿ ಹೆಚ್ಚಳ

ಪಂಗಡಗಳ ಮೀಸಲಾತಿಯನ್ನು ಶೇಕಡ 3 ರಿಂದ 7ಕ್ಕೆ ಹೆಚ್ಚಿಸಲು ಸಭೆಯಲ್ಲಿ ಒಮ್ಮತದ ನಿರ್ಧಾರ ಮಾಡಲಾಗಿದೆ. ಎರಡು ಸಮುದಾಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ನಾಗಮೋಹನ್‌ದಾಸ್ ಹಾಗೂ ನ್ಯಾಯಮೂರ್ತಿ ಶುಭಾಷ್ ಆಡಿ ನೇತೃತ್ವದ ಸಮಿತಿಗಳ ಪೂರ್ಣ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳಲಾಗಿದೆ ಎಂದರು. ಪರಿಶಿಷ್ಟರಿಗೆ ಮೀಸಲಾತಿ ಹೆಚ್ಚಳ ಮಾಡಿರುವ ನಿರ್ಧಾರವನ್ನು ನಾಳೆ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆದು ವಿಧಾನಮಂಡಲದ ಡಿಸೆಂಬರ್ ಅಧಿವೇಶನದಲ್ಲಿ ಮಂಡಿಸಿ, ಅಲ್ಲಿಯೂ ಒಮ್ಮತದ ನಿರ್ಣಯವನ್ನು ಕೈಗೊಂಡು ಕೇಂದ್ರಕ್ಕೆ ಶಿಫಾರಸ್ಸು ಮಾಡುವುದಾಗಿ ತಿಳಿಸಿದರು.

ಮೀಸಲಾತಿ ಪ್ರಮಾಣ ಶೇಕಡ 50ರಷ್ಟನ್ನು ಮೀರಬಾರದು ಎಂದು ಸುಪ್ರೀಂಕೋರ್ಟ್ ಹೇಳಿದೆ. ಸಂವಿಧಾನದ ಪರಿಚ್ಛೇದ 9ರ ವ್ಯಾಪ್ತಿಗೆ ಕರ್ನಾಟಕದ ಮೀಸಲಾತಿ ವಿಚಾರವನ್ನು ಸೇರಿಸಿದರೆ ನ್ಯಾಯಾಲಯದ ಪರಿಶೀಲನಾ ವ್ಯಾಪ್ತಿಯಿಂದ ಹೊರಗಿಡಲು ಸಾಧ್ಯ. ಅದಕ್ಕೆ ಪೂರಕವಾಗಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಇದರ ಜೊತೆಗೆ ಇನ್ನೂ ಹತ್ತು ಹಲವಾರು ಬೇಡಿಕೆಗಳಿವೆ. ಮೀಸಲಾತಿಯ ಬಗ್ಗೆ ನಾವೆಲ್ಲರೂ ಚಿಂತನೆ ಮಾಡುವ ಅವಶ್ಯಕತೆ ಇದೆ. ಎಲ್ಲಾ ಸಮಾಜದಲ್ಲಿ, ಎಲ್ಲಾ ಜನಾಂಗಗಳಲ್ಲಿಯೂ ಆಕಾಂಕ್ಷೆಗಳು ಹೆಚ್ಚಾಗಿವೆ. ಎಸ್‌ಸಿ/ಎಸ್‌ಟಿ ಸಮುದಾಯದೊಳಗೆ ಕೆಲವರಿಗೆ ನ್ಯಾಯ ದೊರೆತಿಲ್ಲ ಎನ್ನುವ ಒಂದು ಕೂಗಿದೆ. ಅದರ ಬಗ್ಗೆಯೂ ಕೂಡ ಈಗಾಗಲೇ ಆಯೋಗಗಳು ತೀರ್ಮಾನ ನೀಡಿರುವ ಹಿನ್ನೆಲೆಯಲ್ಲಿ ಅದನ್ನೂ ಕೂಡ ಸಮಗ್ರವಾಗಿ ಅಧ್ಯಯನ ಮಾಡಿ ಎಲ್ಲರ ಮುಂದಿಟ್ಟು ಒಳ್ಳೆಯ ತೀರ್ಮಾನ ಮಾಡಲು ಸರ್ಕಾರ ಮುಂದಾಗಲಿದೆ. ಮುಂಬರುವ ದಿನಗಳಲ್ಲಿ ಸರ್ಕಾರ ಆ ನಿಟ್ಟಿನಲ್ಲಿಯೂ ಎಸ್‌ಸಿ/ಎಸ್‌ಟಿ ಒಳಮೀಸಲಾತಿಗೂ ಕೂಡ ಎಲ್ಲರೊಂದಿಗೆ ಚರ್ಚಿಸಿ, ಯಾವುದೇ ಸಮಾಜಕ್ಕೆ ಅನ್ಯಾಯವಾಗದಂತೆ, ಕೈಬಿಡದಂತೆ ಕಾನೂನು ತಜ್ಞರೊಂದಿಗೆ ಸಮಾಲೋಚಿಸಿ ಎಲ್ಲಾ ಪಕ್ಷಗಳೊಂದಿಗೆ ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು ಎಂದರು. ಇದಲ್ಲದೆ ಹಿಂದುಳಿದ ವರ್ಗಗಳ ಮೀಸಲಾತಿ ಬಗ್ಗೆ ನಡೆಯುತ್ತಿರುವ ಚರ್ಚೆ ಬಗ್ಗೆಯೂ ವರದಿಗಳನ್ನು ಆಧರಿಸಿ ಆಯಾ ಸಮಾಜಕ್ಕೆ ನ್ಯಾಯ ದೊರಕಿಸಲು ಸರ್ಕಾರ ಮುಂದಾಗಲಿದೆ ಎಂದರು.

ಈಗಿರುವ ಯಾವುದೇ ಮೀಸಲಾತಿ ಕಡಿಮೆಯಾಗುವುದಿಲ್ಲ. ರಾಜ್ಯದಲ್ಲಿ ಶೇ.50ರಷ್ಟು ಮೀಸಲಾತಿ ಇದ್ದು, ಎಸ್‌ಸಿ, ಎಸ್‌ಟಿ, ಪ್ರವರ್ಗ 1, 2ಎ, 3ಬಿ ಯಾರಿಗೂ ಮೀಸಲಾತಿ ಪ್ರಮಾಣ ಕಡಿಮೆಯಾಗುವುದಿಲ್ಲ. ಇದು ಶೇ.50ಕ್ಕಿಂತಲೂ ಜಾಸ್ತಿ ಇರುವವರಿಗೆ ನೀಡುವ ಮೀಸಲಾತಿ. ಅದೇ ನ್ಯಾ. ನಾಗಮೋಹನ್ ದಾಸ್ ಸಮಿತಿ ಹೇಳಿದೆ. ಅದನ್ನೇ ನಾವು ಮಾಡುತ್ತಿದ್ದೇವೆ ಎಂದರು. ಆರ್ಥಿಕವಾಗಿ ಹಿಂದುಳಿದವರಿಗೆ ನೀಡಿರುವ ಶೇ.10ರಷ್ಟು ಮೀಸಲಾತಿಯನ್ನು ಕಾನೂನಿನ ಪ್ರಕಾರ ಮೀಸಲಾತಿ ಇಲ್ಲದಿರುವ, ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ನೀಡಲು ಈಗಾಗಲೇ ತೀರ್ಮಾನ ಮಾಡಲಾಗಿದೆ. ಆದರೆ ಅದು ಸರ್ವೋಚ್ಚ ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸಲಾಗಿದ್ದು, ತೀರ್ಪನ್ನು ಕಾಯ್ದಿರಿಸಲಾಗಿದೆ. ಅದಾದ ಕೂಡಲೇ ಆದೇಶದನ್ವಯ ಅನುಷ್ಠಾನ ಮಾಡಲಾಗುವುದು. ಯಾರಿಗೂ ಅನ್ಯಾಯವಾಗದಂತೆ ಮೀಸಲಾತಿ ನೀಡುವುದೇ ನಿಜವಾದ ನ್ಯಾಯ ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ ಎಂದರು. ತಮಿಳುನಾಡು ಸರ್ಕಾರ 1994 ರಲ್ಲಿ ಮೀಸಲಾತಿ ಹೆಚ್ಚಳ ಮಾಡಿ ಅದನ್ನು ಸಂವಿಧಾನದ ಅನುಸೂಚಿ 9ರಲ್ಲಿ ಬಂದ ನಂತರ 2007 ರಲ್ಲಿ ಮತ್ತೊಂದು ತೀರ್ಪು ಬಂದಿದೆ. ಅನುಸೂಚಿ 9 ಮೂಲಭೂತ ಹಕ್ಕುಗಳಿಗೆ ಚ್ಯುತಿಯಾದರೆ ಅದಕ್ಕೆ ನ್ಯಾಯಾಂಗದ ವಿನಾಯತಿ ನೀಡಬೇಕೆಂದಿದೆ. ಪಶ್ಚಿಮ ಬಂಗಾಲದಲ್ಲಿ 1950ರಲ್ಲಿ ಭೂ ಸುಧಾರಣಾ ಕಾಯ್ದೆ ಬಂದಾಗ ಸರ್ವೋಚ್ಚ ನ್ಯಾಯಾಲಯ ಕಾಯ್ದೆಯನ್ನು ರದ್ದು ಮಾಡಿತು. ಆ ಸಂದರ್ಭದಲ್ಲಿ ಭೂ ಸುಧಾರಣಾ ಕಾಯ್ದೆ ಮತ್ತು ರೈತರಿಗೆ ನ್ಯಾಯ ಕೊಡಿಸುವ ಸಲುವಾಗಿ ಮೂಲಭೂತ ಹಕ್ಕು ಎಂದು ಪರಿಗಣಿಸಿ ಅನುಸೂಚಿ 9 ಅನ್ನು ತರಲಾಯಿತು. ಕೇವಲ ಮೀಸಲಾತಿಗೆ ಮಾತ್ರವಲ್ಲ ಹಲವಾರು ವಿಚಾರಗಳು ಇದರಲ್ಲಿ ಬರುತ್ತದೆ. 1994 ರಿಂದ ಈವರೆಗೆ ವಿನಾಯಿತಿ ದೊರೆತಿದೆ. ಈಗಲೂ ಕೂಡ ಅದರ ಬಗ್ಗೆ ತೀರ್ಪು ಹೊರ ಬಂದಿಲ್ಲ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಇವುಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಈ ವಿಚಾರದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ರಾಜ್ಯದಲ್ಲಿ ಸಾಮರಸ್ಯ ಮೂಡಬೇಕೆಂಬ ಕಾರಣದಿಂದ ಹಾಗೂ ಕಾನೂನು ಮತ್ತು ಸಂವಿಧಾನಾತ್ಮಕವಾದ ವಿಚಾರ ಇದಾಗಿರುವುದರಿಂದ ಸರ್ವ ಪಕ್ಷ ಸಭೆಯಲ್ಲಿ ಚರ್ಚೆ ಮಾಡಿ, ಸರ್ವಸಮ್ಮತದಿಂದ ತೀರ್ಮಾನ ಮಾಡಲಾಗಿದೆ ಎಂದರು. ಚಳಿಗಾಲದ ಅಧಿವೇಶನದಲ್ಲಿ ಸರ್ಕಾರದ ನಿರ್ಧಾರವನ್ನು ಕಾನೂನಿನ ಮೂಲಕ ಅನುಷ್ಠಾನಗೊಳಿಸಿ, ಕೇಂದ್ರಕ್ಕೆ ಶಿಫಾರಸ್ಸು ಮಾಡಿ, ಎರಡೂ ಸಮುದಾಯಗಳ ಅಭಿವೃದ್ಧಿಗಾಗಿ ಮೀಸಲಾತಿ ಹೆಚ್ಚಳ ಮಾಡುವಂತೆ ಕೋರಲಾಗುವುದು ಎಂದು ಮುಖ್ಯಮಂತ್ರಿಯವರು ತಿಳಿಸಿದರು. ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸುವ ಕುರಿತು ಬೊಮ್ಮಾಯಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಸಚಿವರಾದ ಗೋವಿಂದ ಕಾರಜೋಳ, ಆರ್. ಅಶೋಕ, ಜೆ.ಸಿ.ಮಾಧುಸ್ವಾಮಿ, ಬಿ.ಶ್ರೀರಾಮುಲು, ಕೋಟ ಶ್ರೀನಿವಾಸ ಪೂಜಾರಿ, ಎಸ್.ಅಂಗಾರ, ಆನಂದಸಿಂಗ್, ಸರ್ಕಾರದ ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವಡಗಿ ಹಾಗೂ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

> **“ರಾಜ್ಯ ಸರ್ಕಾರ ಶುಕ್ರವಾರ ಸರ್ವಪಕ್ಷಗಳ ಸಭೆ ಕರೆದು ಎಸ್ಸಿ–ಎಸ್ಟಿ ಸಮುದಾಯದ ಮೀಸಲಾತಿ ಹೆಚ್ಚಳ ಮಾಡುತ್ತೇವೆ ಎಂದು ಹೇಳಿರುವುದು ಸ್ವಾಗತಾರ್ಹ. ಇದು ಬರೀ ಹೇಳಿಕೆಗೆ ಸೀಮಿತವಾಗಬಾರದು. ಈ ತೀರ್ಮಾನ ಅ.9ರೊಳಗೆ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಮೈಸೂರಿನ ಕಲಾಮಂದಿರ ದಲ್ಲಿ ನಡೆಯುವ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಸರ್ಕಾರದ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸುತ್ತೇವೆ.** –ಲೋಕೇಶ್ ಪಿಯಾ, ಸದಸ್ಯರು, ಮೈಸೂರು ನಗರ ಪಾಲಿಕೆ

> **“ಎಸ್ಸಿ–ಎಸ್ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಕುರಿತು ರಾಜ್ಯ ಸರ್ಕಾರ ತೀರ್ಮಾನ ಸ್ವಾಗತಾರ್ಹ. ಆದರೆ, ಮೀಸಲಾತಿ ಹೆಚ್ಚಳದ ನಂತರ ಮುಂದಿನ ಕಾನೂನಿನ ತೊಡಕುಗಳ ಕುರಿತು ರಾಜ್ಯ ಸರ್ಕಾರ ಗಮನದಲ್ಲಿಟ್ಟುಕೊಂಡು ನಿರ್ಧಾರ ತೆಗೆದುಕೊಳ್ಳಬೇಕು. ಈ ವಿಷಯದ ಕುರಿತು ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ನಿರ್ದೇಶನವೇ ಅಂತಿಮ. ಆದರೆ, ರಾಜ್ಯ ಸರ್ಕಾರ ಆಚರಣೆ ಮಾಡುವ ವಾಲ್ಮೀಕಿ ಜಯಂತಿಯನ್ನು ಬಹಿಷ್ಕರಿಸುವುದಿಲ್ಲ.** – ಪಡುವಾರಹಳ್ಳಿ ರಾಮಕೃಷ್ಣವಾಲ್ಮೀಕಿ ಸಮುದಾಯ ಮುಖಂಡರು.

ಈಗ ‘ಕುವೆಂಪು ಎಕ್ಸ್‌ಪ್ರೆಸ್’

ಪತ್ರ ಬರೆದು ತಿಳಿಸಿದ್ದಾರೆ. ಹಾಗಾಗಿ ಇನ್ನು ಮುಂದೆ ಈ ಎರಡೂ ರೈಲುಗಳು ಬದಲಾದ ಹೆಸರಿನಲ್ಲೇ ಸಂಚರಿಸಲಿವೆ. ಮೈಸೂರು ಬೆಂಗಳೂರು ನಡುವೆ ಸಂಚರಿಸುವ ಟಿಪ್ಪು ಎಕ್ಸ್‌ಪ್ರೆಸ್(ರೈಲು ಸಂಖ್ಯೆ 12613/12614) ಇನ್ನು ಮುಂದೆ ‘ಒಡೆಯರ್ ಎಕ್ಸ್‌ಪ್ರೆಸ್’ ಎಂದು ಹಾಗೂ ತಾಳಗುಪ್ಪ–ಮೈಸೂರು ನಡುವೆ ಸಂಚರಿಸುವ(16221/16222) ರೈಲಿಗೆ ‘ಕುವೆಂಪು ಎಕ್ಸ್‌ಪ್ರೆಸ್’ ಎಂದೂ ನಾಮಕರಣ ಮಾಡಿರುವುದಾಗಿ ಕೇಂದ್ರ ರೈಲ್ವೆ ಸಚಿವಾಲಯದ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಪ್ರತಾಪ್ ಸಿಂಹ ಪ್ರಯತ್ನ: ಮೈಸೂರು ಸಂಪರ್ಕಿಸುವ ರೈಲುಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಲು ಕಾರಣರಾದ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರು ಒಡೆಯರ್ ಹಾಗೂ ಕುವೆಂಪು ಅವರ ಹೆಸರು ಎಕ್ಸ್‌ಪ್ರೆಸ್ ರೈಲುಗಳಿಗೆ ನಾಮಕರಣ ಮಾಡುವಲ್ಲೂ ಕಾರಣೀಭೂತರಾಗಿದ್ದಾರೆ. ಈ ಸಂಬಂಧ ಕಳೆದ ಜುಲೈನಲ್ಲಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದ್ದರು. ಮೈಸೂರು ಪ್ರಾಂತ್ಯಕ್ಕೆ ಅಪಾರ ಕೊಡುಗೆ ನೀಡಿರುವ ಒಡೆಯರ್ ಹಾಗೂ ನಾಡಿನ ಹೆಮ್ಮೆಯಾಗಿರುವ ರಾಷ್ಟ್ರಕವಿ ಕುವೆಂಪು ಅವರನ್ನು ಸ್ಮರಿಸಿಕೊಳ್ಳುವ ನಿಟ್ಟಿನಲ್ಲಿ ತಮ್ಮ ಪ್ರಸ್ತಾವನೆಯನ್ನು ಅನುಮೋದಿಸಬೇಕೆಂದು ಒತ್ತಾಯಿಸಿದ್ದರು.

ಸಂಸದರ ಸಂತಸದ ನುಡಿ: ಈ ಸಂಬಂಧ ‘ಮೈಸೂರು ಮಿತ್ರ’ನಲ್ಲಿ ಸಂತಸ ವ್ಯಕ್ತಪಡಿಸಿದ ಸಂಸದ ಪ್ರತಾಪ್ ಸಿಂಹ, ಮೈಸೂರು ಒಡೆಯರ್ ಕುಟುಂಬದ ಕೊಡುಗೆಗಳಿಂದ ಉಪಕೃತವಾಗಿದೆ. ಇಲ್ಲಿ ಏನೇನು ಅಭಿವೃದ್ಧಿ ಪ್ರತೀಕಗಳಿವೆಯೋ ಅವೆಲ್ಲವೂ ಯದುವಂಶದ ದೊರೆಗಳು ಅರ್ಥಾತ್ ಒಡೆಯರ್ ಕುಟುಂಬದವರು ನೀಡಿರುವುದು. ಹಾಗಾಗಿ ಮೈಸೂರು ಎಂದಾಕ್ಷಣ ಒಡೆಯರ್ ನಾಮಸ್ಮರಣೆಯಾಗಬೇಕೇ ಹೊರತು ಮತ್ಯಾರ ಹೆಸರಲ್ಲ. ಹಾಗಾಗಿ ಮೈಸೂರು ವಿಮಾನ ನಿಲ್ದಾಣಕ್ಕೆ ‘ನಾಲ್ವಡಿ ಕೃಷ್ಣರಾಜ ಒಡೆಯರ್’, ರೈಲ್ವೆ ನಿಲ್ದಾಣಕ್ಕೆ ‘ಜಯಚಾಮರಾಜೇಂದ್ರ ಒಡೆಯರ್’ ಎಂದು ನಾಮಕರಣ ಮಾಡಬೇಕು ಎಂಬುದೂ ನನ್ನ ಮನವಿ ಆಗಿದೆ. ಮೈಸೂರು–ಬೆಂಗಳೂರು ನಡುವೆ ಸಂಚರಿಸುವ ಎಕ್ಸ್‌ಪ್ರೆಸ್ ರೈಲಿಗೆ ‘ಒಡೆಯರ್’ ನಾಮಕರಣ ಮಾಡಿರುವುದು ಹಾಗೂ ತಾಳಗುಪ್ಪ–ಮೈಸೂರು ರೈಲಿಗೆ ರಾಷ್ಟ್ರಕವಿ ಕುವೆಂಪು ಅವರ ಹೆಸರಿಟ್ಟಿರುವುದು ಖುಷಿಯ ಸಂಗತಿ ಎಂದು ನುಡಿದರು.


> **“ಒಡೆಯರ್ ಅವರಿಗೆ ಗೌರವ ಕೊಡಬೇಕು. ಅದಕ್ಕಾಗಿ ಬೇರೆ ರೈಲಿಗೆ ಒಡೆಯರ್ ಹೆಸರು ನಾಮಕರಣ ಮಾಡಬಹುದಾಗಿತ್ತು. ಹಾಲಿ ಸಂಚರಿಸುತ್ತಿದ್ದ ರೈಲಿಗೆ ಟಿಪ್ಪು ಹೆಸರನ್ನು ತೆಗೆದು ಒಡೆಯರ್ ಹೆಸರು ಮರುನಾಮಕರಣ ಮಾಡಿರುವುದು ತಪ್ಪು. ಬಿಜೆಪಿಯವರಿಗೆ ದ್ವೇಷದ ರಾಜಕಾರಣ ಮಾಡುವುದೇ ಕೆಲಸವಾಗಿದೆ.** – ಸಿದ್ದರಾಮಯ್ಯ, ವಿಪಕ್ಷ ನಾಯಕ

ಮೈಸೂರು ನಗರ ಜಗಮಗಿಸುತ್ತಿರಲೂ... ರಿಂಗ್ ರಸ್ತೆಯಲ್ಲಿ ನೀಗದೂ ಕಗ್ಗತ್ತಲು...

ಮುಡಾ ಅನುದಾನ ನೀಡಿದರೂ ತ್ವರಿತವಾಗಿ ಕಾರ್ಯಗತಗೊಳಿಸುವಲ್ಲಿ ಸಂಬಂಧಿಸಿದ ಅಧಿಕಾರಿ ವರ್ಗ ವಿಫಲ; ಇದಕ್ಕೇನು ಅವಸರ ಎಂಬ ಧೋರಣೆ ನಮ್ಮ ಅಧಿಕಾರಿಗಳದ್ದು!



ವಿದ್ಯುದ್ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಮೈಸೂರು ನಗರ.



ದೀಪಗಳಿಲ್ಲದೇ ಕಗ್ಗತ್ತಲಿಂದ ಕೂಡಿದ ರಿಂಗ್ ರಸ್ತೆ.

ಎಸ್.ಟಿ. ರವಿಕುಮಾರ್

ಮೈಸೂರು, ಅ. 7– ದಸರಾ ಮಹೋತ್ಸವ ಅದ್ಧೂರಿಯಾಗಿ ನಡೆದಿದ್ದು, ಸಾಂಸ್ಕೃತಿಕ ನಗರಿ ಮೈಸೂರು ವಿದ್ಯುದ್ದೀಪಾಲಂಕಾರಗಳಿಂದ ಜಗಮಗಿಸುತ್ತಿದೆಯಾದರೂ ಮೈಸೂರಿನ ಸುರಕ್ಷಿತ ಮಾರ್ಗ ‘ರಿಂಗ್ ರಸ್ತೆ’ ಮಾತ್ರ ಕಗ್ಗತ್ತಲಿಂದ ಕೂಡಿದೆ.

ಈ ಬಾರಿಯ ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದ ಸರ್ಕಾರ ಹಾಗೂ ಮೈಸೂರು ಜಿಲ್ಲಾಡಳಿತವು ವಿಶೇಷ ದೀಪಾಲಂಕಾರಗಳಿಂದ ಅಲಂಕರಿಸಿ ದೇಶ–ವಿದೇಶಗಳಿಂದ ಲಕ್ಷಾಂತರ ಪ್ರವಾಸಿಗರನ್ನು ಮೈಸೂರಿನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಆದರೆ, ಪ್ರತೀ ದಿನ ಸಾವಿರಾರು ವಾಹನಗಳು ಸಂಚರಿಸುವ ಹೊರ ವರ್ತುಲ (ರಿಂಗ್ ರಸ್ತೆ) ರಸ್ತೆಯ ದೀಪಗಳು ಕೆಟ್ಟಿದ್ದರೂ, ಅತ್ತ ತಿರುಗಿಯೂ ನೋಡದಿರುವುದರಿಂದ 42.5 ಕಿ.ಮೀ. ಉದ್ದದ ಈ ಸುರಕ್ಷತ ರಸ್ತೆಯಲ್ಲಿ ರಾತ್ರಿ ವೇಳೆ ಕಗ್ಗತ್ತಲು ಆವರಿಸಿದೆ.

ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (National highway Authority Of India)ದ ಅಧೀನಕ್ಕೆ ಒಳಪಟ್ಟಿರುವ ಮೈಸೂರು ರಿಂಗ್ ರಸ್ತೆಯಲ್ಲಿ ಇತ್ತೀಚೆಗಷ್ಟೇ ಗುಂಡಿಗಳನ್ನು ಮುಚ್ಚಲಾಯಿತಾದರೂ, ಇಕ್ಕೆಲಗಳ ಸರ್ವಿಸ್ ರಸ್ತೆ ಮಾತ್ರ ಹಲವೆಡೆ ಅದ್ವಾನವಾಗಿದೆ. ಗಿಡಗಂಟಿಗಳು ಬೆಳೆದುಕೊಂಡು ಕಟ್ಟಡದ ತ್ಯಾಜ್ಯವನ್ನು ಎರಡು ಕಡೆ ಸುರಿಯಲಾಗುತ್ತಿದೆ. ರಿಂಗ್ ರಸ್ತೆ ಸ್ವಚ್ಛತಾ ಅಭಿಯಾನ ಮಾಡಿದ ಮೈಸೂರು ಮಹಾನಗರ ಪಾಲಿಕೆ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಒಮ್ಮೆ ಹೊರವರ್ತುಲ ರಸ್ತೆ ಬದಿ ಸುರಿದಿದ್ದ ರಾಶಿ ರಾಶಿ ಕಟ್ಟಡ ತ್ಯಾಜ್ಯವನ್ನು ತೆರವುಗೊಳಿಸಿದರಾದರೂ, ನಂತರ ಅಲ್ಲಿ ಯಥಾಸ್ಥಿತಿಯಾಗಿದೆ.

ಅದು ಒಂದೆಡೆಯಾದರೆ, ದೀಪಗಳಿಲ್ಲದೆ ಇಡೀ ರಿಂಗ್ ರಸ್ತೆಯು ರಾತ್ರಿ ವೇಳೆ ಕಗ್ಗತ್ತಲಿನಿಂದ ಕೂಡಿದೆ. ಕಳೆದ ವರ್ಷ ದಸರಾ ವೇಳೆ ಕೆಟ್ಟುನಿಂತ ಕಂಬಗಳಿಗೆ ಬಲ್ಬ್‌ಗಳನ್ನು ಅಳವಡಿಸಿ ಬೆಳಗುವಂತೆ ಮಾಡಲಾಗಿತ್ತು. ದಸರಾ ಮುಗಿಯುತ್ತಿದ್ದಂತೆಯೇ ಒಂದೇ ತಿಂಗಳಲ್ಲಿ ಎಲ್ಲಾ ದೀಪಗಳು ಮತ್ತೆ ಕೆಟ್ಟುಹೋದವು.

ಪರಿಣಾಮ ಅಪಘಾತಗಳು, ಸುಲಿಗೆ, ದರೋಡೆ, ಮದ್ಯಪಾನ, ಜೂಜು, ವೇಶ್ಯಾವಾಟಿಕೆಯಂತಹ ಅಕ್ರಮ ಚಟುವಟಿಕೆಗಳು, ಅಪರಾಧ ಪ್ರಕರಣಗಳಿಗೆ ಕಗ್ಗತ್ತಲ ರಿಂಗ್ ರಸ್ತೆ ಹೇಳಿ ಮಾಡಿಸಿದ ಮಾರ್ಗವಾಯಿತು. ಹೆಬ್ಬಾಳು, ಹಿನಕಲ್, ಬೋಗಾದಿ ಜಂಕ್ಷನ್ ಸಮೀಪ, ಕನಕದಾಸನಗರ, ಹೆಚ್.ಡಿ. ಕೋಟೆ ರಸ್ತೆ ಜಂಕ್ಷನ್, ಬನ್ನೂರು ರಸ್ತೆಯ ಜಂಕ್ಷನ್ ದೇವೇಗೌಡ ಸರ್ಕಲ್, ಮಹದೇವಪುರ ರಸ್ತೆ–ರಿಂಗ್ ರೋಡ್ ಜಂಕ್ಷನ್ ಬಳಿಯಂತೂ ಕುಡುಕರ ಹಾವಳಿ, ಯುವಕ–ಯುವತಿಯರನ್ನು ಬೆದರಿಸಿ ಸುಲಿಗೆ ಮಾಡುವ ಕೃತ್ಯಗಳು ಅವ್ಯಾಹತವಾಗಿ ನಡೆಯುತ್ತಿವೆ.

ಈ ಬಗ್ಗೆ ‘ಮೈಸೂರು ಮಿತ್ರ’ ಬೆಳಕು ಚೆಲ್ಲಿ ರಿಂಗ್ ರಸ್ತೆ ಬೀದಿ ದೀಪಗಳನ್ನು ಸರಿಪಡಿಸುವಂತೆ ಗಮನ ಸೆಳೆದ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಹಾಗೂ ಸಂಸದ ಪ್ರತಾಪ್ ಸಿಂಹ, ಜಿಲ್ಲಾಡಳಿತದೊಂದಿಗೆ ಚರ್ಚಿಸಿ, ರಿಂಗ್ ರಸ್ತೆ ದೀಪಗಳನ್ನು ಸರಿಪಡಿಸಿ, ದಸರಾರೊಳಗಾಗಿ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಿ ದೀಪಗಳು ಬೆಳಗುವಂತೆ ಮಾಡಬೇಕೆಂದು ತಾಕೀತು ಮಾಡಿದ್ದರು.



> **“ರಿಂಗ್ ರಸ್ತೆ ದೀಪಗಳಿಗೆ ಕೇಬಲ್ ಅಳವಡಿಸಲು ಕಾಮಗಾರಿ ಆರಂಭವಾಗಿದ್ದು ಈಗಾಗಲೇ ಸುಮಾರು 30 ಕಿ.ಮೀ. ಗುಂಡಿ ತೆಗೆದು ಕೇಬಲ್ ಅಳವಡಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ದಸರಾ ಕೆಲಸದ ಒತ್ತಡದಿಂದಾಗಿ ಪರಿಶೀಲಿಸಲು ಸಾಧ್ಯವಾಗಿರಲಿಲ್ಲ. ಶನಿವಾರವೇ ಹೋಗಿ ಕಾಮಗಾರಿ ಪ್ರಗತಿ ಪರಿಶೀಲಿಸಿ ಎಲ್ಲೆಲ್ಲಿ ಕೆಲಸ ಆಗಿದೆ ಎಂಬ ಮಾಹಿತಿ ಕೊಡುತ್ತೇನೆ. 42.5 ಕಿ.ಮೀ. ಉದ್ದದ ರಿಂಗ್ ರಸ್ತೆಯ ಎಲ್ಲಾ ಕಂಬಗಳಲ್ಲೂ ಎಲ್‌ಇಡಿ ಬಲ್ಬ್‌ಗಳು ಬೆಳಗಲು ವ್ಯವಸ್ಥೆ ಮಾಡುತ್ತಿದ್ದು, ಶೀಘ್ರ ಚಾಲನೆ ನೀಡಲಾಗುವುದು.** - ಜಿ.ಲಕ್ಷ್ಮೀಕಾಂತ ರೆಡ್ಡಿ, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ



> **“ರಿಂಗ್ ರಸ್ತೆಯಲ್ಲಿ ದೀಪ ಅಳವಡಿಸಲು ಮುಡಾದಿಂದ ಅನುದಾನ ಕೊಡಬೇಕೆಂದು ತೀರ್ಮಾನವಾದಂತೆ ನಾವು 3 ತಿಂಗಳ ಹಿಂದೆಯೇ 6 ಕೋಟಿ ರೂ. ಮೊದಲ ಕಂತಿನ ಹಣವನ್ನು ಮೈಸೂರು ನಗರ ಪಾಲಿಕೆಗೆ ನೀಡಿದ್ದೇವೆ. ಅವರು ಕೇಳಿದರೆ ಸೋಮವಾರ(ಅ.10)ವೇ ಎರಡನೇ ಕಂತಿನ ಹಣವನ್ನು ಬಿಡುಗಡೆ ಮಾಡಲು ಸಿದ್ಧರಿದ್ದೇವೆ. ಯೋಜನೆಯನ್ನು ಕಾರ್ಯಗತ ಮಾಡುವುದು ಪಾಲಿಕೆ ಕೆಲಸ. ಈಗಾಗಲೇ ಕಾಮಗಾರಿ ಆರಂಭಿಸಲಾಗಿತ್ತು ಪ್ರಗತಿ ಯಾವ ಹಂತದಲ್ಲಿದೆ ಎಂಬುದನ್ನು ತಿಳಿಯಲು ನಮ್ಮ ಎಲೆಕ್ಟ್ರಿಕಲ್ ವಿಭಾಗದ ಇಂಜಿನಿಯರ್‌ಗಳನ್ನು ಶನಿವಾರವೇ ಕಳುಹಿಸಿ ವರದಿ ತರಿಸಿಕೊಳ್ಳುತ್ತೇನೆ.** - ಜಿ.ಟಿ.ದಿನೇಶ್ ಕುಮಾರ್, ಆಯುಕ್ತರು, ಮುಡಾ

ಇದಕ್ಕೆ ಮುಡಾದಿಂದ 12 ಕೋಟಿ ಅನುದಾನ ನೀಡುವುದು, ಪಾಲಿಕೆಯು ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸಿ ಎಲ್ಲಾ ಕಂಬಗಳಿಗೂ ಎಲ್‌ಇಡಿ ಬಲ್ಬ್ ಅಳವಡಿಸಿ, ನಿರ್ವಹಿಸುವ ಜೊತೆಗೆ ಪ್ರತೀ ತಿಂಗಳ ವಿದ್ಯುತ್ ಬಿಲ್ ಪಾವತಿಸುವುದೆಂದು ತೀರ್ಮಾನಿಸಲಾಗಿತ್ತು. ಈಗಾಗಲೇ ಮೊದಲ ಕಂತಿನಲ್ಲಿ ಮುಡಾ 6 ಕೋಟಿ ರೂ. ಅನುದಾನವನ್ನು ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸಲು ಪಾಲಿಕೆಗೆ ಬಿಡುಗಡೆ ಮಾಡಿದೆ.

ಹಣ ಬಿಡುಗಡೆಯಾಗುತ್ತಿದ್ದಂತೆಯೇ ಪಾಲಿಕೆಯ ವಿದ್ಯುತ್ ಶಾಖೆ ಇಂಜಿನಿಯರ್‌ಗಳು ಟೆಂಡರ್ ಮೂಲಕ ಬೆಂಗಳೂರು ಮೂಲದ ಎಲೆಕ್ಟ್ರಿಕಲ್ ಗುತ್ತಿಗೆದಾರನಿಗೆ ರಿಂಗ್ ರಸ್ತೆಯ ವಿದ್ಯುತ್ ಕಂಬಗಳಿಗೆ ಕೇಬಲ್ ಅಳವಡಿಸಲು ಗುತ್ತಿಗೆ ನೀಡಿ ವರ್ಕ್ ಆರ್ಡರ್ ನೀಡಿತ್ತು. ದಸರಾ 15 ದಿನ ಇದೆ ಎನ್ನುವಾಗ ಕಾಮಗಾರಿ ಆರಂಭಿಸಿದ ಗುತ್ತಿಗೆದಾರ, ಮಣಿಪಾಲ್ ಆಸ್ಪತ್ರೆಯಿಂದ ಮಹದೇವಪುರ ರಸ್ತೆ ಜಂಕ್ಷನ್‌ವರೆಗೆ ಕೇಬಲ್ ಅಳವಡಿಕೆಗೆ ಉದ್ದಕ್ಕೂ ಗುಂಡಿ ತೆಗೆದಿದ್ದರಾದರೂ, ಮುಂದಕ್ಕೆ ಕೆಲಸವನ್ನೇ ಮಾಡಲಿಲ್ಲ.

ಜೆಸಿಬಿಯಿಂದ 42.5 ಕಿ.ಮೀ. ಉದ್ದದ ರಿಂಗ್ ರಸ್ತೆಯಲ್ಲಿ ಗುಂಡಿ ತೆಗೆದು ಕೇಬಲ್ ಅಳವಡಿಸಿ ವೈಯರ್ ಅನ್ನು ಕಂಬದ ಬಲ್ಬ್‌ವರೆಗೂ ಅಳವಡಿಸುವುದು ಗುತ್ತಿಗೆದಾರನ ಜವಾಬ್ದಾರಿ. ನಂತರ ಮುಡಾ 2ನೇ ಕಂತಿನ ಹಣ ಬಿಡುಗಡೆ ಮಾಡಿದಾಗ ಮೈಸೂರು ಮಹಾನಗರ ಪಾಲಿಕೆಯು ಎಲ್‌ಇಡಿ ಬಲ್ಬ್ ಅಳವಡಿಸಿ, ಸ್ವಿಚ್ ಬೋರ್ಡ್, ಕಂಟ್ರೋಲಿಂಗ್ ಯೂನಿಟ್ ಅಳವಡಿಸುವ ಮೂಲಕ ನಿರ್ವಹಣೆ ಮಾಡಲು ಟೆಂಡರ್ ಕರೆದು ಕಾಮಗಾರಿ ಒಪ್ಪಿಸಬೇಕು.

2022ರ ದಸರಾ ಮಹೋತ್ಸವದೊಳಗೇ ರಿಂಗ್ ರಸ್ತೆಯಲ್ಲಿನ ದೀಪಗಳು ಬೆಳಗುವಂತೆ ಮಾಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿದರೂ, ಅಧಿಕಾರಿಗಳು ಅದನ್ನು ಗಂಭೀರವಾಗಿ ಪರಿಗಣಿಸದಿರುವುದು, ಇಡೀ ಮೈಸೂರು ನಗರ ವಿದ್ಯುದ್ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದರೂ, ರಿಂಗ್ ರಸ್ತೆ ಮಾತ್ರ ಕಗ್ಗತ್ತಲಿನಲ್ಲಿರುವಂತಾಗಿದೆ.

ಈ ಮೊದಲು ರಿಂಗ್ ರಸ್ತೆಗೆ ಅಳವಡಿಸಿದ್ದ ದೀಪಗಳ ಕೇಬಲ್ ಅನ್ನು ಇಲಿ–ಹೆಗ್ಗಣಗಳು ತುಂಡರಿಸಿದ್ದರೆ, ಬಹುತೇಕ ಕಡೆಗಳಲ್ಲಿ ಖದೀಮರು ತುಂಡರಿಸಿ ಕೊಂಡೊಯ್ದಿರುವುದರಿಂದ ವರ್ಷಗಟ್ಟಲೆ ಹೊರವರ್ತುಲ ರಸ್ತೆ ದೀಪಗಳು ಬೆಳಗಲಿಲ್ಲ. ಪರಿಣಾಮ ಕುಡುಕರು, ಕಳ್ಳಕಾಕರು, ಅನೈತಿಕ ಚಟುವಟಿಕೆ ನಡೆಸುವವರಿಗೆ ವರದಾನವಾಗಿರುವುದಂತೂ ನಿಜ.

ಅ.11ರಿಂದ 3 ದಿನ ಕಿಸಾನ್ ಸ್ವರಾಜ್ ಸಮ್ಮೇಳನ

● ಬೀಜ ಉತ್ಸವ, ಸಾವಯವ ಪ್ರದರ್ಶನ, ವಿಚಾರ ಸಂಕಿರಣ, ಚರ್ಚೆ, ಉಪನ್ಯಾಸ ● 1500ಕ್ಕೂ ಹೆಚ್ಚು ರೈತರು ಭಾಗಿ



ಮೈಸೂರು, ಅ.7(ಆರ್‌ಕೆಬಿ)– ಮೈಸೂರಿನ ಮುಕ್ತ ವಿಶ್ವ ವಿದ್ಯಾನಿಲಯದ ಆವರಣದಲ್ಲಿ ಅ.11ರಿಂದ ಮೂರು ದಿನಗಳ ಕಿಸಾನ್ ಸ್ವರಾಜ್ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕ ಕೃಷ್ಣಪ್ರಸಾದ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಸ್ಥಿರ ಮತ್ತು ಸಮಗ್ರ ಕೃಷಿ ಮೈತ್ರಿಕೂಟ ಹಾಗೂ ರಾಜ್ಯ ಮುಕ್ತ ವಿವಿ ಸಂಯುಕ್ತ ಆಶ್ರಯದಲ್ಲಿ ನಡೆಯುವ ಸಮ್ಮೇಳನದ ಸಂದರ್ಭದಲ್ಲಿ ಬೀಜ ಉತ್ಸವ, ಸಾವಯವ ಪ್ರದರ್ಶನ, ವಿಚಾರ ಸಂಕಿರಣ, ಚರ್ಚೆ ಹಾಗೂ ಉಪನ್ಯಾಸಗಳು ನಡೆಯಲಿವೆ. ಪರಿಸರ ದಿಗ್ಗಜರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ದೇಶದ 15 ಕ್ಕೂ ಹೆಚ್ಚು ರಾಜ್ಯಗಳಿಂದ 1500 ಕ್ಕೂ ಹೆಚ್ಚು ರೈತರು ಈ ಮಹಾ ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ. ಸದ್ಯದಲ್ಲಿ ಕೃಷಿ ವಲಯ ಹಾಗೂ ರೈತರು ಎದುರಿಸುತ್ತಿರುವ ಸಮಸ್ಯೆ ಮತ್ತು ಅಲ್ಲಲ್ಲಿ ಕಂಡು ಕೊಂಡಿರುವ ಸುಸ್ಥಿರ ಪರಿಹಾರೋಪಾಯ ಮಾರ್ಗಗಳನ್ನು ಒಂದೇ ವೇದಿಕೆಗೆ ತರುವುದು ಸಮ್ಮೇಳನದ ಉದ್ದೇಶವಾಗಿದೆ ಎಂದು ತಿಳಿಸಿದರು.

ಹಲವು ಕಾರಣಗಳಿಂದಾಗಿ ಜಾಗತಿಕ ತಾಪಮಾನ ಏರಿಕೆಯಾಗುತ್ತಿದೆ. ಭೂ ಮಂಡಲ ಬಿಸಿಯಾಗುತ್ತಿದ್ದು, ಎಲ್ಲ ದೇಶಗಳೂ ಈ ಬಿಕ್ಕಟ್ಟಿನ ಬಗ್ಗೆ ಚಿಂತನೆ ನಡೆಸಲು ಮುಂದಾಗಿವೆ. ಹೀಗಾಗಿ ಪರಿಸರ ಸ್ನೇಹಿ ಕೃಷಿ, ನಿಸರ್ಗದ ಸಂರಕ್ಷಣೆಯಂಥ ಕ್ರಮಗಳನ್ನು ಅನುಸರಿಸುವ ಮೂಲಕ ಜಾಗತಿಕ ತಾಪಮಾನ ಬಿಕ್ಕಟ್ಟಿಗೆ ಪರಿಹಾರ ಕಲ್ಪಿಸಬೇಕಾಗಿದೆ. ಇಂಥ ಹತ್ತು ಹಲವರು ವಿಧಾನಗಳನ್ನು ಕಿಸಾನ್ ಸ್ವರಾಜ್ ಸಮ್ಮೇಳನ ಪ್ರತಿಪಾದಿಸಲಿದೆ ಎಂದು ಹೇಳಿದರು.

ವೇತನದಾರರು 3,500 ರೂ., ರೈತರು, ಪತ್ರಕರ್ತರು, ಸ್ವಯಂ ಸೇವಾ ಪ್ರತಿನಿಧಿಗಳು 2,500 ರೂ., ಪೂರ್ಣಾವಧಿ ರೈತರು 1,500 ರೂ., ಮಹಿಳಾ ರೈತರು 800 ರೂ., ಶುಲ್ಕ ನೀಡಿ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಮೊ– 9900537434 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕವಿತಾ, ಸಂತೋಷ್ ಕೌಲಗಿ, ಕವಿತಾ ಶ್ರೀನಿವಾಸನ್, ಡಾ. ರಾಮಕೃಷ್ಣಪ್ಪ ಉಪಸ್ಥಿತರಿದ್ದರು.

ಅ.15ರಂದು ಕವಿಗೋಷ್ಠಿ, ಅನುಭವ ಹಂಚಿಕೆ ಕಾರ್ಯಕ್ರಮ



ಮೈಸೂರು, ಅ.7(ಆರ್‌ಕೆಬಿ)– ಅಭಿರುಚಿ ಬಳಗ, ಆಸಕ್ತಿ ಪ್ರಕಾಶನ, ಎನ್.ವಿ. ರಮೇಶ್ ಕಲಾ ಬಳಗ ಹಾಗೂ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಮೈಸೂರು ವಿಭಾಗದ ವತಿಯಿಂದ ಅ.15ರಂದು ಮಧ್ಯಾಹ್ನ 2 ಗಂಟೆಗೆ ಮೈಸೂರಿನ ಕೃಷ್ಣಮೂರ್ತಿಪುರಂ ನಮನ ಕಲಾ ಮಂಟಪ ವೇದಿಕೆಯಲ್ಲಿ ಕವಿಗೋಷ್ಠಿ ಹಾಗೂ ಅನುಭವ ಹಂಚಿಕೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಬಳಗದ ಅಧ್ಯಕ್ಷ ಎನ್.ವಿ.ರಮೇಶ್ ತಿಳಿಸಿದರು.


ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಿ.ನರಸೀಪುರದ ಬೊಮ್ಮನಹಳ್ಳಿ ಶ್ರೀ ಸಿದ್ದರಹಳ್ಳಿ ಪಾರಮಾರ್ಥ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಮೈಸೂರು ವಿಭಾಗದ ಅಧ್ಯಕ್ಷರಾಗಿ ಎನ್.ವಿ.ರಮೇಶ್ ಅಧಿಕಾರ ಸ್ವೀಕರಿಸಲಿದ್ದಾರೆ. ಅತಿಥಿಗಳಾಗಿ ಡಾ.ಎಂ.ಖಾಸೀಂ ಮಲ್ಲಿಗೆ ಮಡುವು, ಹುಬ್ಬಳ್ಳಿ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ, ಪದಾಧಿಕಾರಿಗಳಾದ ವೀರನಗೌಡ ಮರೀಗೌಡ, ಡಾ.ಗಂಗಯ್ಯ ಕುಲಕರ್ಣಿ ಇನ್ನಿತರರು ಭಾಗವಹಿಸುವರು ಎಂದರು.

ಮಧ್ಯಾಹ್ನ 3.30 ಗಂಟೆಗೆ ಕವಿಗೋಷ್ಠಿ ಹಾಗೂ ಅನುಭವ ಹಂಚಿಕೆ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಮತಾ ಸುಧೀಂದ್ರ, ಕೃಷ್ಣಮೂರ್ತಿ ಕುಲಕರ್ಣಿ, ಗಂಗಯ್ಯ ಕುಲಕರ್ಣಿ, ವಿರೂಪಾಕ್ಷ ಲಮಾಣಿ ಉಪಸ್ಥಿತರಿದ್ದರು.

‘ನಾಡಪ್ರಭು ಕೆಂಪೇಗೌಡ, ಒಕ್ಕಲಿಗ ರಾಜಮನೆತನದ ಇತಿಹಾಸ’ ಕುರಿತು

ಇಂದು, ನಾಳೆ ರಾಜ್ಯಮಟ್ಟದ ವಿಚಾರ ಸಂಕಿರಣ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಉದ್ಘಾಟನೆ



ಮೈಸೂರು, ಅ.7(ಆರ್‌ಕೆಬಿ)– ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾವತಿಯಿಂದ ಅ. 8 ಮತ್ತು 9ರಂದು ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ರಾಣಿ ಬಹದ್ದೂರ್ ಸಭಾಂಗಣದಲ್ಲಿ ‘ನಾಡಪ್ರಭು ಕೆಂಪೇಗೌಡ ಮತ್ತು ಒಕ್ಕಲಿಗ ರಾಜಮನೆತನದ ಇತಿಹಾಸ’ ಕುರಿತ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದ ಗೌರವ ಸಲಹೆಗಾರ ಡಾ.ಬಿ.ಎನ್.ರವೀಶ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.8ರಂದು ಬೆಳಗ್ಗೆ 10.30 ಗಂಟೆಗೆ ಆದಿಚುಂಚನಗಿರಿ ಮಹಾಸಂಸ್ಥಾನ ಮಠಾಧಿಪತಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸುವರು. ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಕೆ.ಆರ್.ನಗರ ಕ್ಷೇತ್ರದ ಶಾಸಕ ಸಾ.ರಾ. ಮಹೇಶ್ ಅತಿಥಿಗಳಾಗಿ ಭಾಗವಹಿಸುವರು. ಒಕ್ಕಲಿಗರ ಮಹಾಸಭಾದ ಗೌರವಾಧ್ಯಕ್ಷರು ಆದ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅಧ್ಯಕ್ಷತೆ ವಹಿಸುವರು ಎಂದರು.

ಮಧ್ಯಾಹ್ನ 1 ಗಂಟೆಗೆ ‘ನಾಡಪ್ರಭು ಕೆಂಪೇಗೌಡರ ಹಿನ್ನೆಲೆ ಮತ್ತು ಬೆಳವಣಿಗೆ’, ‘ಶಾಸನಗಳ ಹಿನ್ನಲೆಯಲ್ಲಿ ಯಲಹಂಕ ನಾಡಪ್ರಭುಗಳು’, ‘ಯಲಹಂಕ ನಾಡಪ್ರಭುಗಳ ಕಲೆ ಮತ್ತು ನಗರ ನಿರ್ಮಾಣ’ ಕುರಿತ ವಿಚಾರ ಗೋಷ್ಠಿ ನಡೆಯಲಿವೆ ಎಂದು ತಿಳಿಸಿದರು.

ಅ.9ರಂದು ಬೆಳಗ್ಗೆ 9.30ಕ್ಕೆ, ‘ಗಂಗ–ಚಾಲುಕ್ಯ– ರಾಷ್ಟ್ರಕೂಟರ ಸಮಕಾಲೀನ ಸಂಬಂಧಗಳು’, ‘ಭಾರತದಲ್ಲಿ ಒಕ್ಕಲಿಗ ರಾಜಮನೆತನಗಳ ಇತಿಹಾಸ’, ‘ಗಂಗರ ಕಲೆ ಮತ್ತು ವಾಸ್ತುಶಿಲ್ಪದ ಕೊಡುಗೆ’, ‘ಗಂಗರ ಇತಿಹಾಸ’ ಕುರಿತ ವಿಚಾರಗೋಷ್ಠಿಗಳು ನಡೆಯಲಿವೆ. ಸಂಜೆ 3.45ಕ್ಕೆ ಶಿರಾ ಸ್ಫಟಿಕಪುರಿ ಮಹಾಸಂಸ್ಥಾನ ಮಠಾಧಿಪತಿ ಶ್ರೀ ನಂಜಾವಧೂತ ಮಹಾಸ್ವಾಮೀಜಿ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ. ಕೆಂಗೇರಿ ವಿಶ್ವ ಒಕ್ಕಲಿಗರ ಮಠಾಧ್ಯಕ್ಷ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ, ಮಾಜಿ ಸಚಿವ ಸಿ.ಪಿ.ಯೋಗೇಶ್ವರ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ಇನ್ನಿತರರು ಅತಿಥಿಗಳಾಗಿ ಭಾಗವಹಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಮಹಾಸಭಾದ ರಾಜ್ಯಾಧ್ಯಕ್ಷ ಎನ್.ಬೆಟ್ಟೇಗೌಡ, ಕಾನೂನು ಸಲಹೆಗಾರ ಎಂ.ಎನ್.ಚಂದ್ರಶೇಖರ್, ನಿರ್ದೇಶಕ ಹೆಚ್.ರವಿಕುಮಾರ್ ಉಪಸ್ಥಿತರಿದ್ದರು.

ಮೈಸೂರಿನ ಗುಜರಿ ಬಳಿ ಇರಿದು ಯುವಕನ ಹತ್ಯೆ

ಮೈಸೂರು, ಅ.7(ಆರ್‌ಕೆ)– ಕ್ಷುಲ್ಲಕ ಕಾರಣಕ್ಕೆ ಇರಿದು ಯುವಕನ ಬರ್ಬರವಾಗಿ ಹತ್ಯೆ ಮಾಡಿದ ಘಟನೆ ಮೈಸೂರಿನ ಲಷ್ಕರ್ ಮೊಹಲ್ಲಾದ ಗುಜರಿ ಬಳಿ ಕಳೆದ ರಾತ್ರಿ ಸಂಭವಿಸಿದೆ

ಮೈಸೂರಿನ ಶಾಂತಿನಗರ ನಿವಾಸಿ ಸದಾಕತ್(28) ಕೊಲೆಯಾದ ಯುವಕ. ಆಟೋರಿಕ್ಷಾಗಳಿಗೆ ರೆಗ್ಸಿನ್ ಕವರ್ ಹಾಕುವ ವೃತ್ತಿ ಮೂಲಕ ಜೀವನ ಸಾಗಿಸುತ್ತಿದ್ದ ಆತನನ್ನು ನಿನ್ನೆ ರಾತ್ರಿ ಫೋನ್ ಮಾಡಿ ಕರೆಸಿಕೊಂಡ ಸ್ನೇಹಿತ ಹನೀಫ್, ಇತರರೊಂದಿಗೆ ಸೇರಿ ಚಾಕುವಿನಿಂದ ಇರಿದು ಕೊಲೆಗೈದು ಪರಾರಿಯಾಗಿದ್ದಾನೆ ಎಂದು ಹೇಳಲಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್ ಹಾಗೂ ಸಿಬ್ಬಂದಿ ರಕ್ತಸ್ರಾವದಿಂದ ಒದ್ದಾಡುತ್ತಿದ್ದ ಸದಾಕತ್‌ನನ್ನು ಕೆ.ಆರ್. ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರಾದರೂ, ಆತ ಬದುಕುಳಿಯಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡ ಲಷ್ಕರ್ ಠಾಣೆ ಪೊಲೀಸರು ಇಂದು ಬೆಳಗ್ಗೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಿದರು. ಕೊಲೆಗೈದು ಪರಾರಿಯಾಗಿರುವ ಆರೋಪಿಗಳ ಪತ್ತೆಗೆ ತನಿಖಾ ತಂಡ ರಚಿಸಲಾಗಿದ್ದು, ಸಿಸಿ ಕ್ಯಾಮರಾ ಫುಟೇಜ್ ಹಾಗೂ ಸಿಡಿಆರ್ ಸುಳಿವಿನ ಜಾಡು ಹಿಡಿದು ಶೋಧ ಕಾರ್ಯ ಆರಂಭವಾಗಿದೆ.

ಹಣಕಾಸು ವಿಚಾರದಲ್ಲಿ ಹನೀಫ್ ಎಂಬಾತ ಇತರ ಮೂವರು ಯುವಕರೊಂದಿಗೆ ಸೇರಿ ಸದಾಕತ್‌ನನ್ನು ಹತ್ಯೆಗೈದಿದ್ದಾನೆ ಎಂದು ಮೇಲ್ನೋಟಕ್ಕೆ ಕಂಡು ಬಂದಿದೆಯಾದರೂ ತನಿಖೆಯಿಂದ ನಿಜ ಸಂಗತಿ ಬಯಲಾಗಬೇಕಾಗಿದೆ.

ವಸ್ತು ಪ್ರದರ್ಶನದಲ್ಲಿ ಮೂಲ ಸೌಕರ್ಯ ಕೊರತೆ: ಪ್ರವಾಸಿಗರ ಪರದಾಟ

● ಕುಡಿಯಲು ನೀರಿರಲಿ, ಶೌಚಾಲಯದಲ್ಲೂ ನೀರಿಲ್ಲ ● ನಿಷೇಧಿತ ಪ್ಲಾಸ್ಟಿಕ್ ವ್ಯಾಪಕ ಬಳಕೆ





ಮೈಸೂರು, ಅ.7(ಜಿಎ)– ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್, ಫುಟ್ ಕೋರ್ಟ್ ಸೇರಿದಂತೆ ಯಾವ ಮಳಿಗೆಗಳ ಬಳಿ ನೋಡಿದರೂ ಜನ ಜಂಗುಳಿ. ಆದರೆ, ಪ್ರವಾಸಿಗರು ಮೂಲ ಸೌಕರ್ಯಗಳ ಕೊರತೆಯಿಂದ ಪರದಾಡುತ್ತಿದ್ದಾರೆ.

ಮೈಸೂರಿಗೆ ಆಗಮಿಸಿರುವ ಪ್ರವಾಸಿಗರು ಅರಮನೆ, ಮೃಗಾಲಯ, ಚಾಮುಂಡಿ ಬೆಟ್ಟ, ಜಗನ್ಮೋಹನ ಅರಮನೆ ವೀಕ್ಷಿಸಿದ ನಂತರ ಸಂಜೆ ದಸರಾ ವಸ್ತು ಪ್ರದರ್ಶನಕ್ಕೆ ಲಗ್ಗೆ ಇಡುತ್ತಿದ್ದು, ಸಂಜೆ ಐದು ಗಂಟೆಯ ನಂತರ ವಸ್ತುಪ್ರದರ್ಶನ ಆವರಣ ಜನರಿಂದ ತುಂಬಿ ತುಳುಕುತ್ತಿದೆ.

ಕಳೆದ ಸೆ.26ರಂದು ಉದ್ಘಾಟನೆಗೊಂಡ ದಸರಾ ವಸ್ತು ಪ್ರದರ್ಶನವು ಅ.3ರ ವರೆಗೂ ಜನರಿಲ್ಲದೆ ಮಂಕಾಗಿತ್ತು. ಆದರೆ, ಅ4 ರಿಂದ ಪ್ರತಿ ನಿತ್ಯವೂ 50 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡುತ್ತಿದ್ದು, ಸೆ.6ರಂದು ಅಂದಾಜು 75 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದಾರೆ. ನಿತ್ಯವೂ ಸಾವಿರಾರು ಮಂದಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಟಿಕೆಟ್ ನೀಡುವ ಸರ್ವರ್ ಕೂಡ ವಿಫಲವಾಗಿದ್ದು, ಇದರಿಂದ ಈವರೆಗೂ ಕನಿಷ್ಠ ಎಷ್ಟು ಮಂದಿ ಭೇಟಿ ನೀಡಿದ್ದಾರೆಂಬ ಮಾಹಿತಿ ನೀಡಲು ಸಾಧ್ಯವಾಗುತ್ತಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ.

ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನಲ್ಲಿ ಆಯೋಜಿಸಿದ್ದ ಯುವ ದಸರಾ, ಯುವಸಂಭ್ರಮ, ಆಹಾರ ಮೇಳ, ಮಹಿಳಾ ಮತ್ತು ಮಕ್ಕಳ ದಸರಾ, ರೈತ ದಸರಾ, ಕ್ರೀಡಾ ದಸರಾ, ಕುಸ್ತಿ, ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿದಂತೆ ಅನೇಕ ಮನರಂಜನಾ ಕಾರ್ಯಕ್ರಮಗಳು ಅ.5ರ ಜಂಬೂಸವಾರಿಯೊಂದಿಗೆ ಅಂತ್ಯಗೊಂಡಿತು.

ನಂತರ ಪ್ರವಾಸಿಗರು ಬೆಳಗಿನಿಂದ ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ಕಾರಂಜಿ ಕೆರೆ, ಕೆಆರ್‌ಎಸ್ ಸೇರಿದಂತೆ ನಗರದ ಪ್ರಮುಖ ಪ್ರವಾಸಿತಾಣಗಳಿಗೆ ಭೇಟಿ ನೀಡುತ್ತಿದ್ದು, ಸಂಜೆಯಾಗುತ್ತಿದ್ದಂತೆ ಅರಮನೆ ಮತ್ತು ನಗರದಾದ್ಯಂತ ಅಳ ವಡಿಸಿರುವ ದೀಪಾಲಂಕಾರ ನೋಡಿದ ನಂತರ ನೇರವಾಗಿ ವಸ್ತುಪ್ರದರ್ಶನಕ್ಕೆ ಲಗ್ಗೆ ಇಡುತ್ತಿದ್ದು, ಎತ್ತ ನೋಡಿದರು ಜನರೇ ಕಾಣುತ್ತಿದ್ದಾರೆ.

ನೆಟ್‌ವರ್ಕ್ ಸಮಸ್ಯೆ : ವಸ್ತು ಪ್ರದರ್ಶನದ ಆವರಣಕ್ಕೆ ಕಾಲಿಡುತ್ತಿದ್ದಂತೆ ಎಲರ ಮೊಬೈಲ್‌ನಲ್ಲಿ ನೆಟ್‌ವರ್ಕ್ ಮಾಯಗುತ್ತಿದ್ದು, ಇದರಿಂದ ಕರೆ ಮಾಡಲು ಪರದಾಡುವ ಸ್ಥಿತಿ ಇದೆ. ಒಂದು ಕರೆ ಮಾಡಲು ಸಾಧ್ಯವಾಗುತ್ತಿಲ್ಲ. ಕರೆ ಮಾಡಬೇಕು ಎಂದರೆ ವಸ್ತು ಪ್ರದರ್ಶನದ ಆವರಣದಿಂದ ಹೊರಗೆ ಬರಬೇಕಾಗಿದೆ ಎಂದು ಪ್ರವಾಸಿಗರೊಬ್ಬರು 'ಮೈಸೂರು ಮಿತ್ರ'ನ ಬಳಿ ದೂರಿದರು.

ನೀರಿಲ್ಲ : ನಿತ್ಯವೂ ಸಾವಿರಾರು ಮಂದಿ ಭೇಟಿ ನೀಡುವ ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾದ ವಸ್ತುಪ್ರದರ್ಶನ ಆವರಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯಗಳಲ್ಲಿಯೂ ನೀರಿನ ಸರಬರಾಜು ಇಲ್ಲದಿರುವುದು ಮತ್ತೊಂದು ಸಮಸ್ಯೆಯಾಗಿದೆ. ವಸ್ತುಪ್ರದರ್ಶನ ಆರಂಭಕ್ಕೂ ಮುನ್ನ 8 ಕಡೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯಗಳು ಸುಸ್ಥಿತಿಯಲ್ಲಿವೆ ಎಂದು ಅಧಿಕಾರಿಗಳು ತಿಳಿಸಿದ್ದರು. ಆದರೆ, ಒಳಗೆ ಬಂದು ನೋಡಿದರೆ, ಯಾವುದೇ ಸೂಕ್ತ ವ್ಯವಸ್ಥೆ ಇಲ್ಲದಂತಿದೆ.

ತೆರೆದ ಚರಂಡಿಗಳು : ಎಲ್ಲಾ ವಯಸಿನವರು ವಸ್ತು ಪ್ರದರ್ಶನಕ್ಕೆ ಭೇಟಿ ನೀಡುತ್ತಿದ್ದು, ಆವರಣದಲ್ಲಿರುವ ಅನೇಕ ಚರಂಡಿಗಳನ್ನು ಮುಚ್ಚದೆ ತೆರೆದಿವೆ. ಇದರ ಪರಿಣಾಮ ಇಂದು ಸಂಜೆ ಒಬ್ಬ ವೃದ್ಧರು ಬಿದ್ದು ಅವರ ಕಾಲಿಗೆ ಪೆಟ್ಟಾಗಿದ್ದು, ಸ್ಥಳದಲ್ಲಿಯೇ ಪ್ರಥಮ ಚಿಕಿತ್ಸಾ ಮಾಡಲು ಘಟಕವು ಇರಲಿಲ್ಲ. ಇದರಿಂದ ಅವರು ಕುಪಿತಗೊಂಡರು ನಂತರ ಅವರನ್ನು ಪೊಲೀಸರು ಸಂತೈಸಿ ಕಳುಹಿಸಿದ ಘಟನೆ ಕಂಡು ಬಂತು.

ಪ್ಲಾಸ್ಟಿಕ್ ಬಳಕೆ : ವಸ್ತುಪದರ್ಶನದ ಬಹುತೇಕ ಮಳಿಗೆಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಕವರ್‌ಗಳನ್ನು ಬಳಸುತ್ತಿದ್ದು, ಇದರ ಬಗ್ಗೆಯೂ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕು ಎಂದು ಪ್ರವಾಸಿಗರು ದೂರಿದರು.

ತುತೂರಿ ಕಿರಿಕಿರಿ : ಕಳೆದ ಬಾರಿ ದಸರಾ ಮಹೋತ್ಸವದ ಸಂದರ್ಭದಲ್ಲಿ ಸಾರ್ವಜನಿಕರಿಗೆ ಬಾರೀ ಕಿರಿಕಿರಿಯುಂಟು ಮಾಡುತ್ತಿದ್ದ ತುತೂರಿಯನ್ನು ಪೊಲೀಸ್ ಇಲಾಖೆ ನಿಷೇಧಿಸಿತ್ತು ಆದರೆ, ಈ ಬಾರಿಯೂ ಕರ್ಕಷ ಶಬ್ಧ ಮಾಡುವ ತುತೂರಿ ವಸ್ತುಪ್ರದರ್ಶನದ ಆವರಣದಲ್ಲಿ ಮಾರಾಟವಾಗುತ್ತಿದ್ದು, ಪ್ರವಾಸಿಗರು ಕಿರಿ ಕಿರಿ ಅನುಭವಿಸುತ್ತಿದ್ದಾರೆ.

> ವಸ್ತು ಪ್ರದರ್ಶನಕ್ಕೆ ಅ.5ರ ನಂತರ 50 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡುತ್ತಿದ್ದು, ಟಿಕೆಟ್ ನೀಡುವ ಸರ್ವರ್ ಕೂಡ ತಾಂತ್ರಿಕ ಸಮಸ್ಯೆಗೆ ಒಳಗಾಗಿದೆ. ಇದರಿಂದ ಈವರೆಗೂ ಎಷ್ಟು ಮಂದಿ ವಸ್ತು ಪ್ರದರ್ಶನಕ್ಕೆ ಭೇಟಿ ನೀಡಿದ್ದಾರೆ ಎಂದು ಮಾಹಿತಿ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.
> ವಸ್ತು ಪ್ರದರ್ಶನದ ಸಮಸ್ಯೆಗಳ ಕುರಿತು ಪ್ರತಿಕ್ರಿಯಿಸಿದ ಅವರು, ವಸ್ತುಪ್ರದರ್ಶನದ ಆವರಣದಲ್ಲಿ ಯಾವುದೇ ಜಾಮರ್ ಅಳವಡಿಸಿಲ್ಲ. ಏಕಕಾಲದಲ್ಲಿ ಸಾವಿರಾರು ಮಂದಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ನೆಟ್‌ವರ್ಕ್ ಸಮಸ್ಯೆ ಆಗುತ್ತಿದ್ದು, ಸಂಬಂಧ ಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿಲಾಗಿದೆ ಪ್ರತ್ಯೇಕ ಟವರ್ ಅಳವಡಿಸುವ ಚಿಂತನೆ ಇದೆ. ಶೌಚಾಲಯಗಳಲ್ಲಿ ನೆನ್ನೆವರೆಗೂ ನೀರಿನ ಸಮಸ್ಯೆ ಇತ್ತು. ಆದರೆ, ಇಂದು ಆ ಸಮಸ್ಯೆಯನ್ನು ಬಗೆಹರಿಸಲಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಎರಡು ವೇದಿಕೆಗಳು ಸಿದ್ಧವಿದ್ದು, ಸಾಂಸ್ಕೃತಿಕ ಕಾರ್ಯಕ್ರಮಗಳ ಪಟ್ಟಿಯನ್ನು ಸಮಿತಿಯವರು ಸಿದ್ಧ ಮಾಡುತ್ತಿದಾರೆ. ಅ.15ರ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾಗಲಿದೆ ಎಂದು ತಿಳಿಸಿದರು.

ಸಿಎಂ ಬೊಮ್ಮಾಯಿ ಪುತ್ರನಿಗೆ ಅಂತರಾಷ್ಟ್ರೀಯ ಪ್ರಶಸ್ತಿಯ ಗರಿ



ಬೆಂಗಳೂರು: ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಪುತ್ರ ಭರತ್ ಬಿ.ಬೊಮ್ಮಾಯಿ ಅವರಿಗೆ ಟೈಟನ್ ಬಿಜಿನೆಸ್ ಅವಾರ್ಡ್ ಸಿಕ್ಕಿದೆ.

ಉತ್ಪಾದನೆ ವಿಭಾಗದಲ್ಲಿ ವರ್ಷದ ಜಾಗತಿಕ ವಾಣಿಜ್ಯೋದ್ಯಮಿಯಾಗಿ (Entrepreneur for The Year 2022) ಹೊರಹೊಮ್ಮಿದ್ದು 2022ರ ಟೈಟಾನ್ ಬಿಸಿನೆಸ್ ಅವಾರ್ಡ್ ಸೀಸನ್ 2 ರಲ್ಲಿ ಭರತ್ ವಿಜಯಿಯಾಗಿದ್ದಾರೆ.

ಅಶ್ವ ಎನರ್ಜಿ ಮತ್ತು ವಾಲ್ಟೆಕ್ ಎಂಬ ಸಂಸ್ಥೆಗಳನ್ನು ಭರತ್ ಬಿ ಬೊಮ್ಮಾಯಿ ಮುನ್ನಡೆಸುತ್ತಿದ್ದಾರೆ. ಈ ಬಾರಿ ನಡೆದ ಎಲೆಕ್ಟ್ರಿಕ್ ಎಕ್ಸ್‌ಪೋದಲ್ಲಿ ಭರತ್ ಬೊಮ್ಮಾಯಿ ಎಲೆಕ್ಟ್ರಿಕ್ ಟ್ರ್ಯಾಕ್ಟರ್ ಚಲಾಯಿಸಿದ್ದರು.

ರೈತ ವಿರೋಧಿ ನೀತಿ ವಿರುದ್ಧ ಹೋರಾಟಕ್ಕೆ ಕರೆ



ಮೈಸೂರು, ಅ.7(ಎಂಟಿವೈ)– ಕೇಂದ್ರ ಹಾಗೂ ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ಧ ಸಂಘಟಿತ ಹೋರಾಟ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಕರ್ನಾಟಕ ಪಾಂತ ರೈತ ಸಂಘದ ರಾಜ್ಯ ಜಂಟಿ ಕಾರ್ಯದರ್ಶಿ ಹೆಚ್.ಆರ್‌ನವೀನ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಅಶೋಕ್ ವೃತ್ತ(ಬಲ್ಲಾಳ್ ವೃತ್ತ)ದ ಸಮೀಪವಿರುವ ಬುದ್ಧವಿಹಾರದಲ್ಲಿ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ 2ನೇ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಶ್ರೀಮಂತರು, ಉದ್ಯಮಿಗಳು ಹಾಗೂ ಕಾರ್ಪೊರೇಟ್ ಕಂಪನಿಗಳು ಪಡೆದಿರುವ ಸಾಲ ಮನ್ನಾ ಮಾಡುವಲ್ಲಿ ತೋರುವ ಆಸಕ್ತಿಯನ್ನು ರೈತರ ಸಾಲ ಮನ್ನಾ ಮಾಡುವಲ್ಲಿ ತೋರುತ್ತಿಲ್ಲ. ಇದು ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಯನ್ನು ತೋರಿಸುತ್ತದೆ. ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿ ಮಾಡುತ್ತೇನೆಂದು ಹೇಳಿ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ರೈತರಿಗೆ ಮೋಸ ಮಾಡಿ ವರದಿ ಜಾರಿ ಮಾಡಲು ಸಾಧ್ಯವಿಲ್ಲ ಎಂದು ಅಫಿಡವಿಟ್ ಸಲ್ಲಿಸಿದೆ. ಅಲ್ಲದೆ ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಕರಾಳ ಕೃಷಿ ಕಾನೂನನ್ನು ತಂದಿತ್ತು ಎಂದು ಕಿಡಿಕಾರಿದರು.

ರೈತ ವಿರೋಧಿ ಕರಾಳ ಶಾಸನವನ್ನು ಮತ್ತೆ ಜಾರಿಗೊಳಿಸಲು ಮೋದಿ ಸರ್ಕಾರ ಹುನ್ನಾರ ನಡೆಸುತ್ತಿದೆ. ಇದನ್ನು ತಡೆಯಲು ಸಂಘಟಿತರಾಗಬೇಕು. 50–60 ವರ್ಷಗಳಿಂದ ಸಾಗುವಳಿ ಪತ್ರಕ್ಕೆ ಅರ್ಜಿ ಸಲ್ಲಿಸಿ ಹಕ್ಕು ಪತ್ರಕ್ಕೆ ಕಾಯುತ್ತಿರುವ ರೈತರಿಗೆ ಸಾಗುವಳಿ ಪತ್ರ ನೀಡದೆ, ಕಾನೂನಿನ ನೆಪ ಹೇಳಿ ಸಾಗುವಳಿ ನಿರಾಕರಿಸುತ್ತಿದ್ದಾರೆ. ಆದರೆ ಅದೇ ಸಾಗುವಳಿ ಭೂಮಿಯನ್ನು ಕಂದಾಯ ಸಚಿವರ ನೇತೃತ್ವದಲ್ಲಿ ಸಮಿತಿ ಮಾಡಿ ಖಾಸಗಿ ಸಂಘ ಸಂಸ್ಥೆಗಳಿಗೆ ನೀಡುತ್ತಿದ್ದಾರೆ. ಈ ಭೂಗಳ್ಳ ಸರ್ಕಾರದ ವಿರುದ್ಧ ತೀವ್ರ ಹೋರಾಟಕ್ಕೆ ಅಣಿಯಾಗಬೇಕಿದೆ ಎಂದರು.

ವೇದಿಕೆಯಲ್ಲಿ ಅತಿಥಿಗಳಾಗಿ ಸಿಐಟಿಯುನ ಜಿಲ್ಲಾ ಕಾರ್ಯದರ್ಶಿ ಜಯರಾಂ, ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಕೆ.ಬಸವರಾಜ್, ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಮುಖಂಡರಾದ ನೂರಾಣಿ, ಚಿಕ್ಕಣ್ಣೇಗೌಡ, ಕೆಂಪಯ್ಯ, ಚಂದ್ರಶೇಖರ್ ಇನ್ನಿತರರು ಪಾಲ್ಗೊಂಡಿದ್ದರು. ಇದಕ್ಕೂ ಮುನ್ನ ರಾಮಸ್ವಾಮಿ ವೃತ್ತದಿಂದ ಬುದ್ಧ ವಿಹಾರದವರೆಗೆ ಮೆರವಣಿಗೆ ನಡೆಸಲಾಯಿತು.

5Gಗೆ ಸಿಮ್‌ಕಾರ್ಡ್ ಅಪ್‌ಡೇಟ್ ನೆಪದಲ್ಲಿ ಓಟಿಪಿ ಕೇಳಿದರೆ ಕೊಡಬೇಡಿ

ಮೈಸೂರು, ಅ.7(ಆರ್‌ಕೆ)–ವಿವಿಧ ರೀತಿ ವಂಚನೆ ಮಾಡುತ್ತಿರುವ ಸೈಬರ್ ಕ್ರೈಂ ವಂಚಕರು ಇದೀಗ 4G ಯಿಂದ 5Gಗೆ ಸಿಮ್‌ಕಾರ್ಡ್ ಅಪ್‌ಡೇಟ್ ಮಾಡುವ ನೆಪದಲ್ಲಿ ನಿಮ್ಮ ಬ್ಯಾಂಕ್ ಖಾತೆಯಿಂದ ಹಣ ವರ್ಗಾಯಿಸಿಕೊಳ್ಳುತ್ತಿದ್ದಾರೆ.

ಮೊಬೈಲ್ ಸಿಮ್‌ಕಾರ್ಡ್ 5G ಸೇವೆ ಆರಂಭವಾಗಿದ್ದು, ಕೆಲ ವಂಚಕರು ಅದನ್ನೇ ನೆಪ ಮಾಡಿಕೊಂಡು ನಿಮ್ಮ ಮೊಬೈಲ್‌ಗೆ ಕರೆ ಮಾಡಿ 'ನಿಮ್ಮ ಸಿಮ್‌ಕಾರ್ಡ್ ಅನ್ನು 4Gಯಿಂದ 5Gಗೆ ಅಪ್‌ಡೇಟ್ ಮಾಡುತ್ತಿರುವುದರಿಂದ ಓಟಿಪಿ ಬರುತ್ತದೆ ಎಂದು ಹೇಳುತ್ತಾರೆ. ಅವರೇ ಕಳುಹಿಸಿದ ಓಟಿಪಿ ನಂಬರ್ ಅನ್ನು ನೀವು ಹೇಳಿದರೆ, ತಕ್ಷಣವೇ ನಿಮ್ಮ ಬ್ಯಾಂಕ್ ಖಾತೆ ಅಥವಾ ಮಿತ್ರ ಆ್ಯಪ್‌ನಲ್ಲಿರುವ ಹಣವನ್ನು ಅವರ ಖಾತೆಗೆ ವರ್ಗಾವಣೆ ಮಾಡಿಕೊಳ್ಳುತ್ತಾರೆ.

ಆದ್ದರಿಂದ ಮೊಬೈಲ್ ಸಿಮ್‌ಕಾರ್ಡ್ ಅಪ್‌ಡೇಟ್ ಮಾಡುತ್ತೇವೆಂದು ಓಟಿಪಿ ಕೇಳಿದವರಿಗೆ ಹಿಂದು–ಮುಂದು ಯೋಚಿಸದೇ ಓಟಿಪಿ ನಂಬರ್ ಹೇಳಬೇಡಿ ಎಂದು ಸೈಬರ್ ಕ್ರೈಂ ಪೊಲೀಸರು ನಾಗರಿಕರಿಗೆ ಎಚ್ಚರಿಸಿದ್ದಾರೆ.

ದಸರಾ ಗಜಪಡೆ ಮಾವುತರು, ಕಾವಾಡಿಗಳ ಪರಿವಾರದ ಮಹಿಳೆಯರಿಗೆ ರೇನ್ ಕೋಟ್ ವಿತರಣೆ



ಮೈಸೂರು, ಅ.7(ಎಂಟಿವೈ)– ದಸರಾ ಗಜಪಡೆಯ ಮಾವುತ, ಕಾವಾಡಿಗಳ ಕುಟುಂಬದ ಮಹಿಳೆಯರಿಗೆ ಜಿಎಸ್‌ಎಸ್‌ಎಸ್ ಮಹಿಳಾ ಎಂಜಿನಿಯರಿಂಗ್ ಕಾಲೇಜಿನ ಬೋಧಕ ವರ್ಗ ಹಾಗೂ ಹಳೆ ವಿದ್ಯಾರ್ಥಿಗಳ ಸಂಘದ ವತಿಯಿಂದ ರೇನ್ ಕೋಟ್ ವಿತರಿಸಲಾಯಿತು.

ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಬಳಿ ದಸರಾ ಗಜಪಡೆಯ ಎಲ್ಲಾ ಆನೆಗಳ ಮಾವುತ, ಕಾವಾಡಿಗಳ ಕುಟುಂಬದ ಮಹಿಳೆಯರಿಗೆ ರೇನ್ ಕೋಟ್ ವಿತರಿಸಲಾಯಿತು. ಸಾಮಾನ್ಯವಾಗಿ ಅರಣ್ಯ ಪ್ರದೇಶದಲ್ಲೇ ಮಾವುತರು, ಕಾವಾಡಿಗಳ ಕುಟುಂಬ ನೆಲೆಸಿರುವುದರಿಂದ ಮಳೆಯಿಂದ ರಕ್ಷಣೆಗೆ ರೇನ್ ಕೋಟ್ ನೀಡಲಾಗಿದೆ ಎಂದು ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘದ ಖಜಾಂಚಿ ಆರ್.ಎನ್.ನಾಗಶ್ರೀ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಹಾಗೂ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ. ಎಂ.ಶಿವಕುಮಾರ್, ಕಾರ್ಯದರ್ಶಿ ಜೆ.ಉಷಾರಾಣಿ, ಸಂಘದ ಖಜಾಂಚಿ ಆರ್.ಎನ್.ನಾಗಶ್ರೀ, ಸದಸ್ಯರಾದ ಅಮೃತ, ಶ್ರೀಲಕ್ಷ್ಮಿ, ಬಿ.ಉಷಾ, ಕೀರ್ತಿ ಉಪಸ್ಥಿತರಿದ್ದರು.

ಪಾಲಹಳ್ಳಿ ಗ್ರಾಮಸ್ಥರಿಂದ ಉದ್ಯಮಿ ಮಂಜುನಾಥ್‌ಗೆ ಸನ್ಮಾನ



ಶ್ರೀರಂಗಪಟ್ಟಣ,ಅ.7– ಗರಡಿ ಜಿಲ್ಲಾ ಒಕ್ಕೂಟದ ಪಾಲಹಳ್ಳಿ ಗ್ರಾಮದ ವತಿಯಿಂದ ಇತ್ತೀಚೆಗೆ ಏಷ್ಯಾ ನೆಟ್ ಸುವರ್ಣ ವಾಹಿನಿ ವತಿಯಿಂದ ಬಿಸಿನೆಸ್ ಅವಾರ್ಡ್‌ಗೆ ಪಾತ್ರರಾದ ಖ್ಯಾತ ಉದ್ಯಮಿ ರುಚಿ ಚಿಕನ್ಸ್ ಹಾಗೂ ಹೊಟಲ್ ಲೀ ರುಚಿ ದ ಪ್ರಿನ್ಸ್ ಮಾಲೀಕ ಬಿ.ಮಂಜುನಾಥ್ ರವರೆಗೆ ಬೆಳ್ಳಿ ಗದೆ ನೀಡಿ ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ಶ್ರೀರಂಗಪಟ್ಟಣ ತಾಲೂಕು ಜೆಡಿಎಸ್ ಅಧ್ಯಕ್ಷ ಪೈ ಮುಕುಂದ ಬಿಸಿನೆಸ್ ಅವಾರ್ಡ್‌ಗೆ ಪಾತ್ರರಾದ ಉದ್ಯಮಿ ಮಂಜುನಾಥ್ ಕೇವಲ ಉದ್ಯಮಿ ಮಾತ್ರವಲ್ಲ ಅವರು ಸಾಮಾಜಿಕ ಕಳಕಳಿ ಇರುವ ಸಮಾಜ ಸೇವಕರು ಕೂಡ, ಈ ಎಲ್ಲಾ ಗುಣಗಳಿಂದಲೆ ಉನ್ನತ ಪ್ರಶಸ್ತಿ ಅವರ ಮಡಿಲಿಗೆ ಬಂದಿದೆ ಎಂದರು.

ನಂತರ ಮಾತನಾಡಿದ ರುಚಿ ಮಂಜುನಾಥ್, ನಾನು ಎಂದೂ ಕೂಡ ಈ ರೀತಿಯ ಪ್ರಶಸ್ತಿ ಹಾಗೂ ಸನ್ಮಾನಗಳನ್ನು ಅಪೇಕ್ಷಿಸುವುದಿಲ್ಲ ನನ್ನ ಸಮಾಜಿಕ ಸೇವೆ ಹಾಗೂ ಉದ್ಯಮದ ಕೌಶಲ್ಯತೆ ನೋಡಿ ನನಗೆ ಪ್ರಶಸ್ತಿ ನೀಡಿದ್ದಾರೆ ಹಾಗೂ ಇಂದು ಈ ಬೆಳ್ಳಿ ಗದೆ ನೀಡಿ ಸನ್ಮಾನಿಸಿದ ನನ್ನ ಸ್ನೇಹಿತರು ಹಾಗೂ ಗರಡಿ ಜಿಲ್ಲಾ ಒಕ್ಕೂಟದ ಪಾಲಹಳ್ಳಿ ಗ್ರಾಮದ ಹೆಸರಾಂತ ಪೈಲ್ವಾನ್‌ಗಳಿಗೆ ನನ್ನ ಧನ್ಯವಾದಗಳು ಎಂದರು.

ಈ ವೇಳೆ ಪೈ.ವಿಜೇಂದ್ರ, ಪೈ.ಮುಕುಂದಣ್ಣ, ಹೊಸಹಳ್ಳಿ ಪೈ.ಪುಟ್ಟರಾಜಣ್ಣ, ಕೆಜಿ ಕೊಪ್ಪಲು ಸೋಮಣ್ಣ, ರಾಯಲ್ ಚಿಕನ್ಸ್ ಪಾಲಹಳ್ಳಿ ರಮೇಶ್, ಅಸೋಸಿಯೇಟ್ ಟ್ರಾವಲ್ ರಾಘವೇಂದ್ರ ಹಾಗೂ ಬಿಟಿಸಿಸಿ ಸದಸ್ಯರು ಇದ್ದರು.

ಮಧ್ಯ ಪ್ರದೇಶದಲ್ಲಿ ಟಿ–90 ಯುದ್ಧ ಟ್ಯಾಂಕರ್‌ನ ಬ್ಯಾರೆಲ್ ಸಿಡಿದು ಇಬ್ಬರು ಸೈನಿಕರು ಸಾವು

ಬಬಿನಾ: ಮಧ್ಯಪ್ರದೇಶದ ಬಾಬಿನಾದಲ್ಲಿ ಫೀಲ್ಡ್ ಫೈರಿಂಗ್ ತರಬೇತಿ ವೇಳೆ ಟಿ–90 ಯುದ್ಧ ಟ್ಯಾಂಕರ್‌ನ ಬ್ಯಾರೆಲ್ ಸಿಡಿದು ಇಬ್ಬರು ಭಾರತೀಯ ಸೇನಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ. ಇನ್ನೊಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಗುರುವಾರ ಸಂಜೆ ಈ ಘಟನೆ ನಡೆದಿದೆ ಎಂದು ಅವರು ಹೇಳಿದ್ದಾರೆ.

ಅಕ್ಟೋಬರ್ 6 ರಂದು ಬಾಬಿನಾ ಫೀಲ್ಡ್ ಫೈರಿಂಗ್ ರೇಂಜ್‌ನಲ್ಲಿ ವಾರ್ಷಿಕ ಗುಂಡಿನ ದಾಳಿಯ ಸಂದರ್ಭದಲ್ಲಿ ಟ್ಯಾಂಕರ್‌ನ ಬ್ಯಾರೆಲ್ ಸ್ಫೋಟಗೊಂಡಿತು. ಈ ಟ್ಯಾಂಕರ್ ಅನ್ನು ಮೂವರು ಸಿಬ್ಬಂದಿ ನಿರ್ವಹಿಸುತ್ತಿದ್ದರು. ಎಲ್ಲಾ ಸಿಬ್ಬಂದಿಗೆ ತಕ್ಷಣವೇ ವೈದ್ಯಕೀಯ ತುರ್ತು ಚಿಕಿತ್ಸೆ ನೀಡಿ ಬಬಿನಾದಲ್ಲಿರುವ ಮಿಲಿಟರಿ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು ಎಂದು ಅವರು ತಿಳಿಸಿದ್ದಾರೆ.

ಸುಟ್ಟ ಗಾಯಗಳಿಂದ ಬಳಲುತ್ತಿದ್ದ ಕಮಾಂಡರ್ ಮತ್ತು ಗನ್ನರ್ ದುರದೃಷ್ಟವಶಾತ್ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ ಎಂದು ಅವರು ಇತ್ತೀಚೆಗೆ ಹೇಳಿದ್ದಾರೆ. ಚಾಲಕ ಅಪಾಯದಿಂದ ಪಾರಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಯ ಕುರಿತು ಸೇನೆ ತನಿಖೆಗೆ ಆದೇಶಿಸಿದೆ.

ಆತ್ಮ ವಿಶ್ವಾಸವುಳ್ಳ ವ್ಯಕ್ತಿಗೆ ಸೋಲೆಂಬುದಿಲ್ಲ

● ಹಿರಿಯ ಲೇಖಕ ಡಾ.ಡಿ.ಕೆ.ರಾಜೇಂದ್ರ ● ಸವಿಗನ್ನಡ ಸಾಂಸ್ಕೃತಿಕ ಪ್ರಶಸ್ತಿ ಪ್ರದಾನ



ಮೈಸೂರು, ಅ. 7– ಕಾವ್ಯ ಎನ್ನುವುದು ಸುತ್ತಲಿನ ಸಮಾಜದ ಆಗುಹೋಗುಗಳ ಬಗ್ಗೆ ಒಂದು ಸಹೃದಯ ಮನಸ್ಸಿನ ಅಭಿವ್ಯಕ್ತಿ ಎಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ನಿರ್ದೇಶಕರೂ ಆದ ಹಿರಿಯ ಲೇಖಕ ಡಾ.ಡಿ.ಕೆ.ರಾಜೇಂದ್ರ ಅಭಿಪ್ರಾಯಪಟ್ಟರು. ಅವರು ಇತ್ತೀಚೆಗೆ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾಬಳಗ ಮೈಸೂ ರಿನ ನವನ ಕಲಾಮಂಟಪದಲ್ಲಿ ಆಯೋಜಿಸಿದ್ದ 'ಕಾವ್ಯದಸರಾ' ದಸರಾ ಕವಿಗೋಷ್ಠಿ ಮತ್ತು ವಿವಿಧ ಕ್ಷೇತ್ರಗಳ ಸಾಧಕರಿಗೆ ಸವಿಗನ್ನಡ ಸಾಂಸ್ಕೃತಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ, ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಸೂಕ್ಷ್ಮ ಸಂವೇದನೆ ಇರುವ ವ್ಯಕ್ತಿ ಮಾತ್ರ ಕವಿಯಾಗಬಲ್ಲ. ತನ್ನೊಳಗಿನ ಭಾವನೆಗಳನ್ನು ಅಭಿವ್ಯಕ್ತಿಸಲು ಒಂದು ಮಾಧ್ಯಮ ಕವಿತೆಯಾದರೆ ಅದನ್ನು ಪ್ರಕಾಶನಗೊಳಿಸುವ ಕೆಲಸವನ್ನು ಸಾಹಿತ್ಯ ಸಂಘಟನೆಗಳು ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ದಸರಾ ಕವಿಗೋಷ್ಠಿ ಆಯೋಜಿಸಿರುವುದು ಸಂತಸಕರ ಸಂಗತಿ ಎಂದು ನುಡಿದರು. ಕೊರೊನಾ ಕಾರಣದಿಂದ ಕಳೆದೆರಡು ವರ್ಷ ಮರೆಯಾಗಿದ್ದ ದಸರೆಯ ಸಂಭ್ರಮ ಈ ಬಾರಿ ಮತ್ತೆ ಮರುಕಳಿಸಿರುವುದು ಸಂತಸ ತಂದಿದೆ. ಆತ್ಮವಿಶ್ವಾಸವಿರುವ ವ್ಯಕ್ತಿಗೆ ಬದುಕಿನಲ್ಲಿ ಸೋಲೆಂಬುದಿಲ್ಲ ಎಂಬುದನ್ನು ಇಂದಿನ ಕೆಲವು ಸಾಧಕರು ತೋರಿಸಿಕೊಟ್ಟಿದ್ದಾರೆ ಎಂದರು.

ಕವಿಗೋಷ್ಠಿಯನ್ನು ಉದ್ಘಾಟಿಸಿದ ಕವಯಿತ್ರಿ ಡಾ.ಲತಾ ರಾಜಶೇಖರ್ ಮಾತನಾಡಿ, ಖಾಸಗಿ ಸಂಘ ಸಂಸ್ಥೆಗಳೂ ಕವಿಗಳನ್ನು ಪ್ರೋತ್ಸಾಹಿಸಿದ ಫಲವಾಗಿ ಕನ್ನಡ ಕಾವ್ಯಕ್ಷೇತ್ರಕ್ಕೆ ಪ್ರಬುದ್ಧ, ಸಂವೇದನಾಶೀಲ ಕವಿಗಳ ಸಂಖ್ಯೆ ಹೆಚ್ಚಾಗಿದೆ ಎಂದರು.

ವಿದ್ಯೋದಯ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕಿ ಡಾ.ಸಿ.ಜಿ.ಉಷಾದೇವಿ ಮಾತನಾಡಿ, ಸುತ್ತಲಿನ ಸಮಾಜದಲ್ಲಿ ಕೇವಲ ಕೆಡುಕು ಮಾತ್ರ ಇಲ್ಲ..ಒಳಿತೂ ಸಹ ಇದೆ. ಒಳಿತಿನ ಬಗ್ಗೆ ಕವಿತೆ ಬರೆದಾಗ ಅದು ಇತರರಿಗೆ ಜ್ಞಾನದ ಬೆಳಕು ಚೆಲ್ಲುವುದರೊಂದಿಗೆ ಹೃದಯ ವಿಕಸಿಸುವಂತೆ ಮಾಡುತ್ತದೆ ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಾದ ಗಾಯತ್ರಿ ರಾಜ್, ಕಣ್ಣೂರು ವಿ.ಗೋವಿಂದಾಚಾರಿ, ರಾಮನಾಥ ಗುಪ್ತ ಪ್ರಭಾಶಾಸ್ತ್ರೀ, ವಿಜಯ ಸುದರ್ಶನ, ಖಾಸಿಂಮಲ್ಲಿಗೆ ಮಡುವು, ವರದಾ ನಾಯಕ್ ಅವರಿಗೆ ಸವಿಗನ್ನಡ ಸಾಂಸ್ಕೃತಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸನ್ಮಾನಿತರ ಪರವಾಗಿ ಕಣ್ಣೂರು ವಿ.ಗೋವಿಂದಾಚಾರಿ, ಗಾಯತ್ರಿ ರಾಜ್ ಮಾತನಾಡಿ ಕೃತಜ್ಞತೆ ಸಲ್ಲಿಸಿದರು. ಹಿರಿಯ ವಿಜ್ಞಾನಲೇಖಕ ಹಾಗೂ ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿಯ ಸಂಸ್ಥಾಪಕ ಪ್ರೊ.ಎಸ್.ರಾಮಪ್ರಸಾದ್, ಕವಿಗೋಷ್ಠಿ ಅಧ್ಯಕ್ಷ ಬಿ.ರಮೇಶ್ ಮಾತನಾಡಿದರು. ಕವಿಗೋಷ್ಠಿಯಲ್ಲಿ 20ಕ್ಕೂ ಹೆಚ್ಚು ನೊಂದಾಯಿತ ಕವಿಗಳು ಪಾಲ್ಗೊಂಡಿದ್ದರು. ಶ್ರೀಕಂಠೇಶ್ ನಾಡ ಗೀತೆ, ವಿಜಯಲಕ್ಷ್ಮಿ ಅವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಸವಿಗನ್ನಡ ಪತ್ರಿಕೆ ಸಂಪಾದಕ ರಂಗನಾಥ್ ಮೈಸೂರು ಸ್ವಾಗತಿಸಿದರು. ಕವಯಿತ್ರಿ ಪದ್ಮಾರಘು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಮುಂಬರುವ ವಿಧಾನಸಭಾ ಚುನಾವಣೆಗೆ ಸಿದ್ಧರಾಗಿ

ಕಾರ್ಯಕರ್ತರಿಗೆ ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ಕರೆ

ನಂಜನಗೂಡು, ಅ.7– ಮುಂಬರುವ ವಿಧಾನ ಸಭಾ ಚುನಾವಣೆಗೆ ಈಗಿನಿಂದಲೇ ಸಿದ್ಧರಾಗುವಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ಕರೆ ನೀಡಿದರು.

ನಗರದ ಪ್ರವಾಸಿ ಮಂದಿರಕ್ಕೆ ಶುಕ್ರವಾರ ಭೇಟಿ ನೀಡಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಸುದೀರ್ಘ 2 ಗಂಟೆಗಳ ಕಾಲ ಚರ್ಚೆ ನಡೆಸಿದ ಅವರು, ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿರುವ ಹಿನ್ನೆಲೆಯಲ್ಲಿ ಪಕ್ಷ ಸಂಘಟನೆ ಹಾಗೂ ಚುನಾವಣೆ ಎದುರಿಸುವ ನಿಟ್ಟಿನಲ್ಲಿ ಈಗಿನಿಂದಲೇ ತಯಾರಾಗುವಂತೆ ಸೂಚಿಸಿದರು.

ನಂಜನಗೂಡಿನಲ್ಲಿ ಮತ್ತೊಮ್ಮೆ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬ ಕಾರ್ಯಕರ್ತರು ತಳಮಟ್ಟದಿಂದ ಪಕ್ಷ ಸಂಘಟಿಸಬೇಕು. ಶಾಸಕ ಬಿ.ಹರ್ಷವರ್ಧನ್ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಪ್ರಚಾರ ಮಾಡುವ ಜೊತೆಗೆ ಮನೆ ಮನೆಗೆ ತಲುಪಿಸಬೇಕು. ಮುಂದಿನ ದಿನಗಳಲ್ಲಿ ನಂಜನಗೂಡಿಗೆ ಹೆಚ್ಚು ಭೇಟಿ ನೀಡುವ ಮೂಲಕ ಅಗತ್ಯ ಸಲಹೆ ಸೂಚನೆ ನೀಡುತ್ತೇನೆ. ಚುನಾವಣಾ ಗೆಲುವಿಗಾಗಿ ಈಗಿನಿಂದಲೇ ಕಾರ್ಯಕರ್ತರನ್ನು ಸಂಘಟನೆಗೊಳಿಸುವ ನಿಟ್ಟಿನಲ್ಲಿ ಮುಖಂಡರು ಮುಂದಾಗುವಂತೆ ತಿಳಿಸಿದರು. ಇನ್ನು ಸಂಸದರು ಭೇಟಿ ನೀಡುವ ವಿಚಾರ ತಿಳಿಯುತ್ತಿದ್ದಂತೆ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು.

ಈ ವೇಳೆ ಪ್ರಥಮದರ್ಜೆ ಗುತ್ತಿಗೆದಾರ ಯು.ಎನ್.ಪದ್ಮನಾಭರಾವ್, ಮುಖಂಡರಾದ ಕುಂಬ್ರಹಳ್ಳಿ ಸುಬ್ಬಣ್ಣ, ಸಿಂಧುವಳ್ಳಿ ಕೆಂಪಣ್ಣ, ಬಿ.ಎಸ್.ಮಹದೇವಪ್ಪ, ಮಂಡ್ಯ ಮಹದೇವು, ಶಿರಮಳ್ಳಿ ಮಹದೇವಸ್ವಾಮಿ, ಹೆಮ್ಮರಗಾಲ ಶಿವಣ್ಣ, ಮಲ್ಲುಂಡಿ ಪುಟ್ಟಸ್ವಾಮಿ, ನಿಧಿ ಸುರೇಶ್ ಸೇರಿದಂತೆ ಇತರರಿದ್ದರು.

ಮೇಲ್ಸೆತುವೆ ಕಾಮಗಾರಿ ವೀಕ್ಷಣೆ: ನಗರದ ಅಪೋಲೋ ವೃತ್ತದ ಬಳಿ ನಿರ್ಮಾಣ ಹಂತದಲ್ಲಿರುವ ರೈಲ್ವೆ ಮೇಲ್ಸೆತುವೆ ಕಾಮಗಾರಿಯನ್ನು ಸಂಸದ ವಿ.ಶ್ರೀನಿ ವಾಸಪ್ರಸಾದ್ ವೀಕ್ಷಿಸಿದರು. 147 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಮೇಲ್ಸೆತುವೆ ಕಾಮಗಾರಿ ಗುಣಮಟ್ಟ ಕಾಯ್ದುಕೊಂಡು 18 ತಿಂಗಳ ನಿಗದಿತ ಗಡುವಿನ ಒಳಗಾಗಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ.

ಮೇಲ್ಸೇತುವೆ ನಿರ್ಮಾಣ ಆಗುವುದರಿಂದ ಎರಡು ರಾಷ್ಟ್ರೀಯ ಹೆದ್ದಾರಿಯಲ್ಲಿ ತಲೆ ದೋರುತ್ತಿದ್ದ ಸಂಚಾರ ಸಮಸ್ಯೆ ನಿವಾರಣೆ ಆಗಲಿದೆ ಎಂದು ತಿಳಿಸಿದರು.



ರೈಲ್ವೆ ಮೇಲ್ಸೆತುವೆ ಕಾಮಗಾರಿಯನ್ನು ಸಂಸದ ವಿ.ಶ್ರೀನಿವಾಸಪ್ರಸಾದ್ ಪರಿಶೀಲಿಸಿದರು.

ಯಾಚೇನಹಳ್ಳಿ ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಬನ್ನೂರು, ಅ.7– ಇಲ್ಲಿಗೆ ಸಮೀಪದ ಯಾಚೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ವೈ.ಎಂ.ಮಲ್ಲೇಶ್ ಹಾಗೂ ಉಪಾಧ್ಯಕ್ಷರಾಗಿ ದೊಡ್ಡಸಿದ್ದೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ವೈ.ಎಂ.ಮಲ್ಲೇಶ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ದೊಡ್ಡಸಿದ್ದೇಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಮೈಮುಲ್ ನಿರ್ದೇಶಕ ಚೆಲುವರಾಜು ಮಾತನಾಡಿ, ಯಾಚೇನಹಳ್ಳಿ ನನ್ನ ನೆಚ್ಚಿನ ಗ್ರಾಮವಾಗಿದ್ದು, ಗ್ರಾಮದ ಜನತೆ ಯಾವುದೇ ಸಂದರ್ಭದಲ್ಲಿ ತಮ್ಮನ್ನು ಸಂಪರ್ಕಿಸಿದರೆ ಅವರಿಗೆ ಬೇಕಾದ ಕೆಲಸ ಮಾಡಿ ಕೊಡುವುದಾಗಿ ತಿಳಿಸಿದ ಅವರು, ಮೈಮುಲ್‌ನಿಂದ ಮೇವು ಕಟಾವು ಯಂತ್ರ, ಕೊಟ್ಟಿಗೆ ವ್ಯಾಟ್ ನೀಡುತ್ತಿದ್ದು, ಇದರ ಪ್ರಯೋಜನ ಪಡೆಯುವಂತೆ ತಿಳಿಸಿದರು.

ಯಾಚೇನಹಳ್ಳಿ ಪಿಎಸಿಎಸ್ ಅಧ್ಯಕ್ಷ ವೈ.ಎನ್.ಶಂಕರೇಗೌಡ ಮಾತನಾಡಿದರು.

ಈ ವೇಳೆ ಡೈರಿ ಸದಸ್ಯರಾದ ವೈಜೆ.ಪುಟ್ಟರಾಜು, ವೈ.ಎಸ್.ಶಿವಕುಮಾರ್, ಬಸವರಾಜು, ವೈ.ಕೆ.ಪ್ರಕಾಶ್, ನಾಗವ್ವ, ದುರ್ಗೇಶ, ನಾಗಮ್ಮ, ವೈ.ಕೆ.ಉಮೇಶ್, ಮಹೇಶ, ಕಾರ್ಯದರ್ಶಿ ರಾಹುಲ್ ಗೌಡ, ಆಡಳಿತಾಧಿಕಾರಿ ಕೆ.ಸಿ.ರಘು, ಪಿಎಸಿಎಸ್ ಉಪಾಧ್ಯಕ್ಷ ವೈ.ಎಂ.ಚಂದ್ರು, ನಾಡ ಯಜಮಾನ ವೈ.ಎಚ್.ಹನುಮಂತೇಗೌಡ, ವೈ.ಕೆ.ಬೋರೇಗೌಡ, ವೈ.ಜಿ.ಮಹೇಂದ್ರ, ತುರಗನೂರು ಗ್ರಾಪಂ ಅಧ್ಯಕ್ಷ ಕೃಷ್ಣ, ವೈ.ಎನ್.ನಾಗೇಶ್, ಅಧ್ಯಕ್ಷೆ ಸರೋಜಮ್ಮ, ಸದಸ್ಯರಾದ ವೈ.ಎಸ್.ಶೇಖರ್, ವೈ.ಎ.ಪುಟ್ಟರಾಜು, ಸಿಇಓ ವೈ.ಕೆ.ಕ್ಯಾತೇಗೌಡ, ವೈ.ಎಲ್.ಸಣ್ಣಮರೀಗೌಡ, ವೈ.ಎಸ್.ಲೋಕೇಶ್, ಸೋಮಶೇಖರ್, ಮಹದೇವು, ಶಿವರಾಂ, ಮಹದೇವು ಸೇರಿದಂತೆ ಇತರರಿದ್ದರು.

ಹಾಡಹಗಲೇ ಹುಲಿ ದಾಳಿ: ಜಾನುವಾರಿಗೆ ಗಾಯ

ಹನಗೋಡು, ಅ.7– ಹಾಡಹಗಲೇ ಜಾನುವಾರು(ಎತ್ತಿನ) ಮೇಲೆ ಹುಲಿ ದಾಳಿ ನಡೆಸಿ ತೀವ್ರ ಗಾಯಗೊಳಿಸಿರುವ ಘಟನೆ ನಾಗರಹೊಳೆ ಉದ್ಯಾನದಂಚಿನ ಕೋಣನಹೊಸಹಳ್ಳಿ ಬಳಿ ಗುರುವಾರ ನಡೆದಿದೆ.



ಹನಗೋಡು ಹೋಬಳಿಯ ಕೊಳವಿಗೆಯ ಬಸಪ್ಪರ ಪುತ್ರ ಶಿವಣ್ಣ ಅವರಿಗೆ ಸೇರಿದ ಎತ್ತು ಇದಾಗಿದ್ದು, ಜಮೀನಿನಿಂದ ರಾಸುಗಳನ್ನು ಮನೆ ಕಡೆಗೆ ಕರೆದೊಯ್ಯುತ್ತಿದ್ದ ವೇಳೆ ಏಕಾಏಕಿ ಎತ್ತಿನ ಮೇಲೆರಗಿದ ಹುಲಿ ತೀವ್ರ ಗಾಯಗೊಳಿಸಿದ್ದು, ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದೆ. ಕಣ್ಮುಂದೆಯೇ ಹುಲಿ ದಾಳಿ ನಡೆಸಿದ ಘಟನೆಯಿಂದ ಆಘಾತಕ್ಕೊಳಗಾದ ದನಗಾಹಿ ಶಿವಣ್ಣ ಕಿರುಚಿಕೊಂಡು ಓಡಿಬಂದು ಪ್ರಾಣ ಉಳಿಸಿಕೊಂಡಿದ್ದಾರೆ. ಸುತ್ತ ಮುತ್ತಲಿನ ರೈತರ ಕೂಗಾಟದಿಂದ ಹುಲಿ ಎತ್ತನ್ನು ಬಿಟ್ಟು ಕಾಡಿನತ್ತ ಪರಾರಿಯಾಗಿದೆ. ವಿಷಯ ತಿಳಿದ ಗ್ರಾಮಸ್ಥರು ಸ್ಥಳಕ್ಕಾಗಮಿಸಿ ಗಾಯಗೊಂಡಿದ್ದ ಎತ್ತಿಗೆ ಚಿಕಿತ್ಸೆ ಕೊಡಿಸಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಹುಲಿ ಸೆರೆಗೆ ಆಗ್ರಹ: ಕಳೆದ 2 ವರ್ಷಗಳಿಂದ ಈ ಭಾಗದ ಗ್ರಾಮಗಳಲ್ಲಿ ಆಗಾಗ್ಗೆ ಹುಲಿ ಕಾಣಿಸಿಕೊಂಡು ಜನ, ಜಾನುವಾರುಗಳನ್ನು ಕೊಂದು ಹಾಕುತ್ತಿದ್ದು, ಇದರಿಂದ ಜನರು ಭಯಭೀತರಾಗಿದ್ದು, ಹುಲಿ ಸೆರೆಗೆ ಮುಂದಾಗುವಂತೆ ಗ್ರಾಪಂ ಸದಸ್ಯ ಕೊಳವಿಗೆ ಬಸವಣ್ಣ ಆಗ್ರಹಿಸಿದ್ದಾರೆ.

ಹಾವು ಕಚ್ಚಿ ರೈತ ಸಾವು



ಹುಣಸೂರು, ಅ.7– ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಹಾವು ಕಚ್ಚಿ ರೈತರೊಬ್ಬರು ಸಾವನ್ನಪ್ಪಿರುವ ಘಟನೆ ತಾಲೂಕಿನ ಉದ್ದೂರು ಗ್ರಾಮದಲ್ಲಿ ನಡೆದಿದೆ.

ಉದ್ದೂರು ಗ್ರಾಮದ ಲೇ.ಚಿಕ್ಕೇಗೌಡರ ಪುತ್ರ ನಂಜುಂಡೇಗೌಡ(56) ಮೃತ ರೈತ. ಇವರು ತಮ್ಮ ಜಮೀನಿನಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ವೇಳೆ ಹಾವು ಕಚ್ಚಿದೆ. ತಕ್ಷಣ ಅವರನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರಾದರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಮಹದೇವ್ ಗುದ್ದಲಿ ಪೂಜೆ

ಪಿರಿಯಾಪಟ್ಟಣ, ಅ.7– ತಾಲೂಕಿನ ಎಲ್ಲಾ ಸಮಸ್ಯೆಗಳನ್ನು ಒಂದೇ ಬಾರಿಗೆ ಪರಿಹರಿಸಲು ಸಾಧ್ಯವಿಲ್ಲ. ಹೀಗಾಗಿ ಹಂತ ಹಂತವಾಗಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ತಾಲೂಕಿನ ಹಿಟ್ನೆಹೆಬ್ಬಾಗಿಲು ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯದ ಮುಖ್ಯಮಂತ್ರಿಗಳೂ ಸಹ ಅವರ ಕ್ಷೇತ್ರದಲ್ಲಿ ಎಲ್ಲಾ ಕೆಲಸಗಳನ್ನು ಪರಿಪೂರ್ಣವಾಗಿ ಮಾಡಲು ಸಾಧ್ಯವಿಲ್ಲ. ಅಂತಹದರಲ್ಲಿ ನಾನೊಬ್ಬ ಸಾಮಾನ್ಯ ಶಾಸಕ. ತಾಲೂಕಿನ ಜನತೆಯ ಆಶೀರ್ವಾದದಿಂದ ಮೊದಲ ಬಾರಿಗೆ ಶಾಸಕನಾಗಿದ್ದೇನೆ. ಜನತೆಯ ಋಣ ನನ್ನ ಮೇಲಿದ್ದು, ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಕ್ಷೇತ್ರದ 400 ಹಳ್ಳಿಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಮಾಡುವ ಮೂಲಕ ಜನರ ಋಣ ತೀರಿಸುತ್ತೇನೆ. ಮುಂಬರುವ ಚುನಾವಣೆಯಲ್ಲಿ ಮತ್ತೊಮ್ಮೆ ನನಗೆ ಆಶೀರ್ವಾದ ಮಾಡಿದ್ದೆ ಆದಲ್ಲಿ ಮತ್ತಷ್ಟು ಅಭಿವೃದ್ಧಿ ಕೆಲಸ ಮಾಡಿ ನಿಮ್ಮ ಹಳ್ಳಿಯನ್ನು ಮಾದರಿ ಗ್ರಾಮವಾಗಿ ಮಾಡುತ್ತೇನೆ ಎಂದರು.



ಗ್ರಾಮದ ವಿದ್ಯುತ್ ಸಮಸ್ಯೆ ಸಂಬಂಧ ಬೆಟ್ಟದಪುರದ ಚೆಸ್ಕಾಂ ಇಂಜಿನಿಯರ್ ರವಿ ಅವರಿಗೆ ಫೋನ್ ಮಾಡಿದರೆ ಅವರು ಕರೆ ಸ್ವೀಕರಿಸುವುದಿಲ್ಲ ಎಂದು ದೂರಿದ ಗ್ರಾಮಸ್ಥರು, ಈಗಾಗಲೇ ಭಾಗ್ಯಜ್ಯೋತಿ ಯೋಜನೆಯಡಿ 106 ಅರ್ಜಿಗಳು ಸ್ವೀಕೃತವಾಗಿದ್ದು, ಅದರಲ್ಲಿ ಕೇವಲ 13 ಮಂದಿಯನ್ನು ಮಾತ್ರ ಆಯ್ಕೆ ಮಾಡಿದ್ದಾರೆ. ಅದರಲ್ಲೂ 6 ಮಂದಿಗೆ ಮಾತ್ರ ಈ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಿದ್ದು, ಉಳಿದ 7 ಮಂದಿಗೆ ಭಾಗ್ಯಜ್ಯೋತಿ ಸಂಪರ್ಕ ನೀಡಿಲ್ಲ. ಅವರು ಅತಂತ್ರ ಸ್ಥಿತಿಯಲ್ಲಿದ್ದಾರೆ ಎಂದು ದೂರಿದರು. ಈ ವೇಳೆ ಸ್ಥಳದಲ್ಲಿದ್ದ ಬೆಟ್ಟದಪುರ ವಿಭಾಗದ ಜೆಇ ರವಿ ಅವರನ್ನು ತರಾಟೆಗೆ ತೆಗೆದುಕೊಂಡ ಶಾಸಕರು, ಈ ಬಗ್ಗೆ ಸಮಗ್ರ ಮಾಹಿತಿ ನೀಡುವಂತೆ ಆದೇಶಿಸಿದರು.

ಈ ವೇಳೆ ತಾಲೂಕು ಜೆಡಿಎಸ್ ಘಟಕದ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ತಹಸೀಲ್ದಾರ್ ಕೆ. ಚಂದ್ರಮೌಳಿ, ಜಿಪಂ ಎಇಇ ಮಲ್ಲಿಕಾರ್ಜುನ್ ಮುಖಂಡರಾದ ಹರೀಶ್, ವಿನೋದ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಕೆ.ಆರ್.ನಗರದಲ್ಲಿ ಗಾಂಧೀಜಿ, ಶಾಸ್ತ್ರಿ ಜಯಂತಿ ಆಚರಣೆ



ಕೆ.ಆರ್.ನಗರ, ಅ.7– ಆತ್ಮಸಾಕ್ಷಿ, ಸ್ವಾಭಿಮಾನ, ಮರ್ಯಾದೆ ಇರುವವರು ರಾಜಕಾರಣದಲ್ಲಿ ಇರಬಾರದು. ಎಲ್ಲವನ್ನು ಬಿಟ್ಟು ಹೊಂದಾಣಿಕೆ ಮಾಡಿಕೊಳ್ಳುವವರು ಮಾತ್ರ ರಾಜಕಾರಣದಲ್ಲಿರಬೇಕು ಎಂದು ಶಾಸಕ ಸಾ.ರಾ.ಮಹೇಶ್ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಮಹಾತ್ಮ ಗಾಂಧಿಯವರ 153ನೇ ವರ್ಷದ ಜಯಂತಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ 118ನೇ ಜಯಂತಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಅಧಿಕಾರದ ಆಸೆಗೆ ಪಕ್ಷ, ತಾಯಿ ಎಲ್ಲವನ್ನು ಬಿಟ್ಟು ಹೋಗುತ್ತಾರೆ. ಸಮಾಜದಲ್ಲಿ ಸ್ವಾರ್ಥ ತುಂಬಿ ತುಳುಕುತ್ತಿದ್ದು, ಇಂದಿನ ರಾಜಕಾರಣ ಮತ್ತು ಪರಿಸ್ಥಿತಿ ಅಸಹ್ಯ ಹುಟ್ಟಿಸುತ್ತಿದೆ ಎಂದರು.

ಗಾಂಧೀಜಿಯವರಂತಹ ಹಲವು ನಾಯಕರುಗಳ ಹೋರಾಟ ಮತ್ತು ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಫಲವಾಗಿ ನಾವು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ. ಜನರನ್ನು ತಿದ್ದಲಾಗುತ್ತಿಲ್ಲ. ರೈಲು ಅಪಘಾತದ ಹೊಣೆ ಹೊತ್ತು ರಾಜೀನಾಮೆ ನೀಡಿದ ಲಾಲ್ ಬಹದ್ದೂರ್ ಶಾಸ್ತ್ರಿಯವರ ಸಿದ್ಧಾಂತ ವೆಲ್ಲಿ, ಇಂದು ರಾಜ್ಯದ 10 ಸಾವಿರ ಕೋಟಿ ಆಸ್ತಿ ಮಾರಿದರು ಕೌರವರಂತೆ ಮೆರೆಯುತ್ತಿರುವ ಇಂದಿನ ಸರ್ಕಾರದವರೆಲ್ಲಿ ಎಂದು ಕಿಡಿಕಾರಿದರು.

ಗಾಂಧಿಗೆ ಗುಂಡಿಟ್ಟ ದೇಶ: ಸ್ವಾತಂತ್ರ್ಯ ತಂದುಕೊಟ್ಟ ಗಾಂಧಿಗೆ ಗುಂಡಿಟ್ಟು ಅಂಬೇಡ್ಕರ್ ಅವರನ್ನೇ ಠೇವಣಿ ಕಳೆದ ದೇಶ ನಮ್ಮದು ಅದರಲ್ಲಿ ಕಾರಿಗೆ ಮೊಟ್ಟೆ ಹೊಡೆಯುವುದು ದೊಡ್ಡದಲ್ಲ. ಪರಿಸ್ಥಿತಿ ಹೀಗೆ ಮುಂದುವರೆದರೇ ಜನ ಮೊಟ್ಟೆಯಲ್ಲಾ ಬೇರೆದರಲ್ಲಿ ಹೊಡೆಯುತ್ತಾರೆ ಎಂದು ವ್ಯಂಗ್ಯವಾಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯರಾದ ಚಿನ್ನಸ್ವಾಮಿ, ಕೆ.ಸಿ.ಪುಟ್ಟಸಿದ್ದಶೆಟ್ಟಿ, ನಿವೃತ್ತ ಉಪನ್ಯಾಸಕ ಕೆ.ಆರ್.ಲಕ್ಕೇಗೌಡ ಮಾತನಾಡಿದರು. ಈ ಸಂದರ್ಭದಲ್ಲಿ ವಿಧವಾ ವೇತನ ಹಾಗೂ ಹಿರಿಯ ನಾಗರಿಕರ ವೇತನದ ಮಂಜೂರಾತಿ ಪತ್ರವನ್ನು ಶಾಸಕ ಸಾ.ರಾ.ಮಹೇಶ್ ವಿತರಿಸಿದರು.

ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ತಹಸೀಲ್ದಾರ್ ಎಸ್.ಸಂತೋಷ್, ಇಓ ಹೆಚ್.ಕೆ.ಸತೀಶ್, ಪುರಸಭಾ ಮುಖ್ಯಾಧಿಕಾರಿ ಡಾ.ಜಯಣ್ಣ ಪ್ರೊಬೇಷನರಿ ಎಸಿ ಹರೀಶ್, ಬಿಇಓ ಗಾಯತ್ರಿ, ಟಿಎಸ್‌ಡಬ್ಲ್ಯೂ ಎಸ್.ಎಂ.ಅಶೋಕ್‌ಕುಮಾರ್, ಎಸ್‌ಐ ಚಂದ್ರಹಾಸ್ ಸೇರಿದಂತೆ ಇನ್ನಿತರರಿದ್ದರು.

ಹೊಲಿಗೆ ತರಬೇತಿ ಕೇಂದ್ರ ಉದ್ಘಾಟನೆ



ಮಲ್ಲುಂಡಿ, ಅ.7– ಇಲ್ಲಿಗೆ ಸಮೀಪದ ಹಾಡ್ಯ ಗ್ರಾಮದಲ್ಲಿ ಹೊಲಿಗೆ ತರಬೇತಿ ಕೇಂದ್ರವನ್ನು ಗ್ರಾಪಂ ಅಧ್ಯಕ್ಷೆ ಮಹದೇವಮ್ಮ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಗ್ರಾಮೀಣ ಮಹಿಳೆಯರನ್ನು ಸ್ವಾವಲಂಬಿಗಳಾಗಿಸುವ ನಿಟ್ಟಿನಲ್ಲಿ ನಮ್ಮ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಮಹಿಳೆಯರಿಗಾಗಿ ಉಚಿತವಾಗಿ ಹೊಲಿಗೆ ತರಬೇತಿ ನೀಡಲು ತರಬೇತಿ ಕೇಂದ್ರ ಸ್ಥಾಪಿಸಲಾಗಿದೆ. ಇದನ್ನು ಮಹಿಳೆಯರು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷ ಹರೀಶ್ ಕುಮಾರ್, ಸದಸ್ಯರಾದ ಮಹದೇವಸ್ವಾಮಿ, ಕೃಷ್ಣ, ಸಾಕಮ್ಮ, ನಾಗರಾಜ್, ಮಂಗಳಮ್ಮ, ಪುಟ್ಟೇಗೌಡ, ಸುಂದರ್, ಪಿಡಿಓ ಕರಿಯಪ್ಪ, ಕಾರ್ಯದರ್ಶಿ ನಂಜುಂಡಯ್ಯ ಸೇರಿದಂತೆ ಇತರರಿದ್ದರು.

ಅನುದಾನ ಬಿಡುಗಡೆಯಾದರೂ ಆರಂಭವಾಗದ ಕಾಮಗಾರಿ

ಬೇಸತ್ತ ಗ್ರಾಮಸ್ಥರಿಂದಲೇ ಕನಕ ಭವನ ನಿರ್ಮಾಣಕ್ಕೆ ಭೂಮಿ ಪೂಜೆ

ತಿ.ನರಸೀಪುರ, ಅ.7– ಕನಕ ಭವನ ನಿರ್ಮಾಣ ಕಾಮಗಾರಿಗೆ ಹಣ ಬಿಡುಗಡೆಯಾಗಿ 5 ವರ್ಷ ಕಳೆದರೂ, ಕಾಮಗಾರಿ ಆರಂಭಿಸದ ಶಾಸಕರ ನಡೆಯಿಂದ ಬೇಸತ್ತ ತಾಲೂಕಿನ ಉಕ್ಕಲಗೆರೆ ಗ್ರಾಮಸ್ಥರು ಶುಕ್ರವಾರ ಶಾಸಕರ ಅನುಪಸ್ಥಿತಿಯಲ್ಲಿ, ಪಂಚಾಯ್ತಿ ಅಧ್ಯಕ್ಷರ ಸಮ್ಮುಖದಲ್ಲೇ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

2016–17ನೇ ಸಾಲಿನಲ್ಲಿ ಕನಕ ಭವನ ನಿರ್ಮಾಣ ಕಾಮಗಾರಿಗೆ ಹಣ ಬಿಡುಗಡೆಯಾಗಿದ್ದರೂ ಶಾಸಕರು, ಸಂಬಂಧಿಸಿದ ಅಧಿಕಾರಿಗಳು ಗಮನಹರಿಸದೇ ಕಾಮಗಾರಿ ಭೂಮಿ ಪೂಜೆಗೆ ಕ್ರಮ ಕೈಗೊಳ್ಳದಿದ್ದರಿಂದ ಗ್ರಾಪಂ ಅಧ್ಯಕ್ಷೆ ಶಿವಮ್ಮ ಹಲವು ಮುಖಂಡರ ಸಮ್ಮುಖದಲ್ಲಿ ಭೂಮಿ ಪೂಜೆ ನೆರವೇರಿಸಿದರು.

ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ ಮಾತನಾಡಿ, ಮಾಜಿ ಸಿಎಂ ಸಿದ್ದರಾಮಯ್ಯ ಅವಧಿಯಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಡಾ.ಹೆಚ್.ಸಿ.ಮಹದೇವಪ್ಪ ಗ್ರಾಮಕ್ಕೆ ಗ್ರಾಮ ವಿಕಾಸ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗೆ 1 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿದ್ದರು. ಈ ಪೈಕಿ ಎಸ್‌ಸಿ/ಎಸ್‌ಟಿ ಹಾಗೂ ಇತರೆ ವರ್ಗದವರಿಗೆ ತಲಾ 50 ಲಕ್ಷ ರೂ. ಹಂಚಿಕೆ ಮಾಡಲಾಗಿತ್ತು. ಅಲ್ಲದೇ ಕನಕ ಭವನಕ್ಕೆ ಮಹದೇವಪ್ಪ ವಿಶೇಷ ಆಸಕ್ತಿ ವಹಿಸಿ 23 ಲಕ್ಷ ರೂ. ಜೊತೆಗೆ ಹಿಂದುಳಿದ ವರ್ಗಗಳ ಇಲಾಖೆಯಿಂದ 10 ಲಕ್ಷ ರೂ. ಸೇರಿದಂತೆ ಒಟ್ಟು 33 ಲಕ್ಷ ರೂ. ನೀಡಿದ್ದರು. ಆದರೆ ಈವರೆಗೂ ಹಾಲಿ ಶಾಸಕರು ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸುವ ಗೋಜಿಗೆ ಹೋಗಿಲ್ಲ. ಅನುದಾನ ಬಿಡುಗಡೆಯಾಗಿ 5 ವರ್ಷಗಳಾದರೂ ಅಭಿವೃದ್ಧಿ ಶೂನ್ಯವಾಗಿದ್ದು, ಶಾಸಕ ಅಶ್ವಿನ್ ಕುಮಾರ್ ಪಂಚಾಯ್ತಿ ವ್ಯಾಪ್ತಿಯ ಯಾವುದೇ ಒಂದು ಗ್ರಾಮಕ್ಕೂ ನಯಾ ಪೈಸೆ ಅನುದಾನ ಕೊಟ್ಟಿಲ್ಲ ಎಂದು ದೂರಿದರು. ಹಾಗಾಗಿ ನಾವೇ ಕನಕ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಮಾಡಬೇಕಾಯಿತು. ಸ್ಥಳೀಯ ಶಾಸಕರ ಮೇಲೆ ಗೌರವವಿದೆ. ಈಗಲೂ ಶಾಸಕರು ಮತ್ತೊಮ್ಮೆ ಭೂಮಿ ಪೂಜೆ ಮಾಡಿ ಗ್ರಾಮದ ಅಭಿವೃದ್ಧಿ ಮಾಡಿದಲ್ಲಿ ಅದಕ್ಕೆ ನಮ್ಮ ಸ್ವಾಗತ ಇದೆ ಎಂದರು.



ಹೆಚ್‌ಸಿಎಂ ಕೊಡುಗೆ ಅಪಾರ: ಗ್ರಾಮದ ಅಭಿವೃದ್ಧಿಗೆ ಮಹದೇವಪ್ಪನವರ ಕೊಡುಗೆ ಅಪಾರ. ಮಾಜಿ ಸಚಿವರು ಗ್ರಾಮದ ಅಡ್ಡಹಾಳ ಸೇತುವೆ ನಿರ್ಮಾಣಕ್ಕೆ 18 ಲಕ್ಷ, ಪಂಚಾಯ್ತಿ ನೂತನ ಕಟ್ಟಡಕ್ಕೆ 16 ಲಕ್ಷ, ಕುಳ್ಳನಕೊಪ್ಪಲು–ಉಕ್ಕಲಗೆರೆ–ಬೂದಹಳ್ಳಿ ರಸ್ತೆ ಅಭಿವೃದ್ಧಿ ಪಡಿಸಲು 7.31 ಕೋಟಿ ರೂ. ನೀಡಿದ್ದಾರೆ. ಆದರೆ ಇದನ್ನು ಸಹಿಸದ ಕೆಲವರು ಅನುದಾನ ಬಿಡುಗಡೆ ಮಾಡಿದ್ದು ಹಾಲಿ ಶಾಸಕರು ಎಂದು ಹೇಳುತ್ತಿರುವುದು ಹಾಸ್ಯಾಸ್ಪದವಾಗಿದೆ. ನಿಮ್ಮ ಶಾಸಕರು ಗ್ರಾಮದ ಅಭಿವೃದ್ಧಿಗೆ ಬಿಡುಗಡೆ ಮಾಡಿರುವ ಅನುದಾನದ ಬಗ್ಗೆ ತಿಳಿಸಿ. ಅದನ್ನು ಬಿಟ್ಟು ಬೀದಿಯಲ್ಲಿ ನಿಂತು ಬಾಯಿಗೆ ಬಂದಂತೆ ಮಾತನಾಡುವುದಲ್ಲ ಎಂದು ತಮ್ಮ ರಾಜಕೀಯ ವಿರೋಧಿಗಳ ಆರೋಪಕ್ಕೆ ತಿರುಗೇಟು ನೀಡಿದರು.

ಹೆಗ್ಗೆರೆಯಿಂದ ಕೈಯಂಬಳ್ಳಿವರೆಗಿನ 26 ಕಿಮೀ ಸಿಡಿಎಸ್ ನಾಲೆಯ ಲೈನಿಂಗ್ ಮಾಡಿಸಿದವರು ಯಾರು? ನಂಜಾಪುರ ಏತ ನೀರಾವರಿ ಯೋಜನೆಯಿಂದ 900 ಎಕರೆ ಭೂಮಿಗೆ ನೀರಾವರಿ ವ್ಯವಸ್ಥೆ ಕಲ್ಪಿಸಿದವರು ಯಾರು ಎಂಬುದನ್ನು ಮೊದಲು ತಿಳಿಯಿರಿ. ನಿಮ್ಮ ಶಾಸಕರು ಪಂಚಾಯ್ತಿ ವ್ಯಾಪ್ತಿಗೆ ನಯಾಪೈಸೆ ಹಾಕಿದ್ದರೆ ತೋರಿಸಿ ಎಂದು ಸವಾಲು ಹಾಕಿದರು.

ಈ ವೇಳೆ ಗ್ರಾಪಂ ಉಪಾಧ್ಯಕ್ಷೆ ಮಂಜುಳಾ, ಮಾಜಿ ಸದಸ್ಯ ಎಂ.ರಾಜು, ಸದಸ್ಯರಾದ ರವಿಶಂಕರ್, ಮಹದೇವಮ್ಮ, ಮಹಾದೇವ, ಮಲ್ಲಪ್ಪ, ಪ್ರಭುಸ್ವಾಮಿ, ಡೈರಿ ಅಧ್ಯಕ್ಷ ನಾಗೇಂದ್ರ ನಂಜುಂಡಯ್ಯ, ಮುಖಂಡರಾದ ಅಡುಗೆ ಕಂಟ್ರಾಕ್ಟರ್ ಮಲ್ಲಿಕಾ, ರಾಜಶೇಖರ್, ಶಿವಶಂಕರಪ್ಪ ಮಹಾದೇವಸ್ವಾಮಿ, ಶ್ರೀಕಂಠಸ್ವಾಮಿ, ಮಹೇಶ್, ಮಾಯಿಗಯ್ಯ, ಮಹೇಶ, ರೇವಣ್ಣ, ನಾಗರಾಜು, ಸಿದ್ದರಾಜು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

6 ಮನವೊಲಿಕೆಗೆ ಬಗ್ಗದ ಮುಖಂಡರು

ಶಾಸಕರ ಅನುಪಸ್ಥಿತಿಯಲ್ಲಿ ಭೂಮಿ ಪೂಜೆ ನೆರವೇರಿಸುವ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಿಡಿಓ ಕೃಷ್ಣಪ್ಪ ಹಾಗೂ ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿಗಳು ಶಾಸಕರ ಗಮನಕ್ಕೆ ತರದೇ ಭೂಮಿ ಪೂಜೆ ಮಾಡುವುದು ಸರಿಯಲ್ಲ. ಅಲ್ಲದೇ ನಮ್ಮ ಇಲಾಖೆಯಿಂದಲೂ ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ. ಆದರೆ ನಮ್ಮ ಗಮನಕ್ಕೂ ತರದೇ ನೀವೆ ಗುದ್ದಲಿ ಪೂಜೆಗೆ ಮುಂದಾಗಿರುವುದು ಒಳ್ಳೆಯ ಬೆಳವಣಿಗೆಯಲ್ಲ. ದಯವಿಟ್ಟು ಶಾಸಕರ ಉಪಸ್ಥಿತಿಯಲ್ಲಿ ಕಾಮಗಾರಿ ಪೂಜೆ ಮಾಡಿ ಎಂದು ಮನವೊಲಿಕೆಗೆ ಮುಂದಾದರಾದರೂ, ಅಧಿಕಾರಿಗಳ ಮಾತನ್ನು ಲೆಕ್ಕಿಸದೇ ಗ್ರಾಮಸ್ಥರೆಲ್ಲರೂ (ಕಾಂಗ್ರೆಸ್ ಮುಖಂಡರು) ಸೇರಿ ಭೂಮಿ ಪೂಜೆ ನೆರವೇರಿಸಿದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಪೊನ್ನಿಯನ್ ಸೆಲ್ವನ್–1(ತ):** ಬೆ.10.05ಕ್ಕೆ, ರಾ.7.05ಕ್ಕೆ, **ಕಾಂತಾರ (ಕ):** ಮ.1.15ಕ್ಕೆ, ಸಂ.4.10ಕ್ಕೆ, ರಾ.10.15ಕ್ಕೆ
ಸ್ಕ್ರೀನ್ 2	**ಗುರುಶಿಷ್ಯರು (ಕ):** ಸಂ.4ಕ್ಕೆ, **ಗುಡ್‌ಬೈ (ಹಿಂ):** ಮ.1.25ಕ್ಕೆ, ರಾ.7.10ಕ್ಕೆ, **ವಿಕ್ರಂ ವೇದಾ (ಹಿಂ):** ಸಂ.4.15ಕ್ಕೆ, **ರೋರ್ಸ್ಚಾಚ್ (ಮ):** ರಾ.10.05ಕ್ಕೆ.
ಸ್ಕ್ರೀನ್ 3	**ಗುಡ್‌ಬೈ (ಹಿಂ):** ಬೆ.10ಕ್ಕೆ, **ಸ್ವಾತಿ ಮುತ್ಯಂ (ತೆ):** ಮ.12.50ಕ್ಕೆ, **ಟಿಕೆಟ್ ಆಫ್ ಪ್ಯಾರಡೈಸ್ (ಇಂ):** ಮ.3.15ಕ್ಕೆ, ಸಂ.5.20ಕ್ಕೆ, **ದಿ ಗೋಸ್ಟ್ (ತೆ):** ರಾ.7.25ಕ್ಕೆ, **ಗಾಡ್‌ಫಾದರ್ (ತೆ):** ರಾ.10.10ಕ್ಕೆ.
ಸ್ಕ್ರೀನ್ 4	**ಕಾಂತಾರ (ಕ):** ಬೆ.10.10ಕ್ಕೆ, ಮ.1.05ಕ್ಕೆ, ರಾ.7.10ಕ್ಕೆ, **ಪೊನ್ನಿಯನ್ ಸೆಲ್ವನ್–1(ತ):** ಸಂ.4ಕ್ಕೆ, **ತೋತಾಪುರಿ –1(ಕ):** ರಾ.10.05ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	**ಕಾಂತಾರ (ಕ):** ಬೆ.9.15ಕ್ಕೆ, ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	**ಕಾಂತಾರ (ಕ):** ಬೆ.10.10ಕ್ಕೆ, ಮ.1.15ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	**ಗಾಡ್‌ಫಾದರ್ (ತೆ):** ಬೆ.9.35ಕ್ಕೆ, ಮ.3.45ಕ್ಕೆ, ರಾ.10.20ಕ್ಕೆ, **ದಿ ಗೋಸ್ಟ್ (ತೆ):** ಮ.12.50ಕ್ಕೆ, **ಗುರುಶಿಷ್ಯರು (ಕ):** ರಾ.7ಕ್ಕೆ.
ಸ್ಕ್ರೀನ್ 4	**ಪೊನ್ನಿಯನ್ ಸೆಲ್ವನ್ –1(ತ):** ಬೆ.9.30ಕ್ಕೆ, ಮ.3.35ಕ್ಕೆ, ರಾ.10.10ಕ್ಕೆ, **ತೋತಾಪುರಿ –1(ಕ):** ಮ.12.45ಕ್ಕೆ, **ವಿಕ್ರಮ್ ವೇದಾ (ಹಿಂ):** ಸಂ.6.55ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ದಿ ಚೆಕ್ ಮೇಟ್ (ಕ):** ಬೆ.10ಕ್ಕೆ, **ಗುರುಶಿಷ್ಯರು (ಕ):** ಮ.12.50ಕ್ಕೆ, **ಗಾಡ್ ಫಾದರ್ (ತೆ):** ಸಂ.4ಕ್ಕೆ, ರಾ.9.50ಕ್ಕೆ, **ದಿ ಗೋಸ್ಟ್ (ತೆ):** ರಾ.7.05ಕ್ಕೆ
ಸ್ಕ್ರೀನ್ 2	**ಕಾಂತಾರ (ಕ):** ಬೆ.9.55ಕ್ಕೆ, ಮ.12.55ಕ್ಕೆ, ಮ.3.55ಕ್ಕೆ, ಸಂ.6.55ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	**ಕಾಂತಾರ (ಕ):** ಬೆ.11.40ಕ್ಕೆ, ಮ.3.10ಕ್ಕೆ, **ಪೊನ್ನಿಯನ್ ಸೆಲ್ವನ್–1 (ತ):** ಸಂ.6.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**ಗುರುಶಿಷ್ಯರು (ಕ):** ಬೆ.10.45ಕ್ಕೆ, **ದಿ ಗೋಸ್ಟ್ (ತೆ):** ಮ.3.45ಕ್ಕೆ, **ವಿಕ್ರಮ್ ವೇದಾ (ಹಿಂ):** ಸಂ.6.30ಕ್ಕೆ, **ಕಾಂತಾರ (ಕ):** ರಾ.9.40ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.8.35ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, **ತೋತಾಪುರಿ 1(ಕ):** ಬೆ.10.30ಕ್ಕೆ, ಸಂ.4.25ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, **ಗುರು ಶಿಷ್ಯರು (ಕ):** ಬೆ.10.15ಕ್ಕೆ, **ಬ್ರಹ್ಮಾಸ್ತ್ರ (3ಡಿ)(ಹಿಂ):** ಬೆ.11.30ಕ್ಕೆ, ಸಂ.6.30ಕ್ಕೆ, ರಾ.10ಕ್ಕೆ, **ಪೊನ್ನಿಯನ್ ಸೆಲ್ವನ್–1(ತ):** ಬೆ.8ಕ್ಕೆ, ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ನಾನೇ ವರುವೆನ್ (ತ):** ಬೆ.10.50ಕ್ಕೆ, ಮ.1.30ಕ್ಕೆ, ರಾ.7.35ಕ್ಕೆ, **ಅವತಾರ್ ರೀ ರಿಲೀಸ್ (ಇಂ):** ಮ.3ಕ್ಕೆ, **ಡೋಂಟ್ ವರಿ ಡಾರ್ಲಿಂಗ್ (ಇಂ):** ಸಂ.4.10ಕ್ಕೆ, **ವಿಕ್ರಮ್ ವೇದ (ಹಿಂ):** ಬೆ.9ಕ್ಕೆ, ಬೆ.11.45ಕ್ಕೆ, ಮ.3.15ಕ್ಕೆ, ಸಂ.6.45ಕ್ಕೆ, ರಾ.10.15ಕ್ಕೆ, **ಚುಪ್ (ಹಿಂ):** ಮ.1.25ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗಾಡ್‌ಫಾದರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪಿಎಸ್–1 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗುರು ಶಿಷ್ಯರು (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪುನ್ನಿಯಿನ್ ಸೆಲ್ವನ್ ಭಾಗ–1(ತ)	4 ಪ್ರದರ್ಶನಗಳು
ಸಂಗಂ	
ತೋತಾಪುರಿ (ಕ)	4 ಪ್ರದರ್ಶನಗಳು
ಲಿಡೋ	
ಗಾಡ್‌ಫಾದರ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಾಡ್‌ಫಾದರ್ (ಹಿ)	4 ಪ್ರದರ್ಶನಗಳು
ಪ್ರಭಾ	
ಘೋಸ್ಟ್ (ತೆ)	4 ಪ್ರದರ್ಶನಗಳು

ಭೇರ್ಯ ಗ್ರಾಪಂಗೆ ಜ್ಯೋತಿ ನೂತನ ಅಧ್ಯಕ್ಷೆ




ಭೇರ್ಯ, ಅ.7– ಭೇರ್ಯ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಜೆಡಿಎಸ್ ಬೆಂಬಲಿತ ಸದಸ್ಯೆ ಜ್ಯೋತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ತಾಯಮ್ಮ ಅವರಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಡೆಯಿತು. ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಜ್ಯೋತಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸಿದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪಶು ಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಡಾ.ಮಂಜುನಾಥ್ ಪ್ರಕಟಿಸಿದರು. ಪಿಡಿಓ ಕೆ.ಎ.ಮಂಜುನಾಥ್ ಇದ್ದರು.

ನೂತನ ಅಧ್ಯಕ್ಷೆ ಜ್ಯೋತಿ ಮಾತನಾಡಿದರು. ನೂತನ ಅಧ್ಯಕ್ಷರನ್ನು ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಅಭಿನಂದಿಸಿದರು. ಈ ವೇಳೆ ಉಪಾಧ್ಯಕ್ಷ ಬಿ.ಕೆ.ಶಿವಕುಮಾರ್, ಸದಸ್ಯರಾದ ತಾಯಮ್ಮ, ಮೊಹಸಿನ್ ತಾಜ್, ಶಾಂತಮ್ಮ, ರೇಖಾ, ರೂಪ, ಬಿ.ಎಲ್.ರಾಜಶೇಖರ, ಬಿ.ಕೆ.ಕುಮಾರ್, ಬಿ.ಬಿ.ಶಿವಣ್ಣ, ಕೃಷ್ಣೇಗೌಡ, ಬಿ.ಪಿ.ಪ್ರಕಾಶ್, ಸಾದಿಕ್ ಖಾನ್, ಗ್ರಾಪಂ ಮಾಜಿ ಅಧ್ಯಕ್ಷರಾದ ಅನೀಫ್ ಗೌಡ, ಶಿವಶಂಕರ್, ಜೆಡಿಎಸ್ ಮುಖಂಡರಾದ ಡೈರಿ ಲೋಕೇಶ್, ತನು, ಚಿದಂಬರ ನಾಯಕ, ಯೋಗೇಶ್, ಮಹೇಶ್, ಕುಮಾರ್, ಶಿವಣ್ಣ ಸೇರಿದಂತೆ ಇತರರಿದ್ದರು.

ಟಿ.ಎನ್.ನಾಗರಾಜಮೂರ್ತಿ ನಿಧನ



ತಿ.ನರಸೀಪುರ ಅ.7– ಪಟ್ಟಣದ ವಿದ್ಯೋದಯ ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಟಿ.ಎನ್.ನಾಗರಾಜಮೂರ್ತಿ(80) ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿನೋದ್



ಹೆಚ್.ಡಿ.ಕೋಟೆ, ಅ.7– ಕಾಂಗ್ರೆಸ್ ಯುವ ಮುಖಂಡ, ಪಟ್ಟಣದ ನಿವಾಸಿ ವಿನೋದ್ (27) ಶುಕ್ರವಾರ ನಿಧನರಾದರು. ಮೃತರು ತಂದೆ ಚಾ.ಸೋಮಣ್ಣ, ತಾಯಿ, ತಂಗಿ, ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

FOR HOME INTERIORS / KITCHENS
AURA PLY CLUB
PLY FOR LYF
@ FACTORY DEPOT RATES
25 YEARS OF WARRANTY
BORER / WATERPROOF
9901291267/9845426862



ಮೈಸೂರು ತಾಲ್ಲೂಕು ಸಿದ್ದಲಿಂಗಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ
ಶ್ರೀ ಸಿ.ನಾರಾಯಣಪ್ಪ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು:
ಕೆ.ಡಿ.ಉಮೇಶ
ಕಾಮನಕೆರೆ ಹುಂಡಿ

ವೈದ್ಯರ ಸಮುದಾಯ ಭವನ
ಆಲನಹಳ್ಳಿ, ಟಿ.ನರಸೀಪುರ ರಸ್ತೆ, ಮೈಸೂರು–28
ಸಭೆ, ಸಮಾರಂಭ ನಡೆಸಲು ಸುಸಜ್ಜಿತವಾದ ಸಭಾಂಗಣ, ಜನರೇಟರ್ ಹಾಗೂ ವಾಹನ ನಿಲುಗಡೆ ಸೌಲಭ್ಯವಿರುವ ಸಮುದಾಯ ಭವನ ದೊರೆಯುತ್ತದೆ. ಸಂಪರ್ಕಿಸಿ:
Off: 94495-61722 / Mob: 96111-72148

NISSAN
ಹೊನ್ನಸಿರಿ ನಿಸ್ಸಾನ್ ಶಾಖೆ @ ಹಿನಕಲ್
ಹೊಸ ನಿಸ್ಸಾನ್ ಮ್ಯಾಗ್ನೈಟ್ ಖರೀದಿಸಿ ತ್ವರೆ ಮಾಡಿ
ವಿಶೇಷ ವೈಶಿಷ್ಟ್ಯಗಳೊಂದಿಗೆ
ಇಂದೇ ಬುಕ್ ಮಾಡಿ
ಪ್ರಾರಂಭದ ಬೆಲೆ ರೂ. 5.97 ಲಕ್ಷ* ಮಾತ್ರ.
ನಿಮ್ಮ ಆರ್‌ಟಿಸಿ ಪ್ರತಿ ತನ್ನಿರಿ ಮತ್ತು ಅತೀ ಕಡಿಮೆ ಡೌನ್ ಪೇಮೆಂಟ್ ಸೌಲಭ್ಯ ಪಡೆಯಿರಿ ರೂ. 1.5 ಲಕ್ಷ* ಮಾತ್ರ



ಹೊನ್ನಸಿರಿ ಮೋಟಾರ್ಸ್ ಪ್ರೈ.ಲಿ.
ಹುಣಸೂರು ಮುಖ್ಯರಸ್ತೆ, ಹಿನಕಲ್, ಮೈಸೂರು-570017
ಸಂಪರ್ಕಿಸಿ 9686833766 / 9900065526

43 ಮೈಸೂರು ಮಿತ್ರ 43
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

NC SKY VILLAS
30x40 Duplex, 3 BHK
5 kms from Bogadi Ring Road. Rs 57.75 Lakh onwards. Fully Developed
Electric Scooter Free
Call: 90714 01234

SITE FOR SALE
- Bhima Kritika Lake View Layout
- 30x40 & 30x50
- East & West Facing
- Off Nanjangud Road
- Near APMC

contact : 9035379769

ನಿವೇಶನ ಮಾರಾಟಕ್ಕಿದೆ
27x36 ಅಡಿಗಳು, ದಕ್ಷಿಣ ದಿಕ್ಕು ನಗರ ಸಭೆ ಖಾತೆ, PES ಬಡಾವಣೆ, ಮಂಡ್ಯ.
Mob: 9113673455

Reddy's SPICE ROUTE
Pure veg- Andhra style
Opening in Mysuru on 9.10.2022 (Sunday) 7.00am onwards
■ Breakfast ■ Lunch ■ Snacks ■ Dinner
#2955/1, 5th main, V.V. Mohalla, Mysuru-570 002. Mob: 9148797279

FARM SITES
5 minutes from Nanjangud Circle, 15 minutes from Airport, on Gundlupete road with all amenities and Ready for Construction. Each Site Rs. 5800/- sft
Call: 76767 71396

ಬೇಕಾಗಿದ್ದಾರೆ
- Front Office executives
- House Keeping supervisor

ನಗರದ ಹೃದಯ ಭಾಗದಲ್ಲಿರುವ ಹೆಸರಾಂತ ಹೋಟೇಲ್‌ವೊಂದಕ್ಕೆ. ಊಟ ವಸತಿ ಹಾಗೂ ಆಕರ್ಷಕ ವೇತನವಿರುತ್ತದೆ.
8310000936, 8618647910

43 ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಇಂದೇ ಬನ್ನಿ ಏಷ್ಯಾದ ಅತಿದೊಡ್ಡ & ಉತ್ತಮ
ವರ್ಲ್ಡ್ ಸರ್ಕಸ್ ಕಾರ್ನಿವಲ್
ಇಥಿಯೋಪಿಯ ಮತ್ತು ರಷ್ಯನ್ ಕಲಾವಿದರು
ಗ್ರೇಟ್ ಬಾಂಬೇ ಸರ್ಕಸ್



ದಿನಾ 3 ಪ್ರದರ್ಶನಗಳು 1, 4 & 7PM ಟಿಕೆಟ್: 100/-, 200/-, 300/-, 400/-
ಕಾರಂಜಿಕೆರೆ, ಮೃಗಾಲಯದ ಹಿಂಭಾಗ, ನಜರ್‌ಬಾದ್, ಮೈಸೂರು
ಅಡ್ವಾನ್ಸ್ ಬುಕಿಂಗ್ ರೂ. 300, 400
8075966829 / 8660306184 / 9448054151

ಮೈಸೂರು ನಿರೀಕ್ಷೆ ಕೇಂದ್ರ AG
ಜೀವಿಸು ≫ ಪ್ರೀತಿಸು ≫ ನಂಬು
17 ವರ್ಷಗಳ ದೇವರ ಕೃಪೆಯನ್ನು ಸಭೆಯಾಗಿ ಮೈಸೂರು ಪ್ರಾಂತ್ಯಕ್ಕೆ ಸೇವೆ ಸಲ್ಲಿಸುವುದನ್ನು ಆಚರಿಸುತ್ತಿದ್ದೇವೆ.
ಬನ್ನಿ ನಿರೀಕ್ಷೆಯನ್ನು ಕಂಡುಕೊಳ್ಳಿ
ಭಾನುವಾರದ ಆರಾಧನೆ :
ಕನ್ನಡ : ಬೆಳಗ್ಗೆ 7:00 ಗಂಟೆಗೆ ಮತ್ತು 11:00 ಗಂಟೆಗೆ
ಹಿಂದಿ : ಬೆಳಗ್ಗೆ 7:00 ಗಂಟೆಗೆ
ಇಂಗ್ಲೀಷ್ : ಬೆಳಗ್ಗೆ 9:00 ಗಂಟೆಗೆ ತಮಿಳು : ಬೆಳಗ್ಗೆ 9:00 ಗಂಟೆಗೆ
ತೆಲುಗು : ಬೆಳಗ್ಗೆ 11:00 ಗಂಟೆಗೆ
ಸ್ಥಳ : ಗ್ರೇಸ್ ಶಾಲೆ, ಮಹದೇಶ್ವರ ಬಡಾವಣೆ,
(ಸ್ಯಾನಿಟೋರಿಯಂ ಹಿಂಭಾಗ) ಕುಂಬಾರಕೊಪ್ಪಲು, ಕಾಂಟೂರ್ ರೋಡ್ ಪಕ್ಕ, ತ್ರಿನೇತ್ರ ಸರ್ಕಲ್ ಹತ್ತಿರ, ಮೈಸೂರು–570 016
ದೂರವಾಣಿ : **98866 02161, 94486 33362**

BHAVAN'S PUBLICATION
EXHIBITION - CUM SALE OF BOOKS WITH DISCOUNT UPTO 75%
TODAY LAST DAY
[8th October 2022]
BOOKS FOR BOOK LOVERS
- INDIAN CULTURE • HISTORY
- CLASSICS • EPICS • BIOGRAPHIES

New Editions at 50% Discount
- Mahabharata & Ramayana
- History and Culture of India
- Krishnaavtar
- Messages of Upanishads and many others
- Books authored by Kulapathi K.M. Munshi
- Free CDs, Cassettes, Journals etc.,

ENTRY FREE
Venue: BHARATIYA VIDYA BHAVAN,
CA-14, 1st Cross, 1st Stage, Vijayanagar, Mysuru-570 017
(Near Yoga Narasimha Swamy Temple)
Ph: 0821-2412141 / 2416106. Email: bvbmysore@gmail.com

Cummins
WANTED
MNC DIESEL ENGINE AUTHORISED DEALERSHIP IN MYSORE REQUIRES
1. Sales Executive / Marketing Representative
2. Service Engineers - Diploma in Electrical / Mechanical / Automobile candidates
WALK IN INTERVIEW
Maniranjan Diesel Sales & Service (P) Ltd.,
#34-B, Industrial Area, Bannimantap A-Layout, Mysore-570015
Contact : 9739739136

BOOKINGS OPEN FOR
Construction of Brand New Architecture Designed Houses
MUDA APPROVED
20'x40 - 30 Lakhs
30'x40' - 44.99 Lakhs
Near St. Joseph's Central School, Hunsur Road, Mysore.
9740767576, 8884001233

MYSORE UNIVERSITY SCHOOL OF ENGINEERING
Manasagangotri, Mysuru-570006
(Approved by All India Council for Technical Education, New Delhi)
FACULTY REQUIRED
Applications are invited for Temporary Full Time Faculty and Laboratory Teaching Assistant in the following Engineering Disciplines.
- Artificial Intelligence and Machine Learning
- Artificial Intelligence (AI) and Data Science
- Civil Environmental Engineering
- Computer Science and Design
- Biomedical and Robotic Engineering
- Department of Mathematics

Qualification and pay scale as per the University of Mysore norms. The applications should be submitted online within seven days of advertisement. Website address: https://soeuom.com/career/
For further details you may refer the notification on the Website: www.soeuom.com
DIPR/DDMYS/MCA/2022-23 Sd/- Registrar

ಬೇಕಾಗಿದ್ದಾರೆ
ನಮ್ಮ ಹೊಸ ಪೆಟ್ರೋಲ್ ಬಂಕ್ ಸಿದ್ಧಾರ್ಥನಗರ ಹೊಸ ಡಿ.ಸಿ.ಕಛೇರಿ ಹತ್ತಿರ, ಟೆರೆಸಿಯನ್ ಕಾಲೇಜು ಎದುರು ಕೆಲಸ ನಿರ್ವಹಿಸಲು ಬೇಕಾಗಿದ್ದಾರೆ. ಆಸಕ್ತಿವುಳ್ಳ ಯುವಕರು /ಯುವತಿಯರು ಕೂಡಲೇ ಸಂಪರ್ಕಿಸಿ
9611022435-9886209339
ಭೇಟಿ ಮಾಡುವ ಸಮಯ: ಬೆಳಗ್ಗೆ 10 ರಿಂದ 1 ಗಂಟೆವರೆಗೆ

JOS ALUKKAS
A TRADITION OF FINE JEWELLERY
ಜೋಸ್ ಆಲುಕ್ಕಾಸ್‌ನ 58 ವರ್ಷಗಳ ಆಚರಣೆಗಳು.
ರೂ.5 ಕೋಟಿ ಮೌಲ್ಯದ ಉಡುಗೊರೆಗಳು.
ಪ್ರತಿ ಖರೀದಿಗೂ ಉಡುಗೊರೆಗಳು. ಎಲ್ಲರಿಗೂ ಉಡುಗೊರೆಗಳು.
58 ವರ್ಷಗಳು. ನಾವು ಬಹಳ ದೂರ ಸಾಗಿ ಬಂದಿದ್ದೇವೆ. ಮತ್ತು ಅದು ನಿಮ್ಮಿಂದ ಮಾತ್ರ ಸಾಧ್ಯವಾಗಿದೆ. ಈ ವಿಶೇಷ ಸಂದರ್ಭವನ್ನು ನಾವು ಆಚರಿಸುತ್ತಿರುವಾಗ, ನೀವು ನಮ್ಮೊಂದಿಗೆ ಸೇರಬೇಕೆಂದು ನಾವು ಬಯಸುತ್ತೇವೆ. ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಉಡುಗೊರೆಗಳು ಕಾಯುತ್ತಿವೆ.



58 ವರ್ಷಗಳ ಸಂಭ್ರಮದ ಆಚರಣೆಯ ವಿಶೇಷ ಆಫರ್
- ವಜ್ರಗಳ ಮೇಲೆ 20% ರಿಯಾಯಿತಿ
- ಮೇಕಿಂಗ್ ಚಾರ್ಜಸ್ 4.99% ರಿಂದ ಪ್ರಾರಂಭ
- ರೂ. 5 ಕೋಟಿ ಮೌಲ್ಯದ ಉಡುಗೊರೆಗಳು
- ವಿಶೇಷ ವಜ್ರದ ನೆಕ್ಲೇಸ್‌ಗಳು ರೂ.1,49,000 ರಿಂದ ಪ್ರಾರಂಭ
- ಎಕ್ಸ್‌ಚೇಂಜ್ ಆಫರ್ ನಿಮ್ಮ ಹಳೆಯ ಚಿನ್ನದ ಆಭರಣಗಳನ್ನು ಹೊಸ ಆಭರಣಗಳಿಗೆ ಎಕ್ಸ್‌ಚೇಂಜ್ ಮಾಡಿಕೊಳ್ಳಿ ಹೆಚ್ಚಿನ ಲಾಭಗಳೊಂದಿಗೆ

*T&C Apply.
ಬೆಳ್ಳಿ ಆಭರಣಗಳು ಮತ್ತು ವಸ್ತುಗಳ ದೊಡ್ಡ ಸಂಗ್ರಹ
Buy digital gold from josalukkasdigigold.com
OPP. WOODLANDS THEATRE, B.N. ROAD, MYSURU. PH: 0821-2441012
ಜೋಸ್ ಆಲುಕ್ಕಾಸ್ A TRADITION OF FINE JEWELLERY
josalukkasonline.com /josalukkas OPEN ON ALL DAYS I CAR PARKING FACILITY

ಸಾರ್ವಜನಿಕ ಪ್ರಕಟಣೆ
ಮಧೂಸ್ ಟೈರ್ಸ್
(Since 1951)
ಗೋಪಾಲಗೌಡ ಆಸ್ಪತ್ರೆ / ನಜರ್‌ಬಾದ್‌ನಲ್ಲಿ ನಮ್ಮ ಯಾವುದೇ ಶಾಖೆ (Branch) ಇರುವುದಿಲ್ಲ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ ಆಸ್ಪತ್ರೆ ಆವರಣ, ನಜರಾಬಾದ್, ಮೈಸೂರು–10.
ಇಮೇಲ್:khsdrp.divmys@gmail.com ದೂರವಾಣಿ ಸಂಖ್ಯೆ:0821-2449772
ಸಂಖ್ಯೆ:ಆಕುಕ/ಇಂ.ವಿ/ಕಾ.ಅ/ಮೈ/ಸಇ–3/ಟೆಂಡರ್–47–2ನೇ ಕರೆ/2022–23 ದಿನಾಂಕ: 07.10.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ಇವರು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ಸಿವಿಲ್ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿ ವಿವರಗಳು ಈ ಕೆಳಕಂಡಂತಿವೆ. 2 ತಿಂಗಳು (ಮಳೆಗಾಲ ಸೇರಿದಂತೆ).
ಕಾಮಗಾರಿಯ ಹೆಸರು: ಕ್ರಸಂ. 1. ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು ಮಟ್ಟದ ಆಸ್ಪತ್ರೆಯ ಅವಶ್ಯಕ ದುರಸ್ಥಿ ಕಾಮಗಾರಿ (Indent–4078), ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 10.00, ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ): 0.13, ವರ್ಗ: ಎಸ್.ಟಿ, ಗುತ್ತಿಗೆದಾರರ ಅರ್ಹತೆ: ನಾಲ್ಕನೇ ದರ್ಜೆ & ಮೇಲ್ಪಟ್ಟು, **ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು:** 1. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : **20.10.2022 ಸಂಜೆ 16.00 ಘಂಟೆಯವರೆಗೆ.** 2. ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **21.10.2022 ಸಂಜೆ 16.10 ಘಂಟೆಗೆ. ಸೂಚನೆ:** ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (**www.eproc.karnataka.gov.in**) ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು,
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು
DIPR/MYS/KAVITA/545/2022-23